202178

UNIVERSAL LIBRARY
OU_202178
UNIVERSAL LIBRARY

ಸಚಿತ್ರ

# ಬಾಲಭಾಗವತ

ಅಥವಾ

## ಭಾಗವತದೊಳಗಿನ ಕಥೆಗಳು.

( ಸುಧಾರಿಸಿ ಬೆಳೆಸಿದ ೨ನೇ ಆವೃತ್ತಿ )


ಲೇಖಕ ಮತ್ತು ಪ್ರಕಾಶಕ:—

ಗ. ಹು. ಹೊನ್ನಾಪುರಮಠ

ವಕೀಲ, ಧಾರವಾಡ.



೧೯೨೯ ಇಸವಿ.

ಬೆಲೆ ೮ ಆಣೆ.

# ೧ನೇ ಆವೃತ್ತಿಯ ಪ್ರಸ್ತಾವನೆ.

ನಾನು ಈ ಮೊದಲು ಬಾಲಭಾರತ ಮತ್ತು ಬಾಲರಾಮಾಯಣ ಇವೆ ರಡು ಚಿಕ್ಕ ಪುಸ್ತಕಗಳನ್ನು ರಚಿಸಿ ಅವುಗಳನ್ನು ಮುದ್ರಿಸಿ ಪ್ರಸಿದ್ಧಮಾಡಿರು ತ್ತೇನಷ್ಟೇ. ಆದರೆ ಈಗ ನನಗೆ ಬಾಲಭಾಗವತವನ್ನು ರಚಿಸಿ ಮುದ್ರಿಸಲಿಕ್ಕೆ ಒಬ್ಬಿಬ್ಬ ಮಿತ್ರರ ಕಡೆಯಿಂದ ಸೂಚನೆಯು ಒಂದ ಪ್ರಕಾರ ನಾನು ಅದನ್ನು ಈಗ ರಚಿಸಿ ಮುದ್ರಣಮಾಡಿ ಕನ್ನಡ ವಾಙ್ಮಯಕ್ಕೆ ಅರ್ಪಿಸಿರುತ್ತೇನೆ. ರಾಮಾ ಯಣ ಮತ್ತು ಮಹಾಭಾರತಗಳಂತೆಯೇ ಭಾಗವತವು ಶ್ರೇಷ್ಠವಾದ ಯೋ ಗ್ಯತೆಯುಳ್ಳದ್ದು ಇರುತ್ತದೆ. ಮಹಾಭಾರತವು ಇತಿಹಾಸವೆಂತಲೂ, ರಾಮಾ ಯಣವು ಕಥೆಯೆಂತಲೂ, ಭಾಗವತವು ಪುರಾಣವೆಂತಲೂ ಕರೆಯಲ್ಪಡುತ್ತವೆ. ಮಹಾಭಾರತ ಮತ್ತು ರಾಮಾಯಣ ಇವೆರಡು ಹೇಗೆ ಜ್ಞಾನಬೋಧಕ ಮತ್ತು ನೀತಿಬೋಧಕವಿರುತ್ತವೋ ಹಾಗೆ ಈ ಭಾಗವತ ಪುರಾಣವಾದರೂ ಇರುವದು. ಮುಖ್ಯ ಪುರಾಣಗಳು ಹದಿನೆಂಟು ಇರುತ್ತಿದ್ದು ಅವುಗಳಲ್ಲಿ ಈ ಭಾಗವತವು ಒಂದಾಗಿರುವದು. ಭಾಗವತ ಮೊದಲಾದ ಯಾವತ್ತು ಪುರಾಣ ಗಳನ್ನು ಶ್ರೀ ವೇದವ್ಯಾಸರು ಬರೆದರು. ಭಾಗವತದಲ್ಲಿ ಶ್ರೀ ಭಗವಂತನ ಭಕ್ತಿಯನ್ನು ಹೇಗೆ ಮಾಡಬೇಕೆಂಬುವದನ್ನು ಹೇಳಿರುತ್ತಿದ್ದು ಅದರೊ ಳಗೆ ಪ್ರಹ್ಲಾದ, ಧ್ರುವ, ಅಂಬರೀಷ ಮೊದಲಾದ ಭಗವದ್ಭಕ್ತರ ರಸಭರಿತ ಮತ್ತು ಮನೋಹ್ಲಾದಕ ಕಥೆಗಳನ್ನು ಹೇಳಿರುವದರಿಂದ ಈ ಗ್ರಂಥಕ್ಕೆ ಭಾಗವತವೆಂಬ ಹೆಸರು ಬಂದಿರುತ್ತದೆ. ಇದಲ್ಲದೆ ಇದರಲ್ಲಿ ಭಗವಾನ್ ಶ್ರೀಕೃಷ್ಣ ಪರಮಾತ್ಮನ ಚರಿತ್ರವು ಅವನ ಬಾಲ್ಯದಿಂದ ಆರಂಭ ಮಾಡಿ ಕೊಂಡು ಅವನ ಅವತಾರ ಸಮಾಪ್ತಿಯವರೆಗೆ ವಿಸ್ತೃತ ರೀತಿಯಿಂದ ವಿವ ರಿಸಲ್ಪಟ್ಟಿರುತ್ತದೆ.

ಭಾಗವತ ಗ್ರಂಥವು ಬಹಳ ದೊಡ್ಡದಿರುತ್ತದೆ. ರಾಮಾಯಣದೊಳಗೆ ೭ ದೊಡ್ಡ ಕಾಂಡಗಳು ಅಥವಾ ಮಹಾಭಾರತದೊಳಗೆ ೧೮ ದೊಡ್ಡ ಪರ್ವಗಳು ಹೇಗೆ ಇರುತ್ತವೋ ಹಾಗೆ ಭಾಗವತದೊಳಗೆ ೧೨ ದೊಡ್ಡ ಸ್ಕಂಧಗಳು ಅಂದರೆ ಭಾಗಗಳು ಇರುವವು. ಈ ಪ್ರತಿಯೊಂದು ಸ್ಕಂಧಕ್ಕೆ ಒಳಭಾಗಗಳು ಇರುತ್ತಿ

ದ್ದು ಆ ಒಳಭಾಗಕ್ಕೆ ಅಧ್ಯಾಯವೆನ್ನುತ್ತಾರೆ. ಭಾಗವತದಲ್ಲಿ ಇಂಥ ಅಧ್ಯಾಯಗಳು ಒಟ್ಟಿಗೆ **೩೩೫** ಇರುವವು.

ಇಂಥ ಮಹತ್ವವುಳ್ಳ ಭಾಗವತದ ಸಂಕ್ಷಿಪ್ತ ಕಥೆಗಳು ಇತರ ಭಾಷೆಯಲ್ಲಿ ಇರುತ್ತಿದ್ದು ನಮ್ಮ ಕನ್ನಡ ಭಾಷೆಯಲ್ಲಿ ಮಾತ್ರ ಇನ್ನೂವರೆಗೆ ಇದ್ದಿಲ್ಲ. ಆದುದರಿಂದ ಈ ಕೊರತೆಯನ್ನು ದೂರಪಡಿಸಲಿಕ್ಕೆ ನಾನು ಈ ಅಲ್ಪ ಪ್ರಯತ್ನವನ್ನು ಮಾಡಿರುತ್ತೇನೆ. ಇದನ್ನು ನನ್ನ ಕನ್ನಡ ಬಂಧುಭಗಿನಿಯರು ಓದಿ ಲಾಭಮಾಡಿಕೊಳ್ಳಲಿಕ್ಕೆ ತಪ್ಪಲಿಕ್ಕಿಲ್ಲವೆಂದು ನಾನು ಪೂರ್ಣವಾಗಿ ನಂಬುತ್ತೇನೆ.

| | |
|---|---|
| **ಧಾರವಾಡ** | **ಗ. ಹು. ಹೊನ್ನಾಪುರಮಠ** |
| ತಾ. ೫ನೇ ಮಾರ್ಚ ೧೯೨೩ ಇಸ್ವಿ. | ಗ್ರಂಥಕರ್ತ. |

---

# ೨ನೇ ಆವೃತ್ತಿಯ ಪ್ರಸ್ತಾವನೆ.

೧ನೇ ಆವೃತ್ತಿಯ ಪ್ರತಿಗಳು ತೀರಿ ಹೋದುದರಿಂದ ನಾನು ಈಗ ೨ನೇ ಆವೃತ್ತಿಯನ್ನು ಮುದ್ರಿಸಿರುತ್ತೇನೆ. ೧ನೇ ಆವೃತ್ತಿಯಲ್ಲಿದ್ದುದನ್ನೇ ನಾನು ಈ ೨ನೇ ಆವೃತ್ತಿಯಲ್ಲಿ ಇರಿಸಿದ್ದು ಭಾಷೆಯ ಸಂಬಂಧವಾಗಿ ನನಗೆ ಅಲ್ಲಲ್ಲಿ ಕಂಡುಬಂದ ಕೆಲಕೆಲವು ದೋಷಗಳನ್ನು ಮಾತ್ರ ತಿದ್ದಿರುತ್ತೇನೆ. ಈ ಪುಸ್ತಕಕ್ಕೆ ಸುಹೃದಯರಾದ ನನ್ನ ಕನ್ನಡ ಬಂಧುಭಗಿನಿಯರು ಯೋಗ್ಯ ರೀತಿಯಿಂದ ಆಶ್ರಯವನ್ನು ಕೊಡುವರೆಂದು ಹಾರೈಸುತ್ತೇನೆ.

| | |
|---|---|
| **ಧಾರವಾಡ** | **ಗ. ಹು. ಹೊನ್ನಾಪುರಮಠ** |
| ತಾ. ೮ — ೪ — ೧೯೨೯ ಇಸ್ವಿ. | ಗ್ರಂಥಕರ್ತ. |

---

# ವಿಷಯಾನುಕ್ರಮಣಿಕೆ.


| ವಿಷಯಗಳು. | ಪುಟ. |
|---|---|
| ೧ ಕಲಹಪ್ರಿಯ ನಾರದನು. ... ... | ೧—೪ |
| ೨ ಪರೀಕ್ಷಿತರಾಜನ ಚಮತ್ಕಾರಿಕ ಮರಣವು. ... | ೪—೬ |
| ೩ ವೈಕುಂಠದ ದ್ವಾರಪಾಲಕರ ಉನ್ಮತ್ತತನವು. ... | ೬—೭ |
| ೪ ಭಗವದ್ಭಕ್ತ ಪ್ರಹ್ಲಾದನು. ... ... | ೭—೧೦ |
| ೫ ದಕ್ಷಪ್ರಜಾಪತಿಯ ಯಜ್ಞವು ಹಾಗೂ ವೀರಭದ್ರಾವತಾರವು. | ೧೦—೧೩ |
| ೬ ಧ್ರುವನ ನಿಶ್ಚಯದ ಫಲವು. .. ... | ೧೩—೧೫ |
| ೭ ರಾಜನು ದೇವರ ಅಂಶವು. ... ... | ೧೫—೧೭ |
| ೮ ಪೃಥುರಾಜನಿಗೆ ಪೃಥ್ವಿಯ ಪ್ರಾರ್ಥನೆಯು. ... | ೧೮—೧೯ |
| ೯ ಕರ್ತವ್ಯಾಚರಣದ ಪುಣ್ಯವು. ... ... | ೧೯—೨೦ |
| ೧೦ ಅತಿಪ್ರೇಮದ ಪರಿಣಾಮವು. ... ... | ೨೦—೨೩ |
| ೧೧ ಭಗವಂತನ ನಾಮಸ್ಮರಣವು. ... ... | ೨೩—೨೪ |
| ೧೨ ಬೃಹಸ್ಪತಿಯ ಮಾನಖಂಡನವು. ... ... | ೨೪—೨೬ |
| ೧೩ ಗಜೇಂದ್ರಮೋಕ್ಷ. ... ... | ೨೬—೨೭ |
| ೧೪ ವೃದ್ಧ ಋಷಿಯು ತರುಣನಾದದ್ದು. ... | ೨೭—೨೯ |
| ೧೫ ಸತ್ಯದ ಮಹಿಮೆಯು. ... ... | ೨೯—೩೨ |
| ೧೬ ಸನಾತನ ಧರ್ಮವು. ... ... | ೩೨—೩೬ |
| ೧೭ ಸಮುದ್ರಮಂಥನವು. ... ... | ೩೬—೩೮ |
| ೧೮ ಮೋಹಿನಿಯು ದೈತ್ಯರ ನ್ಯಾಯವನ್ನು ತೀರಿಸಿದ್ದು. ... | ೩೮—೪೦ |
| ೧೯ ಭಕ್ತಿಯ ಮಹಿಮೆಯು. ... ... | ೪೦—೪೨ |
| ೨೦ ರಾಣಿಯ ಜಾಣತನವು. ... ... | ೪೩—೪೪ |

೨೧ ಸ್ತ್ರೀ ಮೋಹವು. ... ... ೪೪—೪೫

೨೨ ಭೂತದಯೆಯ ಅವತಾರವು. ... ... ೪೫—೪೭

೨೩ ಯಾದವರು ಮತ್ತು ಅವರ ಪರಸ್ಪರ ಕಲಹವು. ... ೪೭—೪೮

೨೪ ಅಣ್ಣ ತಂಗಿಯರ ದ್ವೇಷವು. .. ... ೪೮—೪೯

೨೫ ಕಂಸನು ಮಾಡಿದ ಬಾಲಹತ್ಯವು. ... ... ೫೦—೫೧

೨೬ ಕೂಸುಗಳ ಅದಲುಬದಲು. ... .. ೫೧—೫೩

೨೭ ಕೃಷ್ಣನ ಬಾಲಲೀಲೆಯು. ... ... ೫೩—೫೬

೨೮ ಕಾಲಿಯಾಮರ್ದನ. ... ... ೫೬—೫೮

೨೯ ಕೃಷ್ಣನು ಪರ್ವತವನ್ನು ಛತ್ರಿಗೆಯಾಗಿ ಮಾಡಿದ್ದು ... ೫೮—೫೯

೩೦ ಕೃಷ್ಣನನ್ನು ಕೊಲ್ಲಿಸಲಿಕ್ಕೆ ಕಂಸನು ಮಾಡಿದ ಯುಕ್ತಿಯು. ೫೯—೬೦

೩೧ ಬಲರಾಮ ಮತ್ತು ಕೃಷ್ಣರ ಅದ್ಭುತ ಶಕ್ತಿಯು. ... ೬೧—೬೪

೩೨ ಕಂಸವಧ. ... ... ... ೬೪—೬೫

೩೩ ಗುರುದಕ್ಷಿಣವು. ... .. ೬೫—೬೬

೩೪ ದ್ವಾರಕೆಯ ಉತ್ಪತ್ತಿಯು. ... ... ೬೬—೬೭

೩೫ ಸಾಧು ಮುಚಕುಂದನು. ... ... ೬೭—೬೮

೩೬ ರುಕ್ಮಿಣೀ ಸ್ವಯಂವರ. ... ೬೮—೭೦

೩೭ ಕೃಷ್ಣನ ಮೇಲೆ ಬಂದ ಅಪವಾದವು. ... ೭೦—೭೧

೩೮ ಉಷಾಪರಿಣಯ. ... ... ೭೧—೭೩

೩೯ ಜರಾಸಂಧವಧ ... ... ೭೪—೭೫

೪೦ ಮಿತ್ರಪ್ರೇಮ. ... ... ... ೭೫—೭೮

೪೧ ಅವತಾರ ಸಮಾಪ್ತಿ. ... ... ೭೮—೮೧



C. P. D.

ಶೇಷಶಾಯಿ ಭಗವಾನ್ ಮಹಾವಿಷ್ಣು.

# ಬಾಲಭಾಗವತ.

## ೧. ಕಲಹಪ್ರಿಯ ನಾರದನು.

ನಾರದನು ಬ್ರಹ್ಮದೇವನ ಮಾನಸಪುತ್ರನು ಅಂದರೆ ಕೇವಲ ಬ್ರಹ್ಮದೇವನ ಇಚ್ಛೆಯಿಂದ ಉತ್ಪನ್ನವಾದ ಪುತ್ರನು ಇದ್ದನು. ಇವನಿಗೆ ಇವನ ತಂದೆಯು ಒಮ್ಮೆ ಒಂದು ಕೆಲಸವನ್ನು ಮಾಡಲಿಕ್ಕೆ ಹೇಳಿದನು. ಆದರೆ ಇವನು ತಾನು ಆ ಕೆಲಸ ಮಾಡುವಲ್ಲಿ ತೊಡಗಿದರೆ ತನ್ನ ಈಶ್ವರಭಜನೆಗೆ ಅಡ್ಡಿಯಾಗುವದೆಂದು ತನ್ನ ತಂದೆಯ ಆಜ್ಞೆಯನ್ನು ಮೀರಿದನು. ಇದರಿಂದ ಇವನ ಮೇಲೆ ಇವನ ತಂದೆಯ ಸಿಟ್ಟು ಉಂಟಾಗಿ ಇವನಿಗೆ ಗಂಧರ್ವತ್ವವು ಬಂತು. ಇವನ ಯೋಗ್ಯತೆಯು ಮುಂಚೆ ಬಹಳ ದೊಡ್ಡದಿತ್ತು. ಆದರೆ ಇವನು ತನ್ನ ತಂದೆಯ ಆಜ್ಞೆಯನ್ನು ಮೀರಿದ್ದರಿಂದಲೇ ಇವನ ಲೌಕಿಕವು ಸ್ವಲ್ಪ ಕಡಿಮೆಯಾಯಿತು. ಇವನು ಹಿಂದುಗಡೆ ಸ್ವಲ್ಪ ಗಾಯನವನ್ನು ಕಲಿತು ಪರಮೇಶ್ವರನ ಸ್ತುತಿಪರವಾದ ಪದ್ಯಗಳನ್ನು ಹಾಡುತ್ತ ಸಂಚರಿಸಹತ್ತಿದನು. ಇವನಿಗೆ ಸ್ವರ್ಗಲೋಕದಲ್ಲಿಯೂ, ಮೃತ್ಯುಲೋಕದಲ್ಲಿಯೂ, ಭೂಲೋಕದಲ್ಲಿಯೂ ಯಾವತ್ತು ಕಡೆಗೆ ಹೋಗಿಬರಲಿಕ್ಕೆ ಪೂರ್ಣ ಸ್ವತಂತ್ರವಿತ್ತು. ಇವನಿಗೆ ಯಾರೂ ಯಾವಲ್ಲಿಯೂ ನಿರ್ಬಂಧನೆಯನ್ನು ಮಾಡುತ್ತಿದ್ದಿಲ್ಲ.

ಇವನು ನಾಲ್ಕೂ ಕಡೆಗೆ ಹೋಗಿಬರುವ ಪರಿಪಾಠವನ್ನಿಟ್ಟದ್ದರಿಂದ ಇವನಿಗೆ ಯಾವ ಹೊತ್ತಿಗೆ ಯಾವಲ್ಲಿ ಏನು ನಡೆದಿರುತ್ತದೆಂಬುವದು ಪೂರ್ಣವಾಗಿ ಗೊತ್ತಾಗುತ್ತಿತ್ತು. ಇವನು ಒಮ್ಮೊಮ್ಮೆ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವದಕ್ಕಾಗಿ ಇತ್ತಕಡೆಯದು ಅತ್ತಕಡೆಗೆ, ಅತ್ತಕಡೆಯದು ಇತ್ತಕಡೆಗೆ ಹೇಳಿ ಜನರೊಳಗೆ ಜಗಳ ಹಚ್ಚಿ ತಾನು ತ್ರಯಸ್ಥನಂತೆ ಸುಮ್ಮನೆ ಮೋಜು ನೋಡುತ್ತ ನಿಲ್ಲುತ್ತಿದ್ದನು. ಇದರಿಂದಲೇ ಇವನಿಗೆ "ಕಲಹಪ್ರಿಯ ನಾರದನು" ಎಂಬ ಒಕ್ಕಣಿಕೆಯು ಬಂದಿರುವದು. ಒಂದು ಸಾರೆ ಈ ನಾರದನು ಸ್ವರ್ಗಲೋಕದಿಂದ ಶ್ರೀಕೃಷ್ಣನಿಗೆ ಪಾರಿಜಾತದ ಹೂವನ್ನು ತಂದುಕೊಟ್ಟನು. ಅದನ್ನು ಶ್ರೀಕೃಷ್ಣನು ರುಕ್ಮಿಣಿಗೆ ಕೊಟ್ಟನು. ಈ ವರ್ತಮಾನವು ಸತ್ಯಭಾಮೆಗೆ

ನಾರದನ ಬಾಯಿಂದ ಗೊತ್ತಾಗಿ ನಾರದನ ಕುಚೇಷ್ಟೆಯಿಂದಲೇ ಅವಳು ಕೃಷ್ಣನ ಮೇಲೆ ಬಹಳ ಸಿಟ್ಟಿಗೆದ್ದಳು. ಸತ್ಯಭಾಮೆಯ ಸಮಾಧಾನ ಮಾಡುವದಕ್ಕಾಗಿ ಶ್ರೀಕೃಷ್ಣನು ದೇವೇಂದ್ರನಗೂಡ ಯುದ್ಧ ಮಾಡಿ ಅವನನ್ನು ಯುದ್ಧದಲ್ಲಿ ಸೋಲಿಸಿ ಅವನ ನಂದನವನದೊಳಗಿಂದ ಪಾರಿಜಾತಕವೃಕ್ಷವನ್ನು ಕಿತ್ತು ತಂದು ಸತ್ಯಭಾಮೆಯ ಉದ್ಯಾನದೊಳಗೆ ಹಚ್ಚಿಕೊಡುವ ಪರಿಶ್ರಮವನ್ನು ಮಾಡಬೇಕಾಯಿತು. ಇನ್ನೊಂದು ಪ್ರಸಂಗದಲ್ಲಿ ನಾರದನು ಲಕ್ಷ್ಮಿ, ಪಾರ್ವತಿ ಮತ್ತು ಸರಸ್ವತಿ ಈ ಮೂವ್ವರ ಕಡೆಗೆ ಹೋಗಿ-" ನೀವು ಮೂವ್ವರು ಬಹಳ ಪತಿವ್ರತೆಯರಿದ್ದೀರೆಂಬುವದು ನಿಜವು. ಆದರೆ ಅತ್ರಿಋಷಿಯ ಪತ್ನಿಯಾದ ಅನುಸೂಯೆಯಂಥ ಪತಿವ್ರತೆಯು ಭೂಮಿ, ಸ್ವರ್ಗ ಮತ್ತು ಪಾತಾಳ ಈ ಮೂರೂ ಲೋಕಗಳಲ್ಲಿ ಯಾರೂ ಇಲ್ಲ" ಎಂದು ಹೇಳಿದನು. ಇದನ್ನು ಕೇಳಿ ಆ ಮೂವ್ವರಿಗೂ ಮತ್ಸರವುಂಟಾಗಿ ಆ ಮೂವ್ವರು ಆಕೆಯ ಪರೀಕ್ಷೆಯನ್ನು ಮಾಡಿಕೊಂಡು ಬರುವದಕ್ಕಾಗಿ ತಮ್ಮ ತಮ್ಮ ಗಂಡಂದಿರಾದ ವಿಷ್ಣು, ಶಂಕರ ಮತ್ತು ಬ್ರಹ್ಮದೇವ ಈಮೂರು ಜನರನ್ನು ಭೂಲೋಕಕ್ಕೆ ಕಳುಹಿಸಿದರು. ಅಲ್ಲಿ ಆ ಮೂರೂಜನರ ಮಾನಭಂಗವಾಗಿ ದತ್ತಾತ್ರಯನ ಅವತಾರವಾಯಿತು. ಇಲ್ಲಿ ಸಹ ಈ ಪ್ರಕಾರ ಕಲಹದ ಅನರ್ಥವನ್ನು ಮಾಡಿಸಿದವನು ನಾರದನೇ.

ಒಂದು ಸಾರೆ ಚಿತ್ರಸೇನ ಗಂಧರ್ವನು ಆಕಾಶಮಾರ್ಗವಾಗಿ ಹೋಗುತ್ತಿದ್ದಾಗ್ಗೆ ಕೆಳಗೆ ಉಗುಳಿದನು. ಆ ಸಮಯದಲ್ಲಿ ಗಾಲವನೆಂಬ ಋಷಿಯು ಗಂಗಾನದಿಯಲ್ಲಿ ಸ್ನಾನಮಾಡಿ ಸೂರ್ಯನಿಗೆ ಅರ್ಘ್ಯಪ್ರದಾನ ಮಾಡುವದಕ್ಕಾಗಿ ತನ್ನ ಕೈಯ ಬೊಗಸಿಯಲ್ಲಿ ನೀರನ್ನು ತೆಗೆದುಕೊಂಡಿದ್ದನು. ಅದರಲ್ಲಿಯೇ ಚಿತ್ರಸೇನನ ಉಗುಳು ಬಿತ್ತು. ಇದನ್ನು ನೋಡಿ ಗಾಲವ ಋಷಿಯು ಬಹಳ ಸಿಟ್ಟಿಗೆದ್ದು ಧರ್ಮರಾಜನ ಕಡೆಗೆ ಹೋಗಿ ತನ್ನ ದೂರು ಹೇಳಿಕೊಂಡನು. ಗಾಲವ ಋಷಿಯು ಹೇಳಿದ್ದನ್ನು ಕೇಳಿ ಧರ್ಮರಾಜನಿಗೂ, ಧರ್ಮರಾಜನ ಹತ್ತರ ಕುಳಿತಿದ್ದ ಶ್ರೀಕೃಷ್ಣನಿಗೂ ಬಹಳ ಸಂತಾಪವುಂಟಾಯಿತು. ತತ್ಕಾಲವೇ ಶ್ರೀಕೃಷ್ಣನು ಈ ಪ್ರಕಾರ ಋಷಿಯ ಅಪಮಾನ ಮಾಡವಂಥ ಹಾಗೂ ಅಧರ್ಮಾಚರಣ ಮಾಡುವಂಥ ಚಿತ್ರಸೇನ ಗಂಧರ್ವನನ್ನು ಕೊಲ್ಲದೆ ತಾನು ಜೀವವನ್ನು ಇಡಲಾರೆನೆಂದು ಪ್ರತಿಜ್ಞೆಯನ್ನು ಮಾಡಿದನು. ಶ್ರೀಕೃಷ್ಣನ ಪ್ರತಿ

ಜ್ಞೆಯನ್ನು ಕೇಳಿ ಚಿತ್ರಸೇನನು ಬಹಳ ಹೆದರಿದನು. ಆಗ ನಾರದನು ಯುಕ್ತಿಯನ್ನು ಮಾಡಿ ಚಿತ್ರಸೇನನಿಗೆ ಅರ್ಜುನನ ಪತ್ನಿಯಾದ ಸುಭದ್ರೆಯ ಕಡೆಯಿಂದ ಜೀವದಾನದ ವಚನವನ್ನು ಕೊಡಿಸಿದನು. ಆದುದರಿಂದ ಅರ್ಥಾತ್ ಸುಭದ್ರೆಯು ತನ್ನ ವಚನವನ್ನು ಸತ್ಯ ಮಾಡುವದಕ್ಕಾಗಿ ಚಿತ್ರಸೇನನ ರಕ್ಷಣ ಮಾಡಬೇಕೆಂದು ಅರ್ಜುನನ ಹತ್ತರ ಹಟವನ್ನು ಹಿಡಿದು ಕುಳಿತಳು. ಆಗ ಅರ್ಜುನನಿಗೆ "**ಒಂದು ಕಡೆಗೆ ಕೆರೆ, ಇನ್ನೊಂದು ಕಡೆಗೆ ಬಾವಿ**" ಈ ಪ್ರಕಾರ ಅವಸ್ಥೆಯಾಯಿತು. ಅವನು ಕೊನೆಗೆ ತನ್ನ ಪ್ರಿಯ ಅರ್ಧಾಂಗಿಯಾದ ಸುಭದ್ರೆಯ ವಚನವನ್ನು ಸತ್ಯ ಮಾಡುವದಕ್ಕಾಗಿ ಶ್ರೀಕೃಷ್ಣನ ಸಂಗಡ ಯುದ್ಧ ಮಾಡಬೇಕಾಯಿತು. ಶ್ರೀಕೃಷ್ಣ ಮತ್ತು ಅರ್ಜುನ ಇವರೊಳಗೆ ಕೆಲವು ಹೊತ್ತು ಯುದ್ಧವು ನಡೆದ ಬಳಿಕ ಅವರವರೊಳಗೆ ಸರಿಯಾದ ತಿಳುವಳಿಕೆಯಾದ್ದರಿಂದ ಅವರ ಯುದ್ಧವು ಅನರ್ಥಕ್ಕೆ ಹೋಗದೆ ಸ್ವಲ್ಪದರಲ್ಲಿಯೇ ಮುಗಿಯಿತು. ಈ ಕೃಷ್ಣಾರ್ಜುನ ಕಾಳಗದ ಪ್ರಸಂಗವನ್ನು ತರಲಿಕ್ಕೆ ನಾರದಮುನಿಯೇ ಕಾರಣನು. ಕೃಷ್ಣನ ಕಡೆಯಿಂದ ಶಿಶುಪಾಲನನ್ನು ಕೊಲ್ಲಿಸಲಿಕ್ಕೆ ಇವನೇ ಕಾರಣನು. ಕೃಷ್ಣನಿಗಿಂತ ಮುಂಚೆ ವಸುದೇವ ಮತ್ತು ದೇವಕಿಯರ ಹೊಟ್ಟೆಯಿಂದ ಹುಟ್ಟಿದ ಏಳು ಕೂಸುಗಳನ್ನು ಕೊಲ್ಲಲಿಕ್ಕೆ ನಾರದನೇ ಕಂಸನಿಗೆ ಉಪದೇಶ ಮಾಡಿದ್ದನು. ಆ ಏಳು ಕೂಸುಗಳನ್ನು ಕೊಲ್ಲಬೇಕೆಂದು ಮೊದಲಿಗೆ ಕಂಸನ ಮನಸ್ಸಿನಲ್ಲಿದ್ದಿಲ್ಲ. ಆದರೆ ಅವನ ಪಾಪದ ಕೊಡವು ಬೇಗನೆ ತುಂಬಲೆಂದು ನಾರದನು ಕಂಸನಿಗೆ ಇಲ್ಲದ್ದೊಂದು ಹೇಳಿ ಆ ಏಳು ಕೂಸುಗಳನ್ನು ಕೊಲ್ಲಿಸಿದನು. ಈ ಪ್ರಕಾರ ಪುರಾಣದಲ್ಲಿ ನಾರದನ ಕಲಹಪ್ರಿಯತೆಯ ಅನೇಕ ಉದಾಹರಣೆಗಳಿರುತ್ತವೆ. ಆದುದರಿಂದ ನಾರದನಿಗೆ " ಕಲಹಪ್ರಿಯ " ನೆಂಬ ಒಕ್ಕಣಿಕೆಯು ಯಥಾರ್ಥವಾಗಿರುತ್ತದೆ. ಆದರೆ ನಾರದನು ಬರೇ ಜಗಳ ಹಚ್ಚುವ ವಿನೋದಗಾರನೆಂದು ಯಾರೂ ತಿಳಿಯಲಾಗದು. ಅವನು ಅನೇಕ ಸಾರೆ ಜಗತ್ತಿನ ಮೇಲೆ ಅನೇಕ ಉಪಕಾರಗಳನ್ನು ಮಾಡಿರುತ್ತಾನೆ. ದುಷ್ಟ ರಾಕ್ಷಸರ ಸಂಹಾರ ಮಾಡಿಸಿ ಸಾಧು ಸಜ್ಜನರ ರಕ್ಷಣಮಾಡುವ ಕೆಲಸದಲ್ಲಿ ಅವನಿಂದ ಬಹಳ ಸಹಾಯವಾಗಿರುವದು. ಅವನು ಮಹಾ ವಿಷ್ಣುಭಕ್ತನಿದ್ದನು. ಧ್ರುವನಿಗೆ ಸತ್ಯಜ್ಞಾನದ ಉಪದೇಶವನ್ನು ಮಾಡಿ ಅವನ ಜನ್ಮದ ಕಲ್ಯಾಣವನ್ನು ನಾರದನೇ ಮಾಡಿದನು. ಕೃಷ್ಣನಮೊಮ್ಮಗನಾದ ಅನಿ

ರುದ್ಧನಿಗೆ ಬಾಣಾಸುರನು ಕಾರಾಗೃಹದಲ್ಲಿಟ್ಟಿರುತ್ತಾನೆಂದು ಕೃಷ್ಣನಿಗೆ ತಿಳುಹಿಸಿ ಅವನಿಂದ ಬಾಣಾಸುರನನ್ನು ಪರಾಭವ ಮಾಡಿಸಿ ಅನಿರುದ್ಧನನ್ನು ಬಂಧಮುಕ್ತ ಮಾಡಿಸಿದವನು ಭಗವದ್ಭಕ್ತನಾದ ನಾರದನೇ. ಯಾವತ್ತು ವಾದ್ಯಗಳಲ್ಲಿ ಅತಿ ಮಧುರ ಮತ್ತು ಮಂಜುಳವಾದ ವೀಣಾವಾದ್ಯವನ್ನು ನಾರದನೇ ಶೋಧಿಸಿದನು. ಹಾಗೂ ಅವನೇ ಸಂಗೀತ ಶಾಸ್ತ್ರವನ್ನು ಮೊದಲಿಗೆ ರಚಿಸಿದನು.

---

## ೨. ಪರೀಕ್ಷಿತರಾಜನ ಚಮತ್ಕಾರಿಕ ಮರಣವು.

ವ್ಯಾಸನು ಭಾಗವತವನ್ನು ರಚಿಸಿ ಅದನ್ನು ಶುಕಾಚಾರ್ಯನಿಗೆ ಕಲಿಸಲಾಗಿ ಶುಕಾಚಾರ್ಯನು ಅದನ್ನು ಒಂದು ವಿಶೇಷ ಪ್ರಸಂಗದಲ್ಲಿ ಪರೀಕ್ಷಿತರಾಜನಿಗೆ ಹೇಳಿದನು. ಆ ಪ್ರಸಂಗವು ಯಾವದೆಂಬುವದನ್ನು ಕೇಳಿದರೆ ನಗೆಯು ಹೇಗೆ ಹೊಗೆಯಾಗುತ್ತದೆ ಅಥವಾ ಸಹಜವಾಗಿ ಚೇಷ್ಟೆಯಗೊಸ್ಕರ ಮಾಡಿದ ಕೆಲಸದಿಂದ ಒಮ್ಮೊಮ್ಮೆ ಹೇಗೆ ಭಯಂಕರ ಪರಿಣಾಮವಾಗುತ್ತದೆ ಎಂಬವದು ಚೆನ್ನಾಗಿ ನಿದರ್ಶನಕ್ಕೆ ಬರುವದು. ಅದೇನಂದರೆ :—

ಪರೀಕ್ಷಿತರಾಜನು ಒಮ್ಮೆ ಬೇಟೆಯಾಡಲಿಕ್ಕೆ ಹೋದಾಗ್ಗೆ ಅಡವಿಯಲ್ಲಿ ಅಡ್ಡಾಡಿ ಬಹಳ ದಣಿದನು. ಆದುದರಿಂದ ಅವನ ಬಾಯಿ ಒಣಗಿ ಅವನಿಗೆ ಬಹಳ ನೀರಡಿಕೆಯಾಯಿತು. ಯಾವಲ್ಲಿಯೂ ನೀರು ಕಾಣಿಸಲಿಲ್ಲ. ಆದರೆ ಒಬ್ಬ ಋಷಿಯ ಆಶ್ರಮವು ಮಾತ್ರ ಕಾಣಿಸಿತು. ಆ ಆಶ್ರಮದೊಳಗೆ ಪರೀಕ್ಷಿತರಾಜನು ಪ್ರವೇಶ ಮಾಡಿದನು. ಆ ಸಮಯಕ್ಕೆ ಆ ಋಷಿಯು ಕಣ್ಣು ಮುಚ್ಚಿ ಈಶ್ವರಧ್ಯಾನವನ್ನು ಮಾಡುತ್ತಿದ್ದನು. ಅವನ ಮನಸ್ಸು ಈಶ್ವರ ಧ್ಯಾನದಲ್ಲಿ ಪೂರ್ಣವಾಗಿ ತೊಡಗಿದ್ದ ಕಾರಣ ಪರೀಕ್ಷಿತರಾಜನು ತನ್ನ ಆಶ್ರಮದೊಳಗೆ ಬಂದದ್ದು ಅವನಿಗೆ ತಿಳಿಯಲಿಲ್ಲ. ಆದುದರಿಂದ ಅವನು ಅತಿಥಿಸತ್ಕಾರ ಧರ್ಮದಂತೆ ತನ್ನ ಮನೆಗೆ ಬಂದ ರಾಜನಿಗೆ“ ಬನ್ನಿರಿ

ಕುಳಿತುಕೊಳ್ಳಿರಿ" ಎಂದು ನುಡಿಯುವದಾಗಲಿ, ಅವನ ಹಸಿವೆ ನೀರಡಿಕೆಗಳನ್ನು ಶಾಂತಪಡಿಸುವಂಥ ಪದಾರ್ಥಗಳನ್ನು ಆಗ್ರಹದಿಂದ ಕೊಡುವದಾಗಲಿ ಮಾಡಲಿಲ್ಲ. ಋಷಿಯು ಕಣ್ಣು ಮುಚ್ಚಿಕೊಂಡು ಕುಳಿತದ್ದು ಕೇವಲ ಡಾಂಭಿಕತನವೆಂಮ ಪರೀಕ್ಷಿತನು ತಿಳಿದುಕೊಂಡು ಆ ಋಷಿಯುಗೂಡ ಚೇಷ್ಟೆ ಮಾಡುವದಕ್ಕಾಗಿ ಅವನ ಹತ್ತರ ಸತ್ತು ಬಿದ್ದಂಥ ಒಂದು ಹಾವನ್ನು ತನ್ನ ಧನುಷ್ಯದ ತುದಿಯಿಂದ ಎತ್ತಿ ಆ ಋಷಿಯು ಕೊರಳಲ್ಲಿ ಹಾಕಿ ತನ್ನ ದಾರೀ ಹಿಡಿದು ಹೊರಟು ಹೋದನು. ಆ ಋಷಿಗೆ ಶೃಂಗಿಯೆಂಬ ಒಬ್ಬ ಬಾಲಕನಿದ್ದನು. ಅವನು ಆಶ್ರಮಕ್ಕೆ ಬಂದವನೇ ಈಶ್ವರಧ್ಯಾನದಲ್ಲಿ ನಿಮಗ್ನನಾದ ತನ್ನ ತಂದೆಯು ಕೊರಳಲ್ಲಿ ಸತ್ತ ಹಾವು ಹಾಕಿದ್ದನ್ನು ನೋಡಿ ಸಿಟ್ಟಿಗೆದ್ದು ಆ ಸಿಟ್ಟಿನ ಭರದಲ್ಲಿ–" ನನ್ನ ತಂದೆಯನ್ನು ಈ ಪ್ರಕಾರ ಅಪಮಾನ ಮಾಡಿದ ರಾಜನು ಇವತ್ತಿನಿಂದ ಏಳು ದಿವಸಗಳಲ್ಲಿ ಹಾವು ಕಡಿದು ಸಾಯಲಿ " ಎಂದು ಶಾಪವನ್ನು ಕೊಟ್ಟನು. ಕೆಲವು ಹೊತ್ತಿನ ಮೇಲೆ ಈಶ್ವರ ಧ್ಯಾನ ಮುಗಿಸಿ ಎಚ್ಚರಾದ ಋಷಿಗೆ ಈ ಯಾವತ್ತು ಸಂಗತಿಯು ಗೊತ್ತಾಗಲಾಗಿ ಅವನಿಗೆ ಬಹಳ ವ್ಯಸನವಾಯಿತು. ಈ ಪ್ರಕಾರ ತನ್ನ ಗೂಡ ಚೇಷ್ಟೆ ಮಾಡುವಂಥ ಬುದ್ಧಿಯು ರಾಜನಿಗೆ ಹುಟ್ಟಿದ ಸಂಗತಿಯಾಗಲಿ, ಶೃಂಗಿಯು ಇಷ್ಟೊಂದು ಸಿಟ್ಟಿಗೆ ಬಂದು ವಿಚಾರ ಮಾಡದೆ ರಾಜನಿಗೆ ಶಾಪ ಕೊಟ್ಟ ಸಂಗತಿಯಾಗಲಿ ಅವನ ಮನಸ್ಸಿಗೆ ಬರಲಿಲ್ಲ. **" ಬರೇ ವ್ಯಸನ ಮಾಡಿ ಉಪಯೋಗವೇನು? ಭವಿತವ್ಯವು ತಪ್ಪುವದಿಲ್ಲ "** ಎಂದು ಋಷಿಯು ಬೇಗನೆ ಸಮಾಧಾನ ಮಾಡಿಕೊಂಡು, ತನ್ನ ಬಾಲಕನು ಕೊಟ್ಟ ಶಾಪವನ್ನು ರಾಜನಿಗೆ ತಿಳುಹಿಸಿದನು. ಆಗ ಪರೀಕ್ಷಿತನು ಈ ಏಳುದಿವಸಗಳಲ್ಲಿ ತನ್ನ ಜೀವಕ್ಕೆ ಹಾವಿನಿಂದ ಅಂಜಿಕೆಯುಂಟೆಂದು ತಿಳಿದುಕೊಂಡು ತನ್ನ ಹತ್ತರ ಯಾವಲ್ಲಿಯೂ ಹಾವು ಬಾರದಂತೆ ವ್ಯವಸ್ಥೆಯನ್ನಿಟ್ಟು ಈ ಏಳು ದಿವಸಗಳಲ್ಲಿ ಶ್ರೀ ಶುಕಾಚಾರ್ಯರ ಬಾಯಿಂದ ಸಾಗ್ರಭಾರತವನ್ನು ಕೇಳಿದನು. ಪರೀಕ್ಷಿತನು ತನಗೆ ಹಾವು ಬಂದು ಕಡಿಯಬಾರದೆಂದು ಎಷ್ಟು ಭದ್ರತೆಯನ್ನು ಇಟ್ಟಾಗ್ಯೂ ಅದು ವ್ಯರ್ಥವಾಯಿತು. ಒಬ್ಬ ಬ್ರಾಹ್ಮಣನು ಪರೀಕ್ಷಿತ ರಾಜನಿಗೆ ಕೆಲವು ಬೋರಿಯ ಹಣ್ಣುಗಳನ್ನು ಆಶೀರ್ವಾದ ಮಾಡಿದ್ದನು. ಆ ಬೋರಿಯ ಹಣ್ಣುಗಳಲ್ಲಿ ಒಂದರೊಳಗೆ ಒಂದು ಹುಳವು ಹೊರಟು, ಅದೇ

ಹಾವು ಆಗಿ, ಪರೀಕ್ಷಿತ ರಾಜನನ್ನು ಏಳನೇ ದಿವಸವೇ ಕಚ್ಚಿತು. ಇದರಿಂದ ಪರೀಕ್ಷಿತರಾಜನು ಶೃಂಗಿಯ ಶಾಪದ ಪ್ರಕಾರ ಏಳನೇ ದಿವಸ ಮರಣ ಹೊಂದಿದನು. ಪರೀಕ್ಷಿತರಾಜನು ಋಷಿಗೆ ಚೇಷ್ಟೆಯನ್ನು ಮಾಡಿದ್ದರಿಂದ ಎಷ್ಟು ಭಯಂಕರ ಪರಿಣಾಮವಾಯಿತೆಂಬುವದು ಲಕ್ಷ್ಯದಲ್ಲಿಡತಕ್ಕಂಥ ಸಂಗತಿಯಾಗಿದೆ.

---

# ೩. ವೈಕುಂಠದ ದ್ವಾರಪಾಲಕರ ಉನ್ಮತ್ತತನವು.

ಒಂದು ಸಾರೆ ಸನಕ—ಸನಂದನ—ಸನಾತನ—ಸನತ್ಕುಮಾರರೆಂಬ ಋಷಿಗಳು ಶ್ರೀವಿಷ್ಣುವಿನ ದರ್ಶನಕ್ಕಾಗಿ ವೈಕುಂಠಕ್ಕೆ ಹೋದರು. ಆಗ ವೈಕುಂಠದ ಬಾಗಿಲ ಕಾಯಲಿಕ್ಕೆ ನೇಮಿಸಲ್ಪಟ್ಟಿದ್ದ ಜಯವಿಜಯರೆಂಬವರು ಆ ಋಷಿಗಳಿಗೆ ಒಳಗೆ ಹೋಗಲಿಕ್ಕೆ ತಡೆದದ್ದಲ್ಲದೆ ಆ ಋಷಿಗಳ ಮೈಮೇಲೆ ವಸ್ತ್ರಗಳಿಲ್ಲದ್ದನ್ನು ಕಂಡು ನಕ್ಕರು. ದ್ವಾರಪಾಲಕರ ಈ ಉನ್ಮತ್ತತನವನ್ನು ಕಂಡು ಆ ನಾಲ್ಕು ಜನ ಋಷಿಗಳು ಸಿಟ್ಟಿಗೆದ್ದು — "ನೀವು ಈ ರೀತಿಯಿಂದ ನಮ್ಮನ್ನು ಅಪಮಾನ ಮಾಡಿದ್ದಕ್ಕಾಗಿ ಮೃತ್ಯುಲೋಕದಲ್ಲಿ ರಾಕ್ಷಸರಾಗಿ ಹುಟ್ಟಿರಿ" ಎಂದು ಶಾಪ ಕೊಟ್ಟರು. ಆಗ ಜಯವಿಜಯರು ತಾವು ಮೃತ್ಯುಲೋಕದಲ್ಲಿ ರಾಕ್ಷಸರಾಗಿ ಹುಟ್ಟಿದರೂ ವಿಷ್ಣುಭಕ್ತರಾಗಿಯೇ ಹುಟ್ಟಬೇಕೆಂದು ವರವನ್ನು ಕೊಡಬೇಕಾಗಿ ಆ ನಾಲ್ಕು ಜನ ಋಷಿಗಳಿಗೆ ಪ್ರಾರ್ಥನೆಯನ್ನು ಮಾಡಿಕೊಂಡರು. ಅದಕ್ಕೆ ಆ ಋಷಿಗಳು "ಯಾಕಾಗಲೊಲ್ಲದು" ಎಂದು ಒಪ್ಪಿಕೊಂಡರು. ಈ ಪ್ರಕಾರ ಶಾಪ ಕೊಡಲ್ಪಟ್ಟ ಜಯವಿಜಯ ದ್ವಾರ ಪಾಲಕರು ಮೃತ್ಯುಲೋಕದಲ್ಲಿ ರಾಕ್ಷಸರಾಗಿ ಹುಟ್ಟಿ ಹಿರಣ್ಯಾಕ್ಷ ಮತ್ತು ಹಿರಣ್ಯಕಶ್ಯಪು ಎಂಬ ಹೆಸರಿನಿಂದ ಪ್ರಸಿದ್ಧರಾದರು. ಇವರು ದಿತಿಯೆಂಬ ರಾಕ್ಷಸಿಯ ಹೊಟ್ಟೆಯಿಂದ ಹುಟ್ಟಿದ ಕಾರಣ ಇವರಿಗೆ ದೈತ್ಯರೆಂಬ ಹೆಸರು ಬಂದಿತು. ಇವರಿಬ್ಬರೂ ಬಹಳ ಪರಾಕ್ರಮಿಗಳು ಹಾಗೂ ಜನರಿಗೆ ಬಹಳ ಪೀಡೆಯನ್ನು ಕೊಡುವವರು ಆಗಿದ್ದರು. ಹಿರಣ್ಯಾಕ್ಷನಿಗೆ ಯುದ್ಧ ಮಾಡುವ ಅಕ್ಕರತೆಯು ಬಹಳ ಇತ್ತು.

ಇವನ ಪ್ರಚಂಡ ಸಾಮರ್ಥ್ಯವನ್ನು ಕಂಡು ಇವನ ಸಂಗಡ ಯುದ್ಧ ಮಾಡ ಲಿಕ್ಕೆ ದೇವತೆಗಳಿಗೆ ಸಹ ಧೈರ್ಯವು ನಾಲುತ್ತಿದ್ದಿಲ್ಲ. ಇವನು ಒಂದು ಸಾರೆ ವರುಣನಿಗೆ ಯುದ್ಧ ಮಾಡಲಿಕ್ಕೆ ಕೆಣಕಿದನು. ಆಗ ವರುಣನು–"ನಾನು ಈಗ ಮುದುಕನಾಗಿರುತ್ತೇನೆ. ನಿನ್ನ ಸಂಗಡ ಯುದ್ಧ ಮಾಡುವಷ್ಟು ಸಾಮರ್ಥ್ಯವು ನನಗೆ ಉಳಿದಿಲ್ಲ; ಒಬ್ಬ ವಿಷ್ಣುವಿನಲ್ಲಿ ಮಾತ್ರ ನಿನ್ನ ಸಂಗಡ ಯುದ್ಧ ಮಾಡುವ ಸಾಮರ್ಥ್ಯವಿರುತ್ತದೆ. ಆದುದರಿಂದ ನೀನು ಅವನ ಕಡೆಗೆ ಹೋಗು" ಎಂದು ಉತ್ತರ ಕೊಟ್ಟನು. ಆಗ ಹಿರಣ್ಯಾಕ್ಷನಿಗೆ ತನ್ನಗೂಡ ಯುದ್ಧಮಾಡ ತಕ್ಕ ವೀರನು ಶ್ರೀವಿಷ್ಣುವೊಬ್ಬನೇ ಇರುತ್ತಾನೆಂದು ಕೇಳಿ ಬಹಳ ಆನಂದ ವಾಯಿತು ಮುಂದೆ ಅವನಿಗೆ ನಾರದನ ಬಾಯಿಂದ ಶ್ರೀವಿಷ್ಣುವು ವರಾಹ ರೂಪವನ್ನು ಧರಿಸಿ ತನ್ನ ಕೋರೆಗಳಿಂದ ಪೃಥ್ವಿಯನ್ನು ಎತ್ತುತ್ತ ಪಾತಾಳ ಲೋಕದಿಂದ ಮೃತ್ಯುಲೋಕಕ್ಕೆ ಬರುವನೆಂದು ತಿಳಿಯಬಂತು. ಆದುದರಿಂದ ಹಿರಣ್ಯಾಕ್ಷನು ಅಲ್ಲಿಗೆ ಹೋಗಿ ಶ್ರೀ ವಿಷ್ಣುವಿನ ಸಾಮರ್ಥ್ಯವನ್ನು ನೋಡಿ ಆಶ್ಚರ್ಯಚಕಿತನಾದನು. ಆದರೂ ಅವನಿಗೆ ದೈತ್ಯವಂಶದ ಗರ್ವವು ಬಹಳ ಇದ್ದ ಕಾರಣ ಅವನು ಶ್ರೀ ವಿಷ್ಣುವಿಗೆ ಸಹ ಜರಿದು ಮಾತಾಡಿದನು. ಆಗ ಶ್ರೀ ವಿಷ್ಣುವು ಒಳಗಿಂದೊಳಗೆ ಬಹಳ ಸಿಟ್ಟಿಗೆದ್ದಾಗ್ಯೂ ಹೊರಗೆ ಮಾತ್ರ ಶಾಂತತೆಯಿಂದ ಉತ್ತರ ಕೊಟ್ಟನು. ಶ್ರೀವಿಷ್ಣುವು ಶಾಂತತೆಯಿಂದ ಉತ್ತರ ಕೊಟ್ಟದ್ದನ್ನು ಕಂಡು ಹಿರಣ್ಯಾಕ್ಷನು ಮತ್ತಷ್ಟು ಉನ್ಮತ್ತನಾಗಿ ಶ್ರೀ ವಿಷ್ಣುವಿನ ಮೈಮೇಲೆ ಸಾಗಿ ಹೋದನು. ಆಗ ಯುದ್ಧವು ಪ್ರಾರಂಭವಾಗಿ ವರಾಹರೂಪ ವನ್ನು ಧರಿಸಿದ ಶ್ರೀವಿಷ್ಣುವು ಹಿರಣ್ಯಾಕ್ಷನನ್ನು ಕೊಂದನು. ಈ ರೀತಿಯಿಂದ ಹಿರಣ್ಯಾಕ್ಷನ ಉನ್ಮತ್ತತನಕ್ಕೆ ಯೋಗ್ಯ ಶಾಸನವು ದೊರಕಿತು.

---

## ೪. ಭಗವದ್ಭಕ್ತ ಪ್ರಹ್ಲಾದನು.

ಹಿರಣ್ಯಾಕ್ಷನ ಸಂಹಾರವಾದ್ದರಿಂದ ಹಿರಣ್ಯಕಶ್ಯಪನು ಬಹಳೇ ಸಿಟ್ಟಿಗೆದ್ದು ದೇವತೆಗಳನ್ನು ಕಂಡ ಕೂಡಲೆ ಹಲ್ಲುದವಡೆಗಳನ್ನು ಕಡಿಯುತ್ತ ತಾನು ಅವರ ಮೇಲೆ ಯಾವಾಗ್ಗೆ ಸೇಡು ತೀರಿಸಿಕೊಂಡೇನೆಂದು ಹೊಂಚು ಹಾಕಿ ಕುಳಿತಿದ್ದನು. ಅವನು ತಾನು ಶ್ರೀ ವಿಷ್ಣುವಿನನ್ನು ಕೊಂದು ಅವನ ರಕ್ತದಿಂದ

ತನ್ನ ಅಣ್ಣನಿಗೆ ತರ್ಪಣವನ್ನು ಕೊಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿದನು. ದೇವತೆಗಳೆಲ್ಲ ಶ್ರೀವಿಷ್ಣುವಿನಿಂದಲೇ ತಮ್ಮ ಸಂರಕ್ಷಣವಾಗುವದೆಂದು ಅವನನ್ನು ಪೂರ್ಣವಾಗಿ ನಂಬಿಕೊಂಡಿದ್ದರು. ಆದುದರಿಂದ ಶ್ರೀವಿಷ್ಣುವು ಸ್ವತಃ ಮರಣ ಹೊಂದಿದರೆ ಹಿರಣ್ಯಾಕಶ್ಯಪನು ತಮ್ಮನ್ನು ಅರಕ್ಷಣದಲ್ಲಿ ಸಂಹಾರ ಮಾಡುವನೆಂದು ಅವರು ಬಹಳ ಹೆದರಿಕೊಂಡರು. ಹಿರಣ್ಯಾಕಶ್ಯಪನಿಗೆ ತನ್ನ ಸಾಮರ್ಥ್ಯದ ಬಗ್ಗೆ ಅತ್ಯಂತ ವಿಶ್ವಾಸವಿತ್ತು. ಇದಲ್ಲದೆ ಅವನು ತನಗೆ ಈ ಯುದ್ಧದಲ್ಲಿ ಯಶಸ್ಸು ದೊರಕಬೇಕೆಂದು ಪರ್ವತದ ಗುಹೆಯಲ್ಲಿ ಹೋಗಿ ಉಗ್ರವಾದ ತಪಸ್ಸನ್ನು ನಡೆಸಿದನು. ದೊಡ್ಡ ದೊಡ್ಡ ಋಷಿಗಳು ಸಹ ನಾಚಿಕೆ ಪಡುವಂಥ ಇವನ ಉಗ್ರವಾದ ತಪಸ್ಸನ್ನು ನೋಡಿ ಬ್ರಹ್ಮದೇವನು ಸಂತುಷ್ಟನಾಗಿ ಇವನಿಗೆ-“ ನೀನು ಬೇಕಾದ ವರವನ್ನು ಬೇಡಿಕೋ ” ಎಂದು ಹೇಳಿದನು. ಆಗ ಇವನು ಬ್ರಹ್ಮದೇವನಿಗೆ-“ ನೀನು ಉತ್ಪನ್ನ ಮಾಡಿದಂಥ ಯಾವ ಪ್ರಾಣಿಗಳಿಂದಲೂ ನನಗೆ ಹಗಲು ಅಥವಾ ರಾತ್ರಿ, ಒಳಗೆ ಅಥವಾ ಹೊರಗೆ, ಪೃಥ್ವಿಯಲ್ಲಿ ಅಥವಾ ಆಕಾಶದಲ್ಲಿ ಮರಣವು ಬರಬಾರದು ” ಎಂದು ಬೇಡಿಕೊಂಡನು. ಅದಕ್ಕೆ ಬ್ರಹ್ಮದೇವನು “ ತಥಾಸ್ತು ” ಎಂದು ವರವನ್ನು ಕೊಟ್ಟು ಹೋದನು. ಬ್ರಹ್ಮದೇವನು ಕೊಟ್ಟ ವರದಿಂದ ಹಿರಣ್ಯಾಕಶ್ಯಪನು ತನಗೆ ಇನ್ನು ಮೇಲೆ ತನ್ನ ಅಣ್ಣನ ಮರಣದ ಬಗ್ಗೆ ಸೇಡು ತೀರಿಸಿಕೊಳ್ಳಲಿಕ್ಕೆ ಯಾವದೂ ಅಡ್ಡಿಯು ಉಳಿಯಲಿಲ್ಲವೆಂದು ನೆನಿಸಿ, ಯಾವತ್ತು ರಾಜರನ್ನು ಯುದ್ಧದಲ್ಲಿ ಗೆದ್ದು, ಇಂದ್ರಪದವನ್ನು ಸಹ ತೆಗೆದುಕೊಂಡು, ಯಾವತ್ತರಿಗೂ ದುಸ್ಸಹವಾದ ಛಲವನ್ನು ಮಾಡಲಿಕ್ಕೆ ಹತ್ತಿದನು. ಇದರಿಂದ ಆ ಯಾವತ್ತರು ಹಿರಣ್ಯಾಕಶ್ಯಪನ ಮರಣದ ಸಲುವಾಗಿ ಪರಮೇಶ್ವರನನ್ನು ಪ್ರಾರ್ಥಿಸಿದರು. ಆಗ ಪರಮೇಶ್ವರನು ಯಾವ ಖಣಿಯಲ್ಲಿ ಇದ್ದಲಿಗಳು ಉತ್ಪನ್ನವಾಗುತ್ತವೋ ಅದೇ ಖಣಿಯಲ್ಲಿ ವಜ್ರವನ್ನು ಉತ್ಪನ್ನ ಮಾಡುವಂತೆ ದೈತ್ಯಕುಲದಲ್ಲಿ ಮತ್ತು ಪ್ರತ್ಯಕ್ಷ ಹಿರಣ್ಯಾಕಶ್ಯಪನ ಹೊಟ್ಟೆಯಲ್ಲಿ ಅತ್ಯಂತ ಸುಶೀಲ, ಶಾಂತ ಮತ್ತು ಸಾಧು ಸಜ್ಜನರ ಪಕ್ಷಾಭಿಮಾನಿಯಾದ ಮಹಾನ್ ಭಗವದ್ಭಕ್ತ ಪ್ರಹ್ಲಾದನನ್ನು ಹುಟ್ಟಿಸಿದನು. ಪ್ರಹ್ಲಾದನ ಮನಸ್ಸು ಚಿಕ್ಕಂದಿನಿಂದಲೂ ಶ್ರೀವಿಷ್ಣುವಿನ ಭಜನ ಪೂಜನದ ಹೊರತಾಗಿ ಎರಡನೇ ಯಾವ ಕಡೆಗೂ ತೊಡಗಲಿಲ್ಲ. ಅವನ



ಶ್ರೀ ನೃಸಿಂಹಾವತಾರ.　　C. P. D.

ಹೀಯಾಳಿಸಿ ಕೇಳಿದನು. ಅದಕ್ಕೆ ಪ್ರಹ್ಲಾದನು “ ಹೌದು ” ಎಂದು ಉತ್ತರ ಕೊಟ್ಟನು. ಸ್ವಲ್ಪ ಹೊತ್ತಿನ ತರುವಾಯ ಆ ಕಂಬದೊಳಗಿಂದ ಭಯಂಕರ ಧ್ವನಿಯು ಹೊರಟು, ಅದರೊಳಗಿಂದ ಶ್ರೀ ನರಸಿಂಹನ ರೂಪವನ್ನು ಧರಿಸಿದ ವಿಷ್ಣುವು ಹೊರಗೆ ಬಂದನು. ಅವನನ್ನು ನೋಡಿದವನೇ ಹಿರಣ್ಯಕಶ್ಯಪನು ತನ್ನ ಗದೆಯನ್ನೆತ್ತಿ ಅವನ ಮೇಲೆ ಸಾಗಿ ಹೋಗಲು ಇಬ್ಬರೊಳಗೂ ಯುದ್ಧವು ಪ್ರಾರಂಭವಾಯಿತು. ಆ ಯುದ್ಧದಲ್ಲಿ ಶ್ರೀ ನರಸಿಂಹನು ಹಿರಣ್ಯಕಶ್ಯಪನನ್ನು ಚೆನ್ನಾಗಿ ಜರ್ಜರ ಮಾಡಿ ಅವನನ್ನು ತನ್ನ ತೊಡೆಯ ಮೇಲೆ ಅಡ್ಡ ಮಲಗಿಸಿಕೊಂಡು ಅವನ ಹೊಟ್ಟೆಯನ್ನು ಸೀಳಿದನು. ಆಗ ಪ್ರಹ್ಲಾದನು ಶ್ರೀ ವಿಷ್ಣುವಿನನ್ನು ಸ್ತುತಿಸಿ ಅವನ ಸಿಟ್ಟನ್ನು ಶಾಂತಮಾಡಿ ತನ್ನ ತಂದೆಗೆ ಸದ್ಗತಿಯಾಗಬೇಕೆಂದು ಬೇಡಿಕೊಂಡನು. ಹಿರಣ್ಯಕಶ್ಯಪನ ತರುವಾಯ ಅವನ ಸಿಂಹಾಸನದ ಮೇಲೆ ಪ್ರಹ್ಲಾದನು ಕುಳಿತು ಹಿರಣ್ಯಕಶ್ಯಪನ ಯಾವತ್ತು ರಾಜ್ಯದ ಅಧಿಪತಿಯಾದನು.

---

## ೫. ದಕ್ಷಪ್ರಜಾಪತಿಯ ಯಜ್ಞವು ಹಾಗೂ ವೀರಭದ್ರಾವತಾರವು.

ಒಮ್ಮೆ ಶಿವ, ಬ್ರಹ್ಮದೇವ ಮೊದಲಾದ ದೇವತೆಗಳು ಮತ್ತು ವಸಿಷ್ಠ ಮೊದಲಾದ ಮಹಾನ್ ಋಷಿಗಳು ಸಭೆಯಲ್ಲಿ ಕುಳಿತಿರಲು ದಕ್ಷಪ್ರಜಾಪತಿಯು ಅಲ್ಲಿಗೆ ಬಂದನು. ದಕ್ಷನು ಸಭೆಗೆ ಬರಲಾಗಿ ಸಭೆಯಲ್ಲಿದ್ದ ಯಾವತ್ತರು ಎದ್ದು ನಿಂತು ಅವನಿಗೆ ಸ್ವಾಗತ ಮಾಡಿದರು. ಆದರೆ ಶಂಕರನು ಮತ್ತು ಬ್ರಹ್ಮದೇವನು ಮಾತ್ರ ಏಳಲಿಲ್ಲ. ಬ್ರಹ್ಮದೇವನು ತನಗಿಂತಲು ಹಿರಿಯನಿರುವ ಮೂಲಕ ಅವನು ಏಳದೆ ಇದ್ದುದ್ದು ದಕ್ಷನಿಗೆ ವಿಶೇಷ ಕೆಡಕು ಅನ್ನಿಸಲಿಲ್ಲ. ಆದರೆ ಶಂಕರನಿಗೆ ದಕ್ಷನ ಮಗಳಾದ ಸತಿಯನ್ನು ಲಗ್ನಮಾಡಿಕೊಟ್ಟದ್ದರಿಂದ ತನ್ನ ಅಳಿಯನು ಎದ್ದುನಿಂತು ತನಗೆ ಮಾನ ಮಾಡಲಿಲ್ಲವೆಂದು ದಕ್ಷನು ಬಹಳ ಸಿಟ್ಟಿಗೆದ್ದು ಕಣ್ಣು ಕೆಂಪಗೆ ಮಾಡಿ ಶಂಕರನಿಗೆ ಬಾಯಿಗೆ ಬಂದಂತೆ ನಿಂದಿಸಲಿಕ್ಕೆ ಹತ್ತಿ

ದನು. ಅದಕ್ಕೆ ಶಂಕರನು ಏನೂ ಉತ್ತರ ಕೊಡಲಿಲ್ಲ. ಅದರಿಂದಂತೂ ದಕ್ಷನ ಸಿಟ್ಟು ಪರಮಾವಧಿಗೆ ಹೋಗಿ ಅವನು ಶಂಕರನಿಗೆ– " ನೀನು ಯಾವತ್ತು ದೇವತೆಗಳಲ್ಲಿ ಅಮಂಗಲನು ಮತ್ತು ದುಷ್ಟನು ಇರುವದರಿಂದ ನಿನಗೆ ಯಜ್ಞದೊಳಗಿನ ದ್ರವ್ಯಗಳಲ್ಲಿಯ ಪಾಲು ಎಂದೂ ದೊರೆಯಲಿಕ್ಕಿಲ್ಲ " ಎಂದು ಶಾಪವನ್ನು ಕೊಟ್ಟನು. ಆದರೂ ಶಂಕರನು ಸುಮ್ಮನಿದ್ದನು. ಆದರೆ ದಕ್ಷನು ಈ ಪ್ರಕಾರ ತನ್ನ ಯಜಮಾನನಾದ ಶಂಕರನಿಗೆ ಅಪಮಾನ ಮಾಡಿದ್ದನ್ನು ಕಂಡು ನಂದಿಗೆ ಬಹಳ ಸಿಟ್ಟು ಬಂದು, ನಂದಿಯು ದಕ್ಷನಿಗೆ ತಿರುಗಿ ಶಾಪವನ್ನು ಕೊಟ್ಟನು.

ಈ ಸಂಗತಿಯು ಸಂಭವಿಸಿದ ಕೆಲವು ದಿವಸಗಳ ನಂತರ ದಕ್ಷನು ಒಂದು ಯಜ್ಞವನ್ನು ಆರಂಭ ಮಾಡಿ ಆ ಯಜ್ಞಕ್ಕೆ ಯಾವತ್ತು ದೇವತೆಗಳಿಗೆ ಬಹಳ ಆಗ್ರಹದಿಂದ ಕರೆಸಿದನು. ಆದರೆ ಶಂಕರನಿಗೂ ಅವನ ಪತ್ನಿಯಾದ ತನ್ನ ಮಗಳಿಗೂ ಮಾತ್ರ ಬೇಕಂತಲೇ ಕರೆಯಿಸುವದನ್ನು ಬಿಟ್ಟನು. ಹಿಂದಕ್ಕೆ ದೇವತೆಗಳ ಸಭೆಯಲ್ಲಿ ಮಾವ ಅಳಿಯರ ನಡುವೆ ಆದ ಕಲಹವು ಸತಿಗೆ ಅಂದರೆ ದಕ್ಷನ ಮಗಳಿಗೆ ಗೊತ್ತಿದ್ದಿಲ್ಲ. ಅವಳು ತನ್ನ ತವರುಮನೆಯಲ್ಲಿ ನಡೆದಿರುವ ಯಜ್ಞ ಸಮಾರಂಭಕ್ಕೆ ತನ್ನನ್ನು ಕರೆಯಿಸಲಿಕ್ಕೆ ತನ್ನ ತಂದೆಯು ಮರೆತಿರಬಹುದೆಂದು ಎಣಿಸಿ, ಆ ಯಜ್ಞ ಸಮಾರಂಭವನ್ನು ನೋಡಲಿಕ್ಕೆ ತಾನು ಹೋಗಬೇಕೆಂದು ಉತ್ಕಂಠಿತಳಾಗಿ, ತನಗೆ ಅಲ್ಲಿಗೆ ಹೋಗಲಿಕ್ಕೆ ತನ್ನ ಪತಿಯಾದ ಶಂಕರನ ಅಪ್ಪಣೆಯನ್ನು ಕೇಳಿದಳು. ಆಗ ಶಂಕರನು –" ನಮ್ಮ ಆಪ್ತರ ಮತ್ತು ಇಷ್ಟಮಿತ್ರರ ಮನೆಯಲ್ಲಿ ಮಂಗಲಕಾರ್ಯಗಳಾದರೆ ಆಮಂತ್ರಣದ ದಾರಿಯನ್ನು ನೋಡದೆ ಅಲ್ಲಿಗೆ ಹೋಗಲಿಕ್ಕೆ ಅಡ್ಡಿ ಇಲ್ಲ. ಆದರೆ ನೀನು ಈ ಸಮಯಕ್ಕೆ ಅಲ್ಲಿಗೆ ಹೋದರೆ ನಿನಗೆ ಬಹಳ ಅವಮಾನವಾದೀತು. ಹಾಗೂ ಅದರಿಂದ ನಿನಗೆ ಅತಿಶಯ ದುಃಖವಾದೀತು. ಆದುದರಿಂದ ನೀನು ಅಲ್ಲಿಗೆ ಹೋಗಬೇಡ ಹಾಗೂ ನಿನ್ನ ತಂದೆಯ ಮೋರೆಯನ್ನು ಸಹ ನೋಡಬೇಡ " ಎಂದು ಹೇಳಿದನು. ಆದರೆ ಆಕೆಗೆ ತನ್ನ ತಂದೆಯು ತನ್ನ ಅವಮಾನ ಮಾಡುವನೆಂಬ ಭೀತಿಯು ವ್ಯರ್ಥವಾದುದೆಂತಲೂ, ತನ್ನ ಗಂಡನು ತನಗೆ ತನ್ನ ತವರು

ಮನೆಗೆ ಯಜ್ಞ ಸಮಾರಂಭವನ್ನು ನೋಡಲಿಕ್ಕೆ ಕಳುಹಿಸಿಕೊಡಲಾರದೆ ಈ ಪ್ರಕಾರ ಸುಳ್ಳು ಸೊಟ್ಟ ನೆವವನ್ನು ಹೇಳುತ್ತಿರಬಹುದೆಂತಲೂ ತಿಳಿದುಕೊಂಡು ತನ್ನ ಗಂಡನ ಮೇಲೆ ಸಿಟಗೊಂಡು ಅವನ ಗಣಗಳನ್ನು ( ಸೇವಕರನ್ನು ) ತನ್ನ ಸಂಗಡ ಕರೆದುಕೊಂಡು ತನ್ನ ತಂದೆಯ ಮನೆಗೆ 'ಹೋದಳು. ಆದರೆ ಶಂಕರನು ಮೊದಲೇ ಹೇಳಿದ ಪ್ರಕಾರ ಆಕೆಗೆ ಅಲ್ಲಿ ಹೋದ ಕೂಡಲೆ ಅಪಮಾನವಾಯಿತು. ದಕ್ಷನ ಮನೆಯಲ್ಲಿ ಯಾರೂ ಆಕೆಗೆ " ಬಾ ಕುಳಿತುಕೋ" ಎಂದು ಕರೆಯಲಿಲ್ಲ. ಆಕೆಯ ಗೂಡ ಯಾರೂ ಬಾಯಿ ಬಿಚ್ಚಿ ಮಾತಾಡಲಿಲ್ಲ. ಆಕೆಯು ಬಂದದ್ದರಿಂದ ಯಾರಿಗೂ ಆನಂದವಾಗಲಿಲ್ಲ. ಹಾಗೂ ಯಜ್ಞ ದ್ರವ್ಯಗಳಲ್ಲಿಯ ಭಾಗವನ್ನು ಶಂಕರನಿಗಾಗಿ ತೆಗೆದು ಇಡಲಿಲ್ಲ. ಇದರಿಂದ ಸತಿಗೂ ಆಕೆಯ ಸಂಗಡ ಹೋಗಿದ್ದ ಗಣಗಳಿಗೂ ಬಹಳ ಸಿಟ್ಟು ಬಂತು. ಆಗ ಸತಿಯು ತನ್ನ ತಂದೆಗೆ ಬೇಕಾದಷ್ಟು ನಿಂದಿಸಿ ಮಾತಾಡಿ– " ನಿನ್ನಂಥ ದುಷ್ಟ ಪಿತನಿಂದ ದೊರಕಿದ ಈ ಶರೀರವನ್ನು ನನಗೆ ಏನು ಮಾಡತಕ್ಕದ್ದದೆ? " ಎಂದು ನುಡಿದು ಯಜ್ಞಕುಂಡದಲ್ಲಿ ಹಾರಿಕೊಂಡಳು. ಶಂಕರನ ಗಣಗಳಾದರೂ ಅಲ್ಲಿ ಬಹಳ ಗದ್ದಲವನ್ನು ಮಾಡಿ ದಕ್ಷನ ಕಡೆಯವರ ಕೂಡ ಯುದ್ಧವನ್ನು ಮಾಡಿದರು. ಈ ವರ್ತಮಾನವು ಶಂಕರನಿಗೆ ನಾರದನ ಬಾಯಿಂದ ಗೊತ್ತಾಗಲು ಶಂಕರನು ಸಿಟ್ಟಿನಿಂದ ತನ್ನ ಜಡೆಯನ್ನು ಭೂಮಿಗೆ ಅಪ್ಪಳಿಸಿದನು. ಆ ಕೂಡಲೇ ವೀರಭದ್ರನೆಂಬ ಪ್ರಚಂಡ ಶಕ್ತಿಯ ಪುರುಷನು ಉತ್ಪನ್ನನಾಗಿ, ಅವನು ಶಂಕರನ ಮುಂದೆ ತನ್ನೆ ಎರಡೂ ಕೈಗಳನ್ನು ಮುಗಿದುಕೊಂಡು ಬಂದು ನಿಂತು–" ಏನು ಅಪ್ಪಣೆಯುಂಟು ? " ಎಂದು ಕೇಳಿದನು. ಆಗ ಶಂಕರನು ವೀರಭದ್ರನಿಗೆ– " ನೀನು ಈಗಲೇ ಹೋಗಿ ದಕ್ಷಪ್ರಜಾಪತಿಯ ಯಜ್ಞವನ್ನು ನಾಶಮಾಡಿ ಅವನ ವಧ ಮಾಡು " ಎಂದು ಅಪ್ಪಣೆ ಮಾಡಿದನು. ಆ ಅಪ್ಪಣೆಯ ಪ್ರಕಾರ ವೀರಭದ್ರನು ಅಲ್ಲಿಗೆ ಹೋಗಿ ಆ ಯಜ್ಞವನ್ನು ನಾಶ ಮಾಡಿ ದಕ್ಷನ ಶಿರಚ್ಛೇದವನ್ನು ಮಾಡಿ ಆ ಶಿರವನ್ನು ಅಗ್ನಿಕುಂಡದಲ್ಲಿ ಒಗೆದನು. ಈ ಪ್ರಕಾರ ಯಾವತ್ತು ಸಂಗತಿಗಳು ಸಂಭವಿಸಿದ ತರುವಾಯ ಯಾವತ್ತು ದೇವತೆಗಳು ಶಂಕರನ ಕಡೆಗೆ ಹೋಗಿ ಅವನ ಸಿಟ್ಟನ್ನು ಶಾಂತ ಪಡಿಸಿ ಅವನಿಗೆ– "ದಕ್ಷನು ಮಾಡಿದ ಅಪರಾಧದ ಸಲುವಾಗಿ ಅವನಿಗೆ ಯೋಗ್ಯ ಶಾಸನವಾದದ್ದಂತೂ


ಸರಿಯಾಯಿತು. ಈಗ ಅವನಿಗೆ ತನ್ನ ಅಪರಾಧದ ಸಲುವಾಗಿ ಬಹಳ ಪಶ್ಚಾತ್ತಾಪವಾಗಿರುತ್ತದೆ. ಅವನು ತಮ್ಮ ಕ್ಷಮೆಯನ್ನು ಬೇಡಿಕೊಳ್ಳುತ್ತಿದ್ದು ಅವನ ಮೇಲೆ ದಯವನ್ನು ತೋರಿಸಬೇಕು." ಎಂದು ಹೇಳಿಕೊಂಡರು. ಆಗ ಶಂಕರನು ಅವರ ಮಾತಿಗೆ ಒಪ್ಪಿ ದಕ್ಷನ ಧಡದ ಮೇಲೆ ಹೋತಿನ ಶಿರವನ್ನು ಇಟ್ಟು ಅವನನ್ನು ಮೇಲಕ್ಕೆ ಎಬ್ಬಿಸಿರೆಂದು ಹೇಳಿದನು. ಆ ಪ್ರಕಾರ ಅವರು ಮಾಡಿ ದಕ್ಷನು ಪ್ರಾರಂಭಿಸಿದ್ದ ಯಜ್ಞವನ್ನು ಅವನ ಕೈಯಿಂದ ಯಥಾಸಾಂಗ ಮಾಡಿಸಿದರು. ಅಗ್ನಿ ಕುಂಡದಲ್ಲಿ ಹಾರಿಕೊಂಡಿದ್ದ ಸತಿಯು ಆತರುವಾಯ ಹಿಮಾಲಯ ಪರ್ವತದ ಹೊಟ್ಟೆಯಿಂದ ಜನ್ಮವನ್ನು ತೆಗೆದುಕೊಂಡು ಶಂಕರನನ್ನೇ ಲಗ್ನ ಮಾಡಿಕೊಂಡಳು. ಈ ಎರಡನೇ ಜನ್ಮದಲ್ಲಿ ಅವಳು ಪರ್ವತದ ಹೊಟ್ಟೆಯಲ್ಲಿ ಹುಟ್ಟಿದ ಕಾರಣ ಅವಳಿಗೆ ಪಾರ್ವತಿಯೆಂಬ ಹೆಸರು ಬಂತು.

---

## ೬. ಧ್ರುವನ ನಿಶ್ಚಯದ ಫಲವು.

ಪೂರ್ವ ಕಾಲದಲ್ಲಿ ಸೂರ್ಯವಂಶದೊಳಗೆ ಉತ್ತಾನಪಾದನೆಂಬ ರಾಜನು ಆಗಿ ಹೋದನು. ಅವನಿಗೆ ಸುರುಚಿ ಮತ್ತು ಸುನೀತಿಯೆಂಬ ಇಬ್ಬರು ರಾಣಿಯರು ಇದ್ದು ಮೊದಲನೆಯವಳ ಹೊಟ್ಟೆಯಿಂದ ಉತ್ತಮನು ಹಾಗೂ ಎರಡನೇಯವಳ ಹೊಟ್ಟೆಯಿಂದ ಧ್ರುವನು ಈ ಪ್ರಕಾರ ಇಬ್ಬರು ಗಂಡು ಮಕ್ಕಳು ಇದ್ದರು. ಆದರೆ ರಾಜನ ಪ್ರೇಮವು ಉತ್ತಮನ ಮೇಲೆ ಇದ್ದಷ್ಟು ಧ್ರುವನ ಮೇಲೆ ಇದ್ದಿಲ್ಲ. ಒಂದು ಸಾರೆ ಉತ್ತಾನಪಾದ ರಾಜನು ತನ್ನ ಪ್ರಿಯಕರ ಮಗನಾದ ಉತ್ತಮನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಕುಳಿತಿದ್ದನು. ಆಗ ಧ್ರುವನು ತನ್ನ ತಂದೆಯ ಹತ್ತರ ಹೋಗಿ ತಾನೂ ಉತ್ತಮನಂತೆ ಅವನ ತೊಡೆಯ ಮೇಲೆ ಹೋಗಿ ಕುಳಿತುಕೊಳ್ಳಬೇಕೆಂಬ ಅಪೇಕ್ಷೆಯಿಂದ ತನ್ನ ಎರಡು ಕೈಗಳನ್ನು ಅವನ ಮುಂದೆ ಚಾಚಿದನು. ಆದರೆ ರಾಜನು ತನ್ನ ಮೇಲೆ ಸುರುಚಿಯು ಸಿಟ್ಟಿಗೆದ್ದಾಳೆಂಬ ಭೀತಿಯಿಂದ ಧ್ರುವನ ಕಡೆಗೆ ನೋಡಿಯೂ ನೋಡದವನಂತೆ ಇದ್ದು ಸುರುಚಿಯ ಕಡೆಗೆ ಮಾತ್ರ ನೋಡಿದನು.

ಅಲ್ಲಿ ಅವನ ಮಲತಾಯಿಯಾದ ಸುರುಚಿಯು ಇದ್ದಳು. ಅವಳಿಗೆ ಧ್ರುವನು ಈ ಪ್ರಕಾರ ರಾಜನ ತೊಡೆಯ ಮೇಲೆ ತನ್ನ ಮಗನ ಜೋಡಿಗೆ ಬಂದು ಕೂಡ್ರುವದು ಸೇರಲಿಲ್ಲ. ಆಗ ಸುರುಚಿಯು ಧ್ರುವನ ಮನಸ್ಸಿಗೆ ಹತ್ತುವಂತೆ–" ನಿನಗೆ ರಾಜನ ತೊಡೆಯ ಮೇಲೆ ಬಂದು ಕುಳಿತುಕೊಳ್ಳುವ ಯೋಗ್ಯತೆ ಇಲ್ಲ. ಇಲ್ಲಿಂದ ಎದ್ದು ನಡೆ" ಎಂದು ಬಿರಿಸು ನುಡಿಗಳನ್ನು ಮಾತಾಡಿ ಅವನನ್ನು ಅಲ್ಲಿಂದ ಕಳುಹಿಕೊಟ್ಟಳು. ಈ ವಿವರವನ್ನು ಧ್ರುವನು ತನ್ನ ತಾಯಿಯಾದ ಸುನೀತಿಯ ಮುಂದೆ ಬಂದು ಹೇಳಿದನು. ಅದನ್ನು ಕೇಳಿ ಆವಳು ದೀನಸ್ವರದಿಂದ–" ಬಾಳಾ, ಭಗವಂತನ ಕೃಪೆಯಕಿಂತ ಯಾವದೂ ಹೆಚ್ಚಿನದಲ್ಲ. ನೀನು ಸ್ವತಃ ಧರ್ಮದಿಂದ ನಡೆದು ಜನರಿಗೆ ಪರೋಪಕಾರ ಮಾಡಹತ್ತಿದರೆ ಭಗವಂತನು ನಿನ್ನ ಮೇಲೆ ಕೃಪೆಯನ್ನು ಮಾಡುವನು " ಎಂದು ಹೇಳಿದಳು. ಆದರಿಂದ ಧ್ರುವನಿಗೆ ಏನೂ ಸಮಾಧಾನವಾಗಲಿಲ್ಲ. ತಾನು ಯಾವಾಗ್ಗೆ ಭಗವಂತನ ಕಡೆಗೆ ಹೋಗಿ ಅವನ ದರ್ಶನವನ್ನು ತೆಗೆದುಕೊಂಡು ಅವನಿಂದ ಇಡೀ ಜಗತ್ತಿನಲ್ಲಿ ಹಿಂದಕ್ಕೆ ಯಾರೂ ಕುಳಿತುಕೊಳ್ಳದೆ ಇದ್ದಂಥ ಅತ್ಯಂತ ಎತ್ತರವಾದ ಮತ್ತು ನಿರಂತರವಾದ ಸ್ಥಾನವನ್ನು ದೊರಕಿಸಿಕೊಂಡು ಒರಬೇಕೆಂದು ನಿಶ್ಚಯ ಮಾಡಿ ಅರಣ್ಯಕ್ಕೆ ಹೊರಟು ಹೋದನು. ಅಲ್ಲಿ ಅವನಿಗೆ ದಾರಿಯಲ್ಲಿ ನಾರದಮುನಿಯ ದರ್ಶನವಾಯಿತು. ನಾರದನು ಧ್ರುವನ ಬಾಯಿಂದ ಯಾವತ್ತು ಸಂಗತಿಯನ್ನು ಕೇಳಿಕೊಂಡು ಅವನಿಗೆ ಭಗವಂತನ ಸ್ತುತಿಯನ್ನು ಮಾಡಲಿಕ್ಕೆ ಹೇಳಿದನು. ಆ ಪ್ರಕಾರ ಅವನು ಕೂಡಲೇ ಭಗವಂತನ ಸ್ತುತಿಯನ್ನು ಆರಂಭಮಾಡಿ ತನಗೆ ಎಷ್ಟು ಎಡರುಗಳು ಬಂದಾಗ್ಯೂ ಆ ಸ್ತುತಿಯನ್ನು ಒಂದೇ ಸವನೆ ನಡೆಸಿದನು. ಭಗವಂತನನ್ನು ಪ್ರಸನ್ನ ಮಾಡಿಕೊಳ್ಳದೆ ತಾನು ಎಂದೂ ತಿರುಗಿ ಹೋಗಲಿಕ್ಕಿಲ್ಲವೆಂಬ ನಿಶ್ಚಯದಿಂದ ಭಗವಂತನ ಸ್ತುತಿಯನ್ನು ಮಾಡಿದನು. ಇವನ ನಿಶ್ಚಯವನ್ನು ಕಂಡು ಭಗವಂತನಾದ ಶ್ರೀವಿಷ್ಣುವು ಸಂತೋಷಪಟ್ಟು ಅವನಿಗೆ ದರ್ಶನವನ್ನು ಕೊಟ್ಟು ಅವನಿಗೆ ಅವನ ಇಚ್ಛೆಯ ಪ್ರಕಾರ ಅತ್ಯಂತ ಎತ್ತರವಾದ ಮತ್ತು ನಿರಂತರವಾದ ಸ್ಥಾನವನ್ನು ಕೊಟ್ಟನು. ಧ್ರುವನು ಭಗವಂತನ ದರ್ಶನವನ್ನು ತೆಗೆದುಕೊಂಡು ಅತನ ಕೃಪೆಯನ್ನು ಪಡೆದು ಬಂದದ್ದಕ್ಕಾಗಿ ಅವನ ತಂದೆಯಾದ ಉತ್ತಾನಪಾದ ರಾಜನು ಬಹಳ ಆನಂದ



ಧ್ರುವ ನಾರಾಯಣ. C. P. D.

ವೇನನ ಜನ್ಮದ ಕಾಲಕ್ಕೆ ಜನರು ಬಹಳ ಆನಂದ ಪಟ್ಟಾಗ್ಯೂ ಅವರ ಆನಂದವು ಬಹಳ ದಿವಸ ತಡೆಯಲಿಲ್ಲ. ಯಾಕಂದರೆ ವೇನರಾಜಪುತ್ರನು ಬಹಳ ದುಷ್ಟನಿದ್ದನು. ಅವನು ನಿರುಪದ್ರವಿ ಪ್ರಾಣಿಗಳಿಗೆ ಸುಮ್ಮ ಸುಮ್ಮನೆ ಪೀಡಿಸಿ ಜನರಿಗೆ ಸಿಕ್ಕಸಿಕ್ಕಂತೆ ಹೊಡೆದು, ಅವರನ್ನು ವಿಧವಿಧವಾಗಿ ಹಿಂಸೆಪಡಿಸುತ್ತಿದ್ದನು. ಜನರು ಅವನನ್ನು ಕಂಡ ಕೂಡಲೆ ಗದ್ಗದವಾಗಿ ನಡಗುತ್ತಿದ್ದರು. ಅವನು ಯಾವಾಗ್ಗೆ ಯಾರಿಗೆ ಹೊಡೆದಾನು, ಯಾರಿಗೆ ಬೈದಾನು ಮತ್ತು ಯಾರಿಗೆ ಏನು ಮಾಡಿಯಾನು ಎಂಬುವದರ ನಿಶ್ಚಯವಿದ್ದಿಲ್ಲ. ಅವನು ತನ್ನೊಡನೆ ಆಡುತ್ತಿರುವವರ ಕೂಡ ಸಹ ನಿರ್ದಯದಿಂದ ನಡೆಯುತ್ತಿದ್ದನು. ತನ್ನ ಏಕ ಪುತ್ರನಾದ ವೇನನ ದುರ್ಗುಣಗಳನ್ನು ನೋಡಿ ಅಂಗರಾಜನಿಗೆ ಬಹಳ ವ್ಯಸನವಾಯಿತು. ಈ ಅವನ ವ್ಯಸನವು ತನಗೆ ಮಗನು ಹುಟ್ಟುವ ಮೊದಲು ಇದ್ದಂಥ ವ್ಯಸವದಕಿಂತ ಹೆಚ್ಚಾಯಿತು. ಅಂಗರಾಜನು ತನ್ನ ಮಗನ ದುರ್ಗುಣಗಳನ್ನು ತಿದ್ದಲಿಕ್ಕೆ ಬೇಕಾದಷ್ಟು ಉಪಾಯಗಳನ್ನು ಮಾಡಿದನು. ಆದರೆ ಆ ಮಗನು ಸುಧಾರಿಸಲಿಲ್ಲ. ಅಂಗರಾಜನು— “ ಕುಸಂತಾನದಕಿಂತ ನಿಸ್ಸಂತಾನವು ನೆಟ್ಟಗೆ. ಸದ್ಗುಣಿಗಳಾದ ಮಕ್ಕಳು ಹುಟ್ಟಿದರೆ ಅಂಥ ಮಕ್ಕಳಿಂದ ತಾಯಿತಂದೆಗಳಿಗೆ ಆನಂದವಾಗುವದು. ದುರ್ಗುಣಿಗಳಾದ ಮಕ್ಕಳು ಹುಟ್ಟಿದರೆ ಅಂಥ ಮಕ್ಕಳಿಂದ ತಾಯಿತಂದೆಗಳ ಜೀವಕ್ಕೆ ಯಾವಾಗಲು ಕಷ್ಟವಾಗುವದಲ್ಲದೆ ಅವರ ಕೀರ್ತಿಗೆ ಸಹ ಕಲಂಕವು ತಟ್ಟುವದು ” ಎಂದು ಯಾವಾಗಲು ತನ್ನ ಮನಸ್ಸಿನಲ್ಲಿ ಬಹಳ ಕುದಿಯುತ್ತಿದ್ದನು. ಈ ಪ್ರಕಾರ ಅವನು ಅಹೋರಾತ್ರಿ ತನ್ನ ದುರ್ಗುಣಿಯಾದ ಮಗನ ಸಲುವಾಗಿ ಕುದಿಯುತ್ತ ನಿರಾಶೆಯಿಂದ ಒಂದು ದಿವಸ ಯಾರಿಗೂ ತಿಳಿಯದಂತೆ ಎಲ್ಲಿಯೋ ದೂರ ಹೊರಟು ಹೋದನು. ಅವನು ಒಮ್ಮೆ ಹೋದವನು ತಿರುಗಿ ಬರಲಿಲ್ಲ. ಎಷ್ಟು ಹುಡುಕಿದಾಗ್ಯೂ ಅವನು ಸಿಗಲಿಲ್ಲ. ಹೋದವನು ಹೋಗೇ ಹೋದನು !

ಅಂಗರಾಜನು ಈ ಪ್ರಕಾರ ತನ್ನ ರಾಜ್ಯವನ್ನು ಬಿಟ್ಟು ಹೋದ ನಂತರ ಪ್ರಜೆಗಳ ಸಂರಕ್ಷಣವು ಯಾವ ರೀತಿಯಿಂದ ಆದೀತೆಂದು ಎಲ್ಲರೂ ಚಿಂತೆಯನ್ನು ಮಾಡತೊಡಗಿದರು. ವೇನನಿಗೆ ರಾಜ್ಯಾಭಿಷೇಕ ಮಾಡಿದ ನಂತರ ಸದ್ಬು

ದ್ಧಿಯು ಹುಟ್ಟೀತೆಂಬ ನಂಬಿಗೆಯಿಂದ ಪ್ರಧಾನರು ಮತ್ತು ಯಾವತ್ತು ಜನರು ಕೂಡಿಕೊಂಡು ವೇನನಿಗೆ ರಾಜ್ಯಾಭಿಷೇಕವನ್ನು ಮಾಡಿದರು. ಆದರೆ **" ನಾಯಿಯ ಬಾಲವನ್ನು ಆಳಿಗೆಯಲ್ಲಿ ಹಾಕಿದರೂ ಅದರ ಡೊಂಕು ತಿದ್ದಲರಿಯದು "** ಎಂಬಂತೆ ವೇನನ ದುರ್ಗುಣಗಳು ಹೆಚ್ಚಾದವೇ ಹೊರತು ಕಡಿಮೆಯಾಗಲಿಲ್ಲ. ವೇನನ ರಾಜ್ಯಾಭಿಷೇಕವಾದ ಕೂಡಲೆ ಅವನು ತನ್ನ ಪ್ರಜೆಗಳಿಗೆ ನಾನಾಪರಿಯಿಂದ ಉಪದ್ರವ ಕೊಡಹತ್ತಿದನು. ಅವನು ಕೊಟ್ಟ ಉಪದ್ರವದಿಂದ ಪ್ರಜೆಗಳಿಗೆ ಸಾಕುಸಾಕಾಗಿ ಹೋಯಿತು. " ದೇವರೇ ! ಬೇಗನೆ ನಮ್ಮ ಕಣ್ಣು ಮುಚ್ಚು; ಇಲ್ಲವೆ ನಮ್ಮ ರಾಜನ ಕಣ್ಣು ಮುಚ್ಚಿ ನಮ್ಮನ್ನು ಸಂರಕ್ಷಣ ಮಾಡು " ಎಂದು ಪ್ರಜೆಗಳು ದೇವರನ್ನು ಬೇಡಿಕೊಳ್ಳುವ ಪ್ರಸಂಗವು ಬಂತು. **" ನಾವಿಷ್ಣುಃ ಪೃಥ್ವೀಪತಿಃ "** ಎಂಬದಾಗಿ ಧರ್ಮಶಾಸ್ತ್ರವು ಸಾರುತ್ತಿದ್ದು ನಾನು ದೇವರ ಅಂಶವಿರುತ್ತೇನೆ. ಆದುದರಿಂದ ನೀವೆಲ್ಲರು ಅನ್ಯ ದೇವರನ್ನು ಪೂಜಿಸದೆ ನನ್ನನ್ನು ಪೂಜಿಸಿರಿ" ಎಂದು ವೇನರಾಜನು ಪ್ರಜೆಗಳಿಗೆ ಒತ್ತಾಯ ಮಾಡಹತ್ತಿದನು. ಅವನ ಕಾರಭಾರವೆಲ್ಲ ಮೂರ್ಖತನದಿಂದ ತುಂಬಿ ಹೋಯಿತು. ಧರ್ಮದಿಂದ ನಡೆಯುವದು ಅವನ ಪ್ರಜೆಗಳಿಗೆ ಅಶಕ್ಯವಾಯಿತು. ಅವನ ರಾಜ್ಯದಲ್ಲಿ ನ್ಯಾಯವು ಲೋಪವಾಯಿತು. ರಾಜಧರ್ಮವನ್ನು ರಾಜನು ಪಾಲಿಸದೆ ಇದ್ದುದರಿಂದ ಪ್ರಜಾಧರ್ಮವನ್ನು ಪ್ರಜರು ಪಾಲಿಸುವದನ್ನು ಬಿಟ್ಟರು. ದೇಶದಲ್ಲಿಯ ಜನರು ವೇನರಾಜನ ದುಷ್ಟ ಕಾರಭಾರದಿಂದ ಬೇಸತ್ತು ಹೋಗಿ ಅಧರ್ಮದಿಂದ ಆಚರಿಸುವ ರಾಜನನ್ನು ಕೊಲೆ ಮಾಡುವದರಲ್ಲಿ ಪಾಪವಿಲ್ಲೆಂದು ಯೋಚಿಸಿ, ವೇನರಾಜನ ಕೊಲೆಯನ್ನು ಮಾಡಿದರು. ಹಾಗೂ ವೇನರಾಜನ ಪಟ್ಟದ ಮೇಲೆ ಅವನ ಮಗನನ್ನು ಕುಳ್ಳಿರಿಸಿದರು. ಈ ಪ್ರಕಾರ ದುಷ್ಟರಾಜನ ಪಾರಪಾತ್ಯವನ್ನು ಅವನ ಪ್ರಜೆಗಳು ಮಾಡಿದರು.

**ರಾಜನು ದೇವರ ಅಂಶವಿರುವನು. ಆದುದರಿಂದ ಅವನು ತನ್ನ ರಾಜ್ಯಪರಿಪಾಲನವನ್ನು ಧರ್ಮದಿಂದ ಮಾಡಿದರೆ ಅವನಲ್ಲಿ ದೇವತ್ವವು ಉಳಿಯುವದು. ಇಲ್ಲದಿದ್ದರೆ ಅವನ ದೇವತ್ವವು ಹೊರಟು ಹೋಗಿ ಆ ಸ್ಥಳದಲ್ಲಿ ದಾನವತ್ವವು ಬರುವದು.**

# ೮. ಪೃಥುರಾಜನಿಗೆ ಪೃಥ್ವಿಯ ಪ್ರಾರ್ಥನೆಯು.

ವೇನರಾಜನ ಕಾಲಕ್ಕೆ ಅವನ ದುಷ್ಟತನದ ಮೂಲಕ ಅವನ ಪ್ರಜೆಗಳಿಗೆ ಯಾವದೊಂದು ಕೆಲಸ ಮಾಡಲಿಕ್ಕೆ ಮನಸ್ಸು ಆಗುವಂತೆ ಇದ್ದಿಲ್ಲ. ಒಕ್ಕಲತನ ಮಾಡುವವರು ಭೂಮಿಯ ಸಾಗುವಳಿಯ ಕಡೆಗೆ ದುರ್ಲಕ್ಷ್ಯಮಾಡಿದರು. ಇದರಿಂದ ಭೂಮಿಯ ಹುಟ್ಟುವಳಿಯು ಕಡಿಮೆಯಾಗಿ ಜನರು ಉಪವಾಸದಿಂದ ಸಾಯಲಿಕ್ಕೆ ಹತ್ತಿದರು. ಈ ಕಂಗಾಲ ಸ್ಥಿತಿಯು ವೇನರಾಜನ ಕಾಲಕ್ಕೆ ಆರಂಭವಾದದ್ದು ಪೃಥುರಾಜನು ಸಿಂಹಾಸನದ ಮೇಲೆ ಕುಳಿತ ತರುವಾಯ ಸಹ ಕೆಲವು ವರ್ಷ ಉಳಿಯಿತು. ಇದನ್ನು ಪೃಥುರಾಜನು ಕಂಡು ಪೃಥ್ವಿಯ ಮೇಲೆ ಸಿಟ್ಟಾಗಿ ಸ್ವತಃ ಪೃಥ್ವಿಗೆ ದಂಡನೆಯನ್ನು ಮಾಡಬೇಕೆಂದು ಯೋಚಿಸಿ ಪೃಥ್ವಿಯ ಕಡೆಗೆ ತನ್ನ ಬಾಣದ ಗುರಿಯನ್ನು ಹಿಡಿದು ತನ್ನ ಬಾಣಕ್ಕೆ ಹೆದೆಯನ್ನೇರಿಸುತ್ತಿರುವಷ್ಟರಲ್ಲಿ ಪೃಥ್ವಿಯು ಆಕಳದ ರೂಪದಿಂದ ರಾಜನಿಗೆ ಶರಣು ಬಂದು ಪ್ರಾರ್ಥಿಸಿದ್ದೇನಂದರೆ:— " ರಾಜನೇ ! ನಾನು ನಿಂಪರಾಧಿ ಸ್ತ್ರೀಯು ಇರುತ್ತೇನೆ. ನನ್ನ ಮೇಲೆ ನೀನು ನಿರರ್ಥಕವಾಗಿ ಸಿಟ್ಟಾಗಬೇಡ. ರಾಜನು ನನ್ನ ಆರೈಕೆಯನ್ನು ಚೆನ್ನಾಗಿ ಮಾಡದೆ ಇದ್ದುದರಿಂದಲೇ ನನ್ನ ಸಸಿವೃಕ್ಷಾದಿಗಳು ಒಣಗಿ ರಾಜ್ಯದಲ್ಲಿ ಕಾಳುಕಡಿಗಳು ಕಡಿಮೆಯಾದವು. ಇದರಿಂದ ಜನರು ಸಂಕಟ ಪಡಹತ್ತಿದರು. ಇದರಲ್ಲಿ ನನ್ನ ಕಡೆಗೆ ದೋಷವೇನದೆ ? ನಾನು ನೋಡಿದ ಕೂಡಲೆ ನನ್ನ ಮೊಲೆಗಳು ಹಾಲು ತುಂಬಿ ತೊರೆ ಬಿಡುವಂಥ ಕರುವನ್ನು ನನ್ನ ಮುಂದೆ ತಂದು ಬಿಡು; ಹಾಗೂ ನನ್ನ ಹಾಲು ಹಿಂಡಲಿಕ್ಕೆ ಚತುರ ಮನುಷ್ಯನನ್ನೂ ಪಾತ್ರೆಯನ್ನೂ ಸಿದ್ಧಮಾಡು " ಎಂದು ಹೇಳಿತು. ಅದರಂತೆ ರಾಜನು ಮಾಡಲಾಗಿ ಆ ಆಕಳವು ವೆಗ್ಗಳವಾಗಿ ಹಾಲು ಹಿಂಡಿತು.

**ಆಕಳದ ರೂಪವನ್ನು ಧರಿಸಿ ಪೃಥ್ವಿಯು ಹೇಳಿದ್ದರ ತಾತ್ಪರ್ಯವನ್ನು ಯಾವತ್ತು ರಾಜರು ತಿಳಿದುಕೊಂಡು ತಮ್ಮ ಪ್ರಜರ ಪರಿಪಾಲನವನ್ನು ಯೋಗ್ಯ ರೀತಿಯಿಂದ ಮಾಡಿದರೆ ಪ್ರಜರು ತಮ್ಮ ತಮ್ಮ ಭೂಮಿಗಳನ್ನು ಚೆನ್ನಾಗಿ ಸಾಗುವಳಿ ಮಾಡುವರು.**

ಇದರಿಂದ ಭೂಮಿಗಳು ಸುಪೀಕವಾಗಿ ಬೆಳೆದು, ಜನರಿಗೆ ಉಣ್ಣ ಲಿಕ್ಕೆ ಧಾನ್ಯಗಳು ವಿಪುಲವಾಗಿ ಸಿಕ್ಕು, ಜನರು ಸುಖದಿಂಡ ಜೀವಿಸುವರು.

---

## ೯. ಕರ್ತವ್ಯಾಚರಣದ ಪುಣ್ಯವು.

### ( ಪೃಥುರಾಜನ ಯಜ್ಞದ ಕಥೆಯು. )

ಒಂದು ನೂರು ಅಶ್ವಮೇಧ ಯಜ್ಞಗಳನ್ನು ಮಾಡುವವರಿಗೆ ಇಂದ್ರಪದವು ದೊರಕುವದೆಂದು ಪೂರ್ವದಲ್ಲಿ ಇದ್ದಂಥ ತಿಳುವಳಿಕೆಯ ಮೇರೆಗೆ ಪೃಥುರಾಜನು ನೂರು ಅಶ್ವಮೇಧ ಯಜ್ಞಗಳನ್ನು ಮಾಡಬೇಕೆಂದು ಆಲೋಚಿಸಿ ಪ್ರತಿಯೊಂದು ಅಶ್ವಮೇಧ ಯಜ್ಞದ ಕಾಲಕ್ಕೆ ಒಂದು ಕುದುರೆಯನ್ನು ಯಾವತ್ತು ದೇಶಗಳಲ್ಲಿ ಸಂಚರಿಸಲಿಕ್ಕೆ ಬಿಡುತ್ತಿದ್ದನು. ಆ ಕುದುರೆಯನ್ನು ಯಾವ ಅರಸನಾದರೂ ಕಟ್ಟಿ ಹಾಕಿದರೆ ಅಥವಾ ಅದಕ್ಕೆ ಮುಂದೆ ಹೋಗಲಿಕ್ಕೆ ಅತಂಕ ಮಾಡಿದರೆ ಅವನು ಆ ಅರಸನ ಮೇಲೆ ಸಾಗಿ ಹೋಗಿ ಅವನನ್ನು ಯುದ್ಧದಲ್ಲಿ ಗೆದ್ದು ತನ್ನ ಕುದುರೆಯನ್ನು ಅವನ ಕಡೆಯಿಂದ ಬಿಡಿಸಿಕೊಂಡು ಬರುತ್ತಿದ್ದನು. ಈಪ್ರಕಾರ ಪೃಥುರಾಜನು ಮಾಡುತ್ತ ತೊಂಬತ್ತರೊಂಬತ್ತು ಅಶ್ವಮೇಧ ಯಜ್ಞಗಳನ್ನು ಮಾಡಿದನು. ಆ ಬಳಿಕ ಅವನು ನೂರನೇ ಯಜ್ಞವನ್ನು ಮಾಡುವದಕ್ಕಾಗಿ ಕುದುರೆಯನ್ನು ಯಜ್ಞಸ್ತಂಭಕ್ಕೆ ಕಟ್ಟಿ ಕಣ್ಣು ಮುಚ್ಚಿಕೊಂಡು ಪರಮೇಶ್ವರ ಪ್ರಾರ್ಥನೆಯನ್ನು ನಡೆಸಿದ್ದನು. ಇಷ್ಟರಲ್ಲಿ ಇಂದ್ರನು ಒಬ್ಬ ಋಷಿಯ ವೇಷದಿಂದ ಅಲ್ಲಿಗೆ ಬಂದು ಆ ಕುದುರೆಯನ್ನು ಬಿಚ್ಚಿಕೊಂಡು ಹೋದನು. ಇದನ್ನು ಪೃಥುರಾಜನ ಮಗನು ನೋಡಿ ಇಂದ್ರನ ಬೆನ್ನ ಹತ್ತಿ ಹೋಗಿ ಅವನಿಂದ ಆ ಕುದುರೆಯನ್ನು ಬಿಡಿಸಿ ತಂದನು. ಅದನ್ನು ರಾಜನು ಪುನಃ ಯಜ್ಞಸ್ತಂಭಕ್ಕೆ ಕಟ್ಟಲು ಇಂದ್ರನು ಕಪಟ ವೇಷದಿಂದ ಅಲ್ಲಿಗೆ ಬಂದು ಮೊದಲಿನಂತೆಯೇ ಅದನ್ನು ಯಜ್ಞಸ್ತಂಭದಿಂದ ಬಿಚ್ಚಿಕೊಂಡು ಒಯ್ದನು. ಆಗ ಪೃಥುರಾಜನ ಮಗನು ಪುನಃ ಅವನ ಬೆನ್ನ ಹತ್ತಿ ಹೋಗಿ ಆ ಕುದುರೆಯನ್ನು ಮೊದಲಿನಂತೆಯೇ ಬಿಡಿಸಿ ತಂದನು. ಈ ಪ್ರಕಾರ ಅನೇಕ ಸಾರೆ ಆಯಿತು. ಇದನ್ನು ನೋಡಿ ಅಲ್ಲಿ ಯಜ್ಞ

ಮಾಡಲಿಕ್ಕೆ ಕುಳಿತಿದ್ದ ಋಷಿಗಳು ಬೇಸತ್ತು ಇಂದ್ರನನ್ನೇ ಹೋಮಕುಂಡಕ್ಕೆ ಆಹುತಿಯಾಗಿ ಅರ್ಪಿಸಬೇಕೆಂದು ಸಿದ್ಧತೆಯನ್ನು ನಡೆಸಿದರು. ಆಗ ಬ್ರಹ್ಮದೇವನು ಅಲ್ಲಿಗೆ ಬಂದು ಪೃಥುರಾಜನಿಗೆ– **“ರಾಜನೇ, ನಿನ್ನ ನೂರು ಯಜ್ಞಗಳು ಇನ್ನೂ ಮುಗಿಯದಿದ್ದರೂ ನಿನ್ನ ಯೋಗ್ಯತೆಯು ಮತ್ತು ಕೀರ್ತಿಯು ಇಂದ್ರನಕಿಂತಲು ದೊಡ್ಡವಿರುವವು. ಇನ್ನು ನೀನು ಯಜ್ಞ ಮಾಡುವದನ್ನು ನಿಲ್ಲಿಸಿ ಭಕ್ತಿಯಿಂದ ಶ್ರೀಭಗವನ್ ಪರಮೇಶ್ವರನನ್ನು ವಶಮಾಡಿಕೋ. ನೀನು ಶುದ್ಧ ಆಚರಣದಿಂದ ಪ್ರಜೆಗಳ ಪಾಲನ ಮಾಡಿದರೆ ಅದರಿಂದಲೇ ನಿನಗೆ ಪುಣ್ಯವು ಪ್ರಾಪ್ತವಾಗುವದು. ಕರ್ತವ್ಯಾಚರಣದಲ್ಲಿಯೇ ನಿಜವಾದ ಪುಣ್ಯವಿರುತ್ತದೆ”** ಎಂದು ಉಪದೇಶ ಮಾಡಿದನು. ಬ್ರಹ್ಮದೇವನ ಈ ಉಪದೇಶದ ಪ್ರಕಾರ ಪೃಥುರಾಜನು ಮಾಡಲಾಗಿ ಯಾವತ್ತು ದೇವತೆಗಳು ಅವನಿಗೆ ಪ್ರಸನ್ನರಾದರು. ಆಗ ಅವನು ತನ್ನ ಮಗನಿಗೆ ರಾಜ್ಯಾಭಿಷೇಕವನ್ನು ಮಾಡಿ ತಾನು ವನಕ್ಕೆ ಹೋಗಿ ಕಂದಮೂಲಗಳನ್ನು ಭಕ್ಷಣ ಮಾಡುತ್ತ ಈಶ್ವರನ ಭಜನದಲ್ಲಿ ಕಾಲವನ್ನು ಕಳೆಯುತ್ತ ಮೋಕ್ಷವನ್ನು ಪಡೆದನು.

---

## ೧೦. ಅತಿಪ್ರೇಮದ ಪರಿಣಾಮವು.

### ( ಜಡಭರತನ ಕಥೆಯು. )

ಪೂರ್ವಕಾಲದಲ್ಲಿ ಭರತನೆಂಬ ಹೆಸರಿನ ದೊಡ್ಡ ರಾಜನು ಆಗಿ ಹೋದನು. ಅವನು ಪರಮ ಭಗವದ್ಭಕ್ತನಿದ್ದನು. ಅವನು ಬಹಳ ವರ್ಷಗಳ ಪರಿಯಂತರ ರಾಜ್ಯಭಾರವನ್ನು ಮಾಡಿದ ತರುವಾಯ ತನ್ನ ಮಗನು ಪ್ರಬುದ್ಧನಾದ ಕೂಡಲೇ ಅವನಿಗೆ ಪಟ್ಟವನ್ನು ಕಟ್ಟಿ ಗಂಡಕಿ ನದಿಯ ತೀರದಲ್ಲಿ ಒಂದು ಆಶ್ರಮವನ್ನು ಮಾಡಿಕೊಂಡು ಅಲ್ಲಿ ಈಶ್ವರ ಭಕ್ತಿಯನ್ನು ಮಾಡುತ್ತ ಇರಲಿಕ್ಕೆ ಹತ್ತಿದನು. ಅವನ ಅಂತಃಕರಣವು ಬಹಳ ಪ್ರೇಮಲವಿದ್ದ ಕಾರಣ ಅವನು ಭಜನ ಮಾಡುತ್ತಿದ್ದಾಗ್ಗೆ ಅವನ ನೇತ್ರಗಳಿಂದ ಪ್ರೇಮಾಶ್ರುಗಳು ಸುರಿಯುತ್ತಿದ್ದವು. ಒಂದು ಸಾರೆ ಅವನು ನದಿಯ ಮೇಲೆ ಸ್ನಾನಕ್ಕಾಗಿ ಹೋದಾಗ್ಗೆ

ಇಲ್ಲಿ ಒಂದು ಚಿಗರಿಯು ನೀರಡಿಸಿ ಬಂದು ನೀರು ಕುಡಿಯಲಿಕ್ಕೆ ಹತ್ತಿತು. ಇಷ್ಟ ರಲ್ಲಿ ಒಂದು ಸಿಂಹವು ಅಲ್ಲಿಯೇ ಸಮೀಪದಲ್ಲಿ ಭಯಂಕರವಾದ ಗರ್ಜನೆ ಮಾ ಡುವದು ಕೇಳಿಸಿತು. ಆ ಕೂಡಲೆ ಆ ಚಿಗರಿಯು ಭಯಭೀತವಾಗಿ ತನ್ನ ಜೀವವನ್ನು ಉಳಿಸಿಕೊಳ್ಳುವದಕ್ಕಾಗಿ ಟಣ್ ಟಣ್ ಜಿಗಿಯುತ್ತ ಓಡಿ ಹೋಯಿತು. ಅದು ಬಸುರಿತ್ತು. ಮೇಲಾಗಿ ಅದಕ್ಕೆ ಓಡುವ ಶ್ರಮವು ಅತಿಶ ಯವಾಯಿತು ಅದರಿಂದ ಆ ಚಿಗರಿಯ ಗರ್ಭವು ನದಿಯೊಳಗೆ ಕಳಚಿ ಬಿತ್ತು. ಹಾಗೂ ತಾನೂ ಆ ನದಿಯನ್ನು ದಾಟಿ ಒಂದು ಕೊಳ್ಳದೊಳಗೆ ಬಿದ್ದು ಸತ್ತು ಹೋಯಿತು. ಚಿಗರಿಯ ಗರ್ಭದೊಳಗಿಂಡ ನದಿಯೊಳಗೆ ಬಿದ್ದ ಕಳಲು ನದಿ ಯ ಪ್ರವಾಹದೊಳಗೆ ಹರಿದು ಹೋಗುತ್ತಿದ್ದದ್ದನ್ನು ಕಂಡು ಭರತನು ಬಹಳ ಕನಿಕರದಿಂದ ಅದನ್ನು ತನ್ನ ಆಶ್ರಮದೊಳಗೆ ತೆಗೆದುಕೊಂಡು ಹೋಗಿ ಅದಕ್ಕೆ ದಿನಾಲು ತನ್ನ ಕೈಯಿಂದ ಉಣ್ಣಿಸಿ, ತಿನ್ನಿಸಿ, ಅದನ್ನು ಆಡಿಸಿ, ತನ್ನ ಜೀವದ ಕಿಂತಲು ಹೆಚ್ಚಾಗಿ ಅದನ್ನು ರಕ್ಷಣ ಮಾಡಿದನು. ಆ ಚಿಗರಿಯ ಮರಿಯು ಭರ ತನನ್ನು ಬಿಟ್ಟು ಎಲ್ಲಿಯೂ ಹೋಗುತ್ತಿದ್ದಿಲ್ಲ. ಭರತನಾದರೂ ಅದನ್ನು ಬಿಟ್ಟು ಎಲ್ಲಿಯೂ ಹೋಗುತ್ತಿದ್ದಿಲ್ಲ. ಅದು ಒಂದು ಕ್ಷಣಹೊತ್ತು ಎಲ್ಲಿಯಾದರೂ ಕಣ್ಣು ಮರೆಯಾದರೆ ಅವನ ಜೀವಕ್ಕೆ ಏನೂ ಸಮಾಧಾನವಾಗುತ್ತಿದ್ದಿಲ್ಲ. ಸ್ನಾನ ಸಂಧ್ಯಾ ಮಾಡುವ ಕಾಲಕ್ಕಾದರೂ ಅವನ ಲಕ್ಷ್ಯವು ಆ ಚಿಗರಿಯ ಮರಿಯ ಮೇ ಲೆಯೇ ಇರುತ್ತಿತ್ತು. ಅದು ಒಂದು ಸಾರೆ ಎಲ್ಲಿಯೋ ತಪ್ಪಿಸಿಕೊಂಡು ಹೋದಾ ಗ್ಗೆ ಅವನು ಅದು ತಿರುಗಿ ಬರುವವರೆಗೆ ಶುದ್ಧ ಹುಚ್ಚನಂತೆ ಆಗಿದ್ದನು. ಅವ ನಿಗೆ ಅದರ ಮೇಲಿನ ಪ್ರೇಮದಗೋಸ್ಕರ ಪರಮೇಶ್ವರ ಮೇಲಿನ ಭಕ್ತಿಯು ಸಹ ಮರೆತು ಹೋಗಿತ್ತು. ಅವನ ಅಂತ್ಯಕಾಲವು ಬಂದರೂ ಅವನಿಗೆ ಆ ಚಿಗ ರಿಯ ಪ್ರೇಮದ ಮೂಲಕ ದೇವರ ನಾಮಸ್ಮರಣ ಮಾಡುವದು ಸಹ ಆಗ ಲಿಲ್ಲ. ಇದರಿಂದ ಅವನ ಮುಂದಿನ ಜನ್ಮವು ಚಿಗರಿಯದೇ ಆಯಿತು. ಆದರೂ ಅವನ ಪೂರ್ವ ಜನ್ಮದ ಈಶ್ವರ ಭಕ್ತಿಯ ಮೂಲಕ ಅವನಿಗೆ ಹಿಂದಿನ ಯಾವ ತ್ತು ಸಂಗತಿಗಳು ನೆನಪಿಗೆ ಬರುತ್ತಿದ್ದವು. ಆ ಚಿಗರಿಯ ಜನ್ಮವು ತೀರಿದ ಮೇಲೆ ಅವನು ಬ್ರಾಹ್ಮಣ ಪುತ್ರನಾಗಿ ಹುಟ್ಟಿದನು. ಆಗ ಅವನು ಯಾರ ಮೇಲೂ ಪ್ರೇಮ ಮಾಡಬಾರದೆಂದು ನಿಶ್ಚಯ ಮಾಡಿ ಹುಚ್ಚನಂತೆ ನಡೆಯುತ್ತಿದ್ದನು.

ಅವನು ದೊಡ್ಡವನಾದರೂ ಓದಲಿಕ್ಕೆ ಅಥವಾ ಬರೆಯಲಿಕ್ಕೆ ಏನೂ ಕಲಿಯು ಲಿಲ್ಲ. ಅವನು ತನ್ನ ಶರೀರರಕ್ಷಣದ ಚಿಂತೆಯನ್ನು ಸಹ ವಿಶೇಷ ಮಾಡುತ್ತಿದ್ದಿಲ್ಲ. ಅವನು ದಿನಾಲು ಕೂಲಿಯನ್ನು ಮಾಡಿ ಅದರಿಂದ ನುಚ್ಚು ತವಡು ಸಿಕ್ಕರೂ ಅದನ್ನೇ ತಿಂದುಕೊಂಡು ಸ್ವಸ್ಥವಾಗಿ ಇರುತ್ತಿದ್ದನು. ಅವನು ನೋಡಲಿಕ್ಕೆ ಜಡ ಬುದ್ಧಿಯವನು ಕಾಣುತ್ತಿದ್ದ ಕಾರಣ ಜನರು ಅವನಿಗೆ **ಜಡಭರತ** ನೆಂದು ಕರೆಯುತ್ತಿದ್ದರು.

ಒಬ್ಬ ರಾಜನು ತನಗೆ ಪುತ್ರಸಂತತಿ ಯಾಗಬೇಕೆಂದು ದೇವಿಗೆ ಮನುಷ್ಯ ಬಲಿಯನ್ನು ಕೊಡುವದನ್ನು ಬೇಡಿಕೊಂಡು ಆ ಪ್ರಕಾರ ಬಲಿಯನ್ನು ಕೊಡಲಿಕ್ಕೆ ಒಬ್ಬ ಮನುಷ್ಯನನ್ನು ಹಿಡಿದು ತರಿಸಿದನು. ಆದರೆ ಆ ಮನುಷ್ಯನು ತನಗೆ ಬಲಿಕೊಡುವ ಹೊತ್ತಿಗೆ ಅಲ್ಲಿಂದ ಓಡಿ ಹೋದನು. ಆಗ ಅರಸನ ಆಳುಗಳು ಬಲಿ ಕೊಡಲಿಕ್ಕೆ ಎರಡನೇ ಮನುಷ್ಯನನ್ನು ಶೋಧಿಸಲಿಕ್ಕೆ ಅಡ್ಡಾಡುತ್ತಿದ್ದಾಗ್ಗೆ ಅವರು ಈ ಜಡಭರತನು ಒಂದು ಹೊಲವನ್ನು ಕಾಯುತ್ತ ಕುಳಿತಿದ್ದನ್ನೂ ಇವನು ಪುಷ್ಟಕಾಯನಾಗಿದ್ದನ್ನೂ ಕಂಡು ಇವನು ಬಲಿ ಕೊಡಲಿಕ್ಕೆ ಯೋಗ್ಯನಿರುತ್ತಾನೆಂದು ನಿರ್ಣಯಿಸಿ ಇವನನ್ನು ಹಿಡಿದು ಹಗ್ಗದಿಂದ ಕಟ್ಟಿಕೊಂಡು ಆ ದೇವಿಯ ಗುಡಿಗೆ ಒಯ್ದರು. ಅಲ್ಲಿ ರಾಜನು ಇವನ ಶಿರವನ್ನು ಛೇದಿಸಲಿಕ್ಕೆ ತನ್ನ ಶಸ್ತ್ರವನ್ನು ಮೇಲಕ್ಕೆ ಎತ್ತಲಾಗಿ ದೇವಿಯು ರಾಜನ ಶಸ್ತ್ರವನ್ನು ಹಿಡಿದು ಅವನಿಗೆ ಅಡ್ಡಿ ಮಾಡಿ ಜಡಭರತನ ಜೀವವನ್ನು ಉಳಿಸಿದ್ದಲ್ಲದೆ ಅವನನ್ನು ಹಿಡಿದುಕೊಂಡು ಬಂದವರಿಗೆ ಶಾಸನ ಮಾಡಿದಳು.

ಮತ್ತೊಂದು ಸಾರೆ ರಾಜನ ಸೇವಕರು ಅವನ ಪಲ್ಲಕ್ಕಿಯನ್ನು ಹೊರಲಿಕ್ಕೆ ಕೆಲವು ಭೋಯಿ ಜನರನ್ನು ಬಿಟ್ಟೀ ಹಿಡಿದುಕೊಂಡು ಒಯ್ದರು. ಅವರಲ್ಲಿ ಜಡಭರತನು ಒಬ್ಬನಿದ್ದನು. ಭರತನಿಗೆ ಪಲ್ಲಕ್ಕಿಯನ್ನು ಹೊರುವ ಅನುಭವವಿದ್ದಿಲ್ಲ. ಆದುದರಿಂದ ಅವನಿಗೆ ಇತರ ಭೋಯಿ ಜನರಂತೆ ನಡೆಯುವದು ಅಶಕ್ಯವಾಯಿತು. ಅವನ ನಡಿಗೆಯಿಂದ ಪಲ್ಲಕ್ಕಿಯಲ್ಲಿ ಕುಳಿತ ರಾಜನ ಮೈಯು ಅಗಳಾಡಲಿಕ್ಕೆ ಹತ್ತಿ ರಾಜನಿಗೆ ಸ್ವಲ್ಪ ಕಷ್ಟವಾಯಿತು. ಆಗ ರಾಜನು ತನ್ನ ಪಲ್ಲಕ್ಕಿಯನ್ನು ಹೊತ್ತಂಥ ಭೋಯಿ ಜನರ ಮೇಲೆ ಸಿಟ್ಟಿಗೆದ್ದನು. ಅದಕ್ಕೆ ಆ ಭೋಯಿ

ಜನರು– “ ಸ್ವಾಮಿಾ, ನಮ್ಮ ಕಡೆಗೆ ಏನೂ ದೋಷವಿಲ್ಲ. ನಾವು ವಾಡಿಕೆಯಂತೆ ಸರಿಯಾಗಿಯೇ ಬರುತ್ತಿದ್ದೇವೆ. ಆದರೆ ಈ ಹೊಸ ಭೋಯಿಯು ಅಡ್ಡತಿಡ್ಡ ಬರುತ್ತಿದ್ದಾನೆ ” ಎಂದು ಹೇಳಿದರು. ತರುವಾಯ ರಾಜನು ಜಡಭರತನಿಗೆ ಸಿಟ್ಟು ಮಾಡಿದನು. ಆದರೆ ಜಡಭರತನು ಅದರಿಂದ ಸಿಟ್ಟಿಗೇಳದೆ ಬಹಳ ಶಾಂತರೀತಿಯಿಂದ ದೊಡ್ಡ ತತ್ವಜ್ಞಾನಿಯಂತೆ–**“ ಸ್ವಾಮಿೂ, ಪಲ್ಲಕ್ಕಿಯನ್ನು ಹೊರುವವರ ದುಃಖವು ಪಲ್ಲಕ್ಕಿಯಲ್ಲಿ ಕುಳಿತವರಿಗೆ ಹೇಗೆ ಗೊತ್ತಾದೀತು ? ”** ಎಂದು ರಾಜನಿಗೆ ಉತ್ತರ ಕೊಡಲು, ಆ ರಾಜನು ಎರೆದು ಹೊಚ್ಚಿ ಮಲಗಿಸಿದಂತೆ ತಣ್ಣಗಾಗಿ ಭರತನ ಯೋಗ್ಯತೆಯನ್ನು ತಿಳಿದುಕೊಂಡು ಅವನಿಂದ ಉಪದೇಶವನ್ನು ತೆಗೆದುಕೊಂಡನು.

---

# ೧೧. ಭಗವಂತನ ನಾಮಸ್ಮರಣವು.

## ( ಅಜಾಮಿಳನ ಕಥೆಯು. )

ಈಗ ಇರುವ ಕನೋಜ ಶಹರದ ಹತ್ತರ ಕನ್ಯಾಕುಬ್ಜ ಎಂಬದೊಂದು ಪ್ರದೇಶವಿತ್ತು. ಅಲ್ಲಿ ಅಜಾಮಿಳ ಎಂಬೊಬ್ಬ ಬ್ರಾಹ್ಮಣನಿರುತ್ತಿದ್ದನು. ಅವನು ಬಹಳ ಕೆಟ್ಟ ಆಚರಣದವನು ಇದ್ದನು. ಅವನು ಯಾವಾಗಲು ಕಳವು, ಮೋಸ, ಬಲಾತ್ಕಾರ ಮುಂತಾದ ನಿಂದ್ಯ ಕೃತ್ಯಗಳಿಂದ ತನ್ನ ಉದರ ನಿರ್ವಾಹವನ್ನು ಸಾಗಿಸುತ್ತಿದ್ದನು. ಅದರಿಂದ ಜನರಿಗೆ ಬೇಕಾದ ಹಾನಿಯು ಆದಾಗ್ಯೂ ಅವನಿಗೆ ಅದರ ಚಿಂತೆಯು ಎಷ್ಟು ಮಾತ್ರಕ್ಕೂ ಇದ್ದಿಲ್ಲ. ಅವನಿಗೆ ಒಬ್ಬ ದಾಸಿಯಿಂದ ಹತ್ತು ಮಕ್ಕಳು ಹುಟ್ಟಿದರು. ಅವರಲ್ಲಿ ಎಲ್ಲರಿಗಿಂತ ಚಿಕ್ಕವನಾದ ಹುಡುಗನಿಗೆ ಅವನು “ ನಾರಾಯಣ ”ನೆಂದು ಹೆಸರು ಇಟ್ಟಿದ್ದನು. ನಾರಾಯಣನ ಮೇಲೆ ಅಜಾಮಿಳನ ಪ್ರೇಮವು ವಿಶೇಷವಿತ್ತು. ನಾರಾಯಣನು ಒಂದು ಕ್ಷಣಹೊತ್ತು ತನ್ನ ಕಣ್ಣ ಮುಂದೆ ಇಲ್ಲದಿದ್ದರೆ ಅಜಾಮಿಳನಿಗೆ ಬಹಳ ವ್ಯಸನವಾಗುತ್ತಿತ್ತು. ಅವನು ಅಜಾಮಿಳನ ಪಂಚಪ್ರಾಣನಾಗಿದ್ದನು. ಅಜಾಮಿಳನು ಮುದುಕನಾದಾಗ್ಯೂ ಅವನು ದೇವರ ಕಡೆಗಾಗಲಿ, ಧರ್ಮದ ಕಡೆಗಾಗಲಿ ಏನೂ ಲಕ್ಷ್ಯ ಕೊಡುತ್ತಿದ್ದಿ

ಲ್ಲ. ನಾರಾಯಣನು ತನ್ನ ಹತ್ತರ ಇಲ್ಲದಾದ ಕೂಡಲೇ ಅವನು ಅವನನು ಒಂದೇ ಸವನೇ ಕೀಸರಿಡುವಂತೆ ಕೂಗುತ್ತಿದ್ದನು. ಕೊನೆಗೆ ಅವನ ಮರಣದ ಸಮಯವು ಒರಲು “ ಇನ್ನು ಮುಂದೆ ನನ್ನ ಗತಿಯು ಏನಾದೀತು ? ” ಎಂಬ ಚಿಂತೆಯಿಂದ ಅವನ ಪ್ರಾಣವುಒಹಳ ವ್ಯಾಕುಲವಾಯಿತು. ಆದರೂ ಅವನು ತನ್ನ ಬಾಯಿಂದ “ನಾರಾಯಣಾ ನಾರಾಯಣಾ ” ಎಂದು ತನ್ನ ಮಗನನ್ನು ಕೂಗುತ್ತಲೇ ಇದ್ದನು. ಮಗನನ್ನು ಕೂಗುವ ನಿಮಿತ್ಯದಿಂದಾದರೂ ದೇವರ ಹೆಸರನ್ನು ಅವನು ತೆಗೆದುಕೊಂಡದ್ದರಿಂದ ವಿಷ್ಣುವು ಅವನ ಮೇಲೆ ಕೃಪೆಯನ್ನು ಮಾಡಿ ಅವನನ್ನು ವೈಕುಂಠಕ್ಕೆ ಕರೆದುಕೊಂಡು ಒರುವದಕ್ಕಾಗಿ ತನ್ನ ದೂತರನ್ನು ಕಳುಹಿಸಿದನು. ಇವನು ದುರಾಚಾರಿಯೂ ದುಷ್ಟನೂ ಇದ್ದುದರಿಂದ ಇವನನ್ನು ಯಮಲೋಕಕ್ಕೆ ಒಯ್ಯುವದೇ ಇಷ್ಟವೆಂದು ತಿಳಿದು ಯಮದೂತರು ಇವನ ಕಡೆಗೆ ಬಂದರು. ಅಲ್ಲಿ ವಿಷ್ಣು ದೂತರದೂ ಯಮದೂತರದೂ ಬೆಟ್ಟಿಯಾಗಿ “ ನೀವು ಇಲ್ಲಿ ಯಾಕೆ **ಬಂದಿರಿ?** ” ಎಂದು ಒಬ್ಬರು ಇನ್ನೊಬ್ಬರಿಗೆ ಕೇಳಿದರು. ಆಗ ಅವರವರೊಳಗೆ ನಡೆದ ಸಂಭಾಷಣವನ್ನು ಅಜಾಮಿಳನು ಕೇಳಿ ಪಶ್ಚಾತ್ತಾಪಪಟ್ಟು ಭಗವನ್ನಾಮಸ್ಮರಣ ಮಾಡಲಾಗಿ ಅವನ ಎಲ್ಲ ಪಾಪಗಳು ಲಯವನ್ನು ಹೊಂದಿದವು. ಇದರಿಂದ ಅವನು ತನ್ನಗೋಸ್ಕರ ವಿಷ್ಣುದೂತರು ತಂದಿದ್ದ ವಿಮಾನದಲ್ಲಿ ಕುಳಿತು ವೈಕುಂಠಕೆ ಹೋದನು.

**ನಮ್ಮ ಕಾಲು ನಮಗೆ ತಿಳಿಯದೆ ತಪ್ಪಿ ಬೆಂಕಿಯ ಮೇಲೆ ಬಿದ್ದಾಗ್ಯೂ ನಮ್ಮ ಕಾಲಿಗೆ ಬೆಂಕಿಯ ಜಳವು ತಗಲುವಂತೆ ಈಶ್ವರ ನಾಮಸ್ಮರಣವು ಬುದ್ಧಿ ಪೂರ್ವಕ ಆಗದೆ ಬಾಯಿಂದ ತಪ್ಪಿ ಆದಾಗ್ಯೂ ಅದರ ಸುಪರಿಣಾಮವು ಆಗುವದು.**

---

## ೧೨. ಬೃಹಸ್ಪತಿಯ ಮಾನಖಂಡನವು.

ಒಂದಾನೊಂದು ಸಾರೆ ದೇವತೆಗಳ ಸಭೆಯಲ್ಲಿ ಸುರಗುರುವಾದ ಬೃಹಸ್ಪತಿಯು ಹೋಗಿದ್ದನು. ಆ ಕಾಲಕ್ಕೆ ಐಶ್ವರ್ಯಮದದಿಂದ ಉನ್ನತ

ನೋಡ ಇಂದ್ರನು ಅವನಿಗೆ ಎದ್ದು ಮಾನ ಕೊಡತಕ್ಕದ್ದನ್ನು ಕೊಡಲಿಲ್ಲ. ಇದನ್ನು ನೋಡಿ ಬ್ರಹಸ್ಪತಿಯು ಬಹಳ ಸಿಟ್ಟಿಗೆದ್ದು ಅಲ್ಲಿಂದ ಸುಮ್ಮನೆ ತಿರುಗಿ ಹೊರಟು ಹೋದನು. ಹಿಂದುಗಡೆ ಕೆಲವು ಹೊತ್ತಿನ ಮೇಲೆ ಇಂದ್ರನಿಗೆ ಈ ಬಗ್ಗೆ ಪಶ್ಚಾತ್ತಾಪವಾಗಿ ತಾನು ಗುರುವಿನ ಕಡೆಗೆ ಹೋಗಿ ಅವನ ಕಾಲು ಹಿಡಿದುಕೊಂಡು ತನ್ನ ಅಪರಾಧದ ಬಗ್ಗೆ ಕ್ಷಮಿಸಲಿಕ್ಕೆ ಬೇಡಿಕೊಳ್ಳಬೇಕೆಂದು ನಿಶ್ಚಯ ಮಾಡಿ ಬ್ರಹಸ್ಪತಿಯ ಕಡೆಗೆ ಹೋದನು. ಆದರೆ ಆ ವೇಳೆಯಲ್ಲಿ ಆ ಸುರಗುರುವಿನ ಮನಸ್ಸಿಗೆ ಇಂದ್ರನ ಬೆಟ್ಟಿಯನ್ನು ತೆಗೆದುಕೊಳ್ಳುವದು ಬರಲಿಲ್ಲ. ಆದುದರಿಂದ ಅವನು ಇಂದ್ರನಿಗೆ ಬೆಟ್ಟಿ ಕೊಡುವದನ್ನು ತಪ್ಪಿಸಿದನು. ಇಂದ್ರನು ಅವನನ್ನು ಬೇಕಾದಷ್ಟು ಹುಡಿಕಿದಾಗ್ಯೂ ಅವನು ಇಂಥಲ್ಲಿ ಇರುತ್ತಾನೆಂಬದು ಇಂದ್ರನಿಗೆ ಗೊತ್ತಾಗಲಿಲ್ಲ.

ಇತ್ತಲಾ ಮೇಲ್ಕಂಡ ವರ್ತಮಾನವು ದಾನವರಿಗೆ ತಿಳಿಯಲಾಗಿ ಅವರಿಗೆ ಬಹಳ ಆನಂದವಾಯಿತು. ಇಂದ್ರ ಮೊದಲಾದ ದೇವತೆಗಳಿಗೆ ಸಂಕಟ ಬಂದ ಪ್ರಸಂಗದಲ್ಲಿ ಅವರಿಗೆ ಯೋಗ್ಯ ಬುದ್ಧಿವಾದವನ್ನು ಹೇಳಿ ಅವರ ಕಲ್ಯಾಣವನ್ನು ಮಾಡುವ ಗುರುವಾದ ಬ್ರಹಸ್ಪತಿಯು ಅವರ ಪಾಲಿಗೆ ಇನ್ನು ಮೇಲೆ ಇಲ್ಲದಂತಾದ್ದರಿಂದ ದೇವತೆಗಳ ಶಕ್ತಿಯು ಏಷ್ಟೋ ಪಾಲಿಗೆ ಕಡಿಮೆಯಾಯಿತೆಂತಲೂ, ಅವರ ಕೂಡ ತಾವು ಯುದ್ಧ ಮಾಡುವದಕ್ಕೆ ಇದೇ ಉಚಿತವಾದ ಸಮಯವೆಂತಲೂ ಆಲೋಚಿಸಿ ಆ ದಾನವರು ದೇವತೆಗಳ ಕೂಡ ಯುದ್ಧವನ್ನು ಪ್ರಾರಂಭ ಮಾಡಿದರು. ಈ ಪ್ರಸಂಗದಲ್ಲಿ ದೇವತೆಗಳಿಗೆ ಧೈರ್ಯ ಕೊಡಲಿಕ್ಕೆ ಸುರಗುರುವು ಇಲ್ಲದೇ ಇದ್ದುದರಿಂದ ದೇವತೆಗಳು ಕೈಕಾಲು ಕಳಕೊಂಡು ಆ ಯುದ್ಧದಲ್ಲಿ ಪರಾಭವವನ್ನು ಹೊಂದಿದರು. ಇನ್ನು ಮೇಲೆ ಏನು ಮಾಡಬೇಕೆಂಬದಾಗಿ ಯಾವತ್ತರಿಗೆ ಬಹಳ ಚಿಂತೆಯುಂಟಾಯಿತು. ಆ ಮೇಲೆ ಅವರು ಬ್ರಹ್ಮದೇವನ ಕಡೆಗೆ ಹೋದರು. ಆಗ ಬ್ರಹ್ಮದೇವನು ಅವರಿಗೆ–"ನೀವು ಐಶ್ವರ್ಯಮದದಿಂದ ಉನ್ಮತ್ತರಾಗಿ ನಿಮ್ಮ ಪ್ರತ್ಯಕ್ಷ ಗುರುಗಳಿಗೆ ಅಪಮಾನ ಮಾಡಿದ ಕಾರಣ ನೀವು ಈ ರೀತಿ ಅದರ ಫಲವನ್ನು ಅನುಭೋಗಿಸಬೇಕಾಯಿತು. ಈಗಂತೂ ಬ್ರಹಸ್ಪತಿಯ ಶೋಧವು ಎಲ್ಲಿಯೂ ಆಗಲೊಲ್ಲದು. ಆದುದರಿಂದ ನೀವು ಸ

ದ್ಯಕ್ಕೆ ತ್ವಷ್ಟ್ಯಪುತ್ರನಾದ ವಿಶ್ವರೂಪನನ್ನು ನಿಮ್ಮ ಗುರುವಾಗಿ ಮಾಡಿಕೊಂಡು ಆತನ ಆಜ್ಞೆಯ ಪ್ರಕಾರ ನಡೆಯಿರಿ. ಅಂದರೆ ನಿಮ್ಮ ಕಲ್ಯಾಣವಾಗುವದು." ಎಂದು ಹೇಳಿದನು. ಆ ಪ್ರಕಾರ ಅವರು ನಡೆದದ್ದರಿಂದ ಅವರಿಗೆ ಯುದ್ಧದಲ್ಲಿ ಜಯವಾಗಿ ಅವರ ಸಂಕಟವು ನಿವಾರಣವಾಯಿತು. ಆದಾಗ್ಯೂ ಇಂದ್ರನಿಗೆ ತಾನು ಗುರುವಿನ ಅಪಮಾನ ಮಾಡಿದ್ದನ್ನು ಎಂದಿಗೂ ಮರೆಯಲಿಕ್ಕಾಗಲಿಲ್ಲ. ಅವನು ಪುನಃ ಬ್ರಹಸ್ಪತಿಯ ಕಡೆಗೆ ಹೋಗಿ ಅವನ ಕಾಲು ಹಿಡಿದುಕೊಂಡು ಅವನ ಕ್ಷಮೆಯನ್ನು ಬೇಡಿಕೊಂಡನು. ಇದರಿಂದ ಬ್ರಹಸ್ಪತಿಗೆ ಕರುಣ ಹುಟ್ಟಿ ಅವನು ಇಂದ್ರನ ಮೇಲೆ ಅನುಗ್ರಹ ಮಾಡಿದನು.

---


## ೧೩. ಗಜೇಂದ್ರಮೋಕ್ಷ.

ತ್ರಿಕೂಟ ಪರ್ವತದ ಮೇಲೆ ವರುಣನ "ಋತುಮತ್" ಎಂಬ ಒಂದು ಸುಂದರವಾದ ಉದ್ಯಾನವು ಇತ್ತು. ಆ ಉದ್ಯಾನದಲ್ಲಿಯ ಗಿಡಗಳು ಹೂಹಣ್ಣುಗಳಿಂದ ತುಂಬಿದ್ದವು. ಹಾಗೂ ಅದರ ಮಧ್ಯಭಾಗದಲ್ಲಿ ಒಂದು ಸರೋವರವು ಇದ್ದು ಅದು ಕಮಲಗಳಿಂದ ಸುಶೋಭಿತವಾಗಿತ್ತು. ಇದಲ್ಲದೆ ಮುಂಜಾನೆ ಮತ್ತು ಸಂಜೆಗೆ ಚಿತ್ರವಿಚಿತ್ರ ಬಣ್ಣದ ಪಕ್ಷಿಗಳು ಗಿಡಗಳ ಟೊಂಗೆಯ ಮೇಲೆ ಕುಳಿತು ಮಂಜುಳವಾದ ಕಿಲಕಿಲ ಧ್ವನಿಯನ್ನು ಮಾಡುತ್ತಿದ್ದ ಕಾರಣ ಉದ್ಯಾನವೆಲ್ಲ ಆ ಮಂಜುಳ ಧ್ವನಿಯಿಂದ ತುಂಬಿ ಹೋಗುತ್ತಿತ್ತು. ಇಂಥ ಸುಂದರವಾದ ಉದ್ಯಾನದ ನೆರೆಯಲ್ಲಿರುವ ಅರಣ್ಯದೊಳಗೆ ಒಂದು ಗಜೇಂದ್ರವು (ದೊಡ್ಡ ಆನೆಯು) ಇರುತ್ತಿತ್ತು. ಅದು ಕೆಲಕೆಲವು ಸಾರೆ ಹೆಣ್ಣಾನೆಯನ್ನೂ, ಅದರ ಮರಿಗಳನ್ನೂ ತನ್ನ ಸಂಗಡ ಕರೆದುಕೊಂಡು ಆ ಉದ್ಯಾನದಲ್ಲಿ ಅಡ್ಡಾಡಲಿಕ್ಕೂ ಸರೋವರದಲ್ಲಿ ಈಸಲಿಕ್ಕೂ ಬರುತ್ತಿತ್ತು.

ಆನೆಗಳಿಗೆ ಜಲಕ್ರೀಡೆಯಾಡುವ ಪ್ರೀತಿಯು ಬಹಳವಿರುವಂತೆ ಗಜೇಂದ್ರವು ಆ ಸರೋವರದ ನೀರಿನಲ್ಲಿ ಹೆಣ್ಣಾನೆಯ ಸಂಗಡ ಬಹುಕಾಲದ ವರೆಗೆ



ಗಜೇಂದ್ರ ಮೋಕ್ಷ.   C. P. D



ಗಜೇಂದ್ರ ಮೋಕ್ಷ. C. P. D

ಒಂದು ದೊಡ್ಡ ಹುತ್ತು ಬೆಳೆದು ಹೋಗಿತ್ತು. ಆ ಹುತ್ತಿಗೆ ಒಂದು ಕಡೆಗೆ ಒಂದು ಛಿದ್ರವು ಇತ್ತು. ಅದರೊಳಗಿಂದ ಸಣ್ಣ ಪ್ರಕಾಶವು ಕಾಣಿಸುತ್ತಿತ್ತು. ಸುಕನ್ಯೆಗೆ ಆ ಪ್ರಕಾಶವು ಏನಿರಬಹುದೆಂದು ತಿಳಿದುಕೊಳ್ಳುವ ಕೌತುಕವು ಹುಟ್ಟಿದ್ದರಿಂದ ಅವಳು ಕೈಯಲ್ಲಿ ಒಂದು ಮುಳ್ಳು ತೆಗೆದುಕೊಂಡು ಅದನ್ನು ಆ ಛಿದ್ರದೊಳಗೆ ಹಾಕಿ ಚುಚ್ಚಿದಳು. ಆಗ ಆ ಛಿದ್ರದೊಳಗಿಂದ ರಕ್ತವು ಹೊರಗೆ ಬಂತು. ಛಿದ್ರದೊಳಗೆ ಹೊಳೆಯುತ್ತಿದ್ದ ವಸ್ತುಗಳು ಋಷಿಯ ಕಣ್ಣುಗಳಿದ್ದವು. ಆದುದರಿಂದ ಸುಕನ್ಯೆಯು ಮುಳ್ಳು ಚುಚ್ಚಿದ ಕೂಡಲೆ ಋಷಿಯು ಸಿಟ್ಟಿಗೆದ್ದನು. ಆದರೆ ಈ ಅಪರಾಧವು ಹುಡಿಗೆಯ ಅಜ್ಞಾನದ ಮೂಲಕ ಆಗಿರುವದರಿಂದ ಅದನ್ನು ಕ್ಷಮಿಸಬೇಕೆಂದು ಆ ಶರ್ಯಾತಿ ರಾಜನು ಋಷಿಗೆ ಪ್ರಾರ್ಥಿಸಲಾಗಿ ಆ ಋಷಿಯು--"ಹಾಗಾದರೆ ನಿನ್ನ ಮಗಳನ್ನು ನನಗೆ ಮದುವೆ ಮಾಡಿಕೊಡು" ಎಂದು ಕೇಳಿದನು. ಚ್ಯವನ ಋಷಿಯು ದಿವಸ ಹೋದವನಿದ್ದರೂ ಅವನು ಸಿಟ್ಟಾದಾನೆಂಬ ಅಂಜಿಕೆಯಿಂದ ರಾಜನು ಅವನ ಮಾತಿಗೆ ಒಡಂಬಟ್ಟು ತನ್ನ ಮಗಳಾದ ಸುಕನ್ಯೆಯನ್ನು ಅವನಿಗೆ ಮದುವೆ ಮಾಡಿಕೊಟ್ಟನು. ಋಷಿಯು ಬಹಳ ಸಿಟ್ಟಿನವನೆಂಬದು ಅವಳಿಗೆ ಅನುಭವದಿಂದ ತಿಳಿದಿದ್ದ ಕಾರಣ ಅವಳು ತನ್ನ ಪತಿಯ ಇಚ್ಛೆಯು ಏನಿರುತ್ತದೆಂದು ಚೆನ್ನಾಗಿ ತಿಳಿದುಕೊಂಡು, ಅವನ ಇಚ್ಛೆಯ ಪ್ರಕಾರವೇ ನಡೆದು, ಅಹೋರಾತ್ರಿ ಅವನ ಸೇವೆಯಲ್ಲಿ ನಿಮಗ್ನಳಾಗಿರುತ್ತಿದ್ದಳು. ಅವಳು ಈ ರೀತಿಯಿಂದ ನಡೆದದ್ದರಿಂದ ಋಷಿಯು ಅವಳ ಮೇಲೆ ಮನಃಪೂರ್ವಕವಾಗಿ ಪ್ರೀತಿ ಮಾಡಹತ್ತಿದನು. ಮುಂದೆ ಒಂದು ಸಾರೆ ಅಶ್ವಿನಿ ಕುಮಾರನು ಚ್ಯವನ ಋಷಿಯ ಆಶ್ರಮಕ್ಕೆ ಬರಲು ಸುಕನ್ಯೆಯು ಅವನಿಗೆ ಚೆನ್ನಾಗಿ ಆದರಸತ್ಕಾರವನ್ನು ಮಾಡಿದಳು. ಇದರಿಂದ ಅಶ್ವಿನೀ ಕುಮಾರನು ಬಹಳ ಸಂತುಷ್ಟನಾಗಿ– "ನೀವಿಬ್ಬರೂ ಬೇಕಾದ ವರವನ್ನು ಕೇಳಿಕೊಳ್ಳಿರಿ" ಎಂದು ಚ್ಯವನ ಋಷಿಗೆ ಹೇಳಿದನು. ಆಗ ಚ್ಯವನ ಋಷಿಯು– "ನಾನು ವೃದ್ಧನಿರುತ್ತೇನೆ. ನನ್ನನ್ನು ಪುನಃ ತರುಣನನ್ನಾಗಿ ಮಾಡಬೇಕು" ಎಂದು ಬೇಡಿಕೊಂಡನು. ಅದಕ್ಕೆ ಅಶ್ವಿನೀ ಕುಮಾರನು "ಯಾಕಾಗಲೊಲ್ಲದು" ಎಂದು ನುಡಿದು, ಅವನನ್ನು ಒಂದು ಮಡುವಿನಲ್ಲಿ ಕುಳ್ಳಿರಿಸಿ ತಾನೇ ತನ್ನ ಕೈಯಿಂದ ಅವನಿಗೆ ನೀರು ಎರೆದು ಸ್ನಾನ ಮಾಡಿಸಿದನು.

ಈ ಪ್ರಕಾರ ತಾರುಣ್ಯಾವಸ್ಥೆಯನ್ನು ಪಡೆದಿದ್ದ ಚ್ಯವನ ಋಷಿಯು ತನ್ನ ಪತ್ನಿಯ ಸಂಗಡ ಮಾತಾಡುತ್ತ ಕುಳಿತುಕೊಂಡಾಗ್ಗೆ ಅವಳ ತಂದೆಯಾದ ಶರ್ಯಾತಿ ರಾಜನು ಯಜ್ಞಕಾರ್ಯಕ್ಕಾಗಿ ಆ ಋಷಿಯನ್ನು ಕರೆಯಲಿಕ್ಕೆ ಬಂದನು. ಅವನಿಗೆ ತನ್ನ ಅಳಿಯನ ಗುರುತು ಹತ್ತಲಿಲ್ಲ. ಅವನು ತನ್ನ ಮಗಳ ಸಂಗಡ ಗುಜಗೋಷ್ಠಿಗಳನ್ನಾಡುತ್ತ ಕುಳಿತ ತರುಣನು ಯಾವನಿರಬಹುದೆಂದು ವಿಚಾರ ಮಾಡುವಲ್ಲಿ ಮಗ್ನನಾದನು. ಆಗ ಸುಕನ್ಯೆಯು ತನ್ನ ಗಂಡನ ಮೇಲೆ ಅಶ್ವಿನೀಕುಮಾರನು ಕೃಪೆಯನ್ನು ಮಾಡಿದ ಯಾವತ್ತು ಸಂಗತಿಯನ್ನು ತಿಳಿಸಿ ಹೇಳಿದಳು. ಆಗ ಶರ್ಯಾತಿ ರಾಜನಿಗೆ ತನ್ನ ಮಗಳು ತನ್ನ ಸದ್ವರ್ತನದಿಂದ ಆ ಋಷಿಯ ಪ್ರೀತಿಯನ್ನು ಸಂಪಾದಿಸಿ ಅಶ್ವಿನೀ ಕುಮಾರನನ್ನು ಪ್ರಸನ್ನ ಮಾಡಿಕೊಂಡದ್ದನ್ನು ಕೇಳಿ ಬಹಳ ಆನಂದವಾಯಿತು. ಅಶ್ವಿನೀ ಕುಮಾರನು ಮಾಡಿದ ಈ ಉಪಕಾರವನ್ನು ತೀರಿಸುವದಕ್ಕಾಗಿ ಚ್ಯವನ ಋಷಿಯು ಶರ್ಯಾತಿ ರಾಜನ ಕೈಯಿಂದ ಯಜ್ಞವನ್ನು ಮಾಡಿಸಿ ಅಶ್ವಿನೀ ಕುಮಾರನಿಗೆ ಈ ಮೊದಲಿಗೆ ಎಂದೂ ದೊರಕದೆ ಇದ್ದ ಸೋಮರಸವನ್ನು ಕೊಟ್ಟನು. ಚ್ಯವನ ಋಷಿಯು ಈ ಪ್ರಕಾರ ಸೋಮರಸವನ್ನು ಮೊದಲನೇ ಸಾರೆ ಅಶ್ವಿನೀ ಕುಮಾರನಿಗೆ ಕೊಟ್ಟದ್ದನ್ನು ಕಂಡು ಇಂದ್ರನು ಸಿಟ್ಟಿಗೆದ್ದು ಆ ಋಷಿಯನ್ನು ಹೊಡೆಯುವದಕ್ಕಾಗಿ ತನ್ನ ವಜ್ರಾಯುಧವನ್ನು ಮೇಲಕ್ಕೆ ಎತ್ತುವ ಪ್ರಯತ್ನ ಮಾಡಿದನು. ಆದರೆ ಆ ಋಷಿಯ ಸಾಮರ್ಥ್ಯವು ಕಡಿಮೆ ಇದ್ದಿಲ್ಲ. ಅವನು ತನ್ನ ಸಾಮರ್ಥ್ಯದಿಂದ ಇಂದ್ರನಿಗೆ ವಜ್ರವನ್ನು ಮೇಲಕ್ಕೆ ಎತ್ತಲಿಕ್ಕೆ ಕೊಡಲಿಲ್ಲ. ಆಗ ಇಂದ್ರನು ನಿರುಪಾಯದಿಂದ ಸುಮ್ಮನೆ ಬಿಟ್ಟನು. ಆಗಿನಿಂದ ಅಶ್ವಿನೀ ಕುಮಾರನಿಗೆ ಸೋಮರಸವು ದೊರಕಲಿಕ್ಕೆ ಹತ್ತಿತು.

---

## ೧೫. ಸತ್ಯದ ಮಹಿಮೆಯು.

### ( ನಾಭಾಗನ ಕಥೆಯು.)

ನಭಗನೆಂಬ ಒಬ್ಬ ಋಷಿಗೆ ನಾಲ್ಕುಮಂದಿ ಗಂಡುಮಕ್ಕಳಿದ್ದರು. ಅವರಲ್ಲಿ ಒಬ್ಬನ ಹೆಸರು ನಾಭಾಗ ಅಥವಾ ನಾಭಾನೇದಿಷ್ಠ ಎಂದು ಅನ್ನುತ್ತಿ

ದ್ದರು. ಅವನು ತನ್ನ ತಂದೆಯ ಆಜ್ಞೆಯನ್ನು ಪಡೆದುಕೊಂಡು ತಪಶ್ಚರ್ಯೆ ಮಾಡುವದಕ್ಕಾಗಿ ಅರಣ್ಯಕ್ಕೆ ಹೊರಟು ಹೋದನು. ಅದನ್ನು ನೋಡಿ ಅವನ ಮೂರು ಮಂದಿ ಅಣ್ಣತಮ್ಮಂದಿರು ಅವನನ್ನು ಮೋಸಪಡಿಸಬೇಕೆಂದು ವಿಚಾರ ಮಾಡಿ ತಮ್ಮ ಮುದುಕ ತಂದೆಯ ಮಾತನ್ನು ಕೇಳದೆ ಅವನ ಹತ್ತರ ಇದ್ದ ಎಲ್ಲ ಜಿಂದಿಗಿಯನ್ನು ತಮ್ಮೊಳಗೆ ಹಂಚಿಕೊಂಡು ಬಿಟ್ಟರು. ಅರಣ್ಯಕ್ಕೆ ಹೋಗಿದ್ದ ತಮ್ಮ ಸಹೋದರನ ಪಾಲನ್ನು ತೆಗೆದಿಡಲಿಲ್ಲ.

ಮುಂದೆ ಬಹಳ ದಿವಸಗಳಾದ ನಂತರ ನಾಭಾಗನು ತನ್ನ ತಪಶ್ಚರ್ಯೆವನ್ನು ತೀರಿಸಿಕೊಂಡು ಮನೆಗೆ ಬರಲಾಗಿ ಅವನಿಗೆ ಅವನ ತಂದೆಯ ಬಾಯಿಂದ ಈ ಯಾವತ್ತು ವೃತ್ತಾಂತವು ಗೊತ್ತಾಯಿತು. ಅವನಿಗೆ ಅವನ ತಪಶ್ಚರ್ಯದ ಮೂಲಕ ಬೇಕಾದಷ್ಟು ಸಾಮರ್ಥ್ಯವುಂಟಾಗಿತ್ತು. ಅವನ ಮನಸ್ಸಿನಲ್ಲಿ ಬಂದಿದ್ದರೆ ಅವನು ತನಗೆ ಅನ್ಯಾಯ ಮಾಡಿದ ಮೂರೂ ಮಂದಿ ಅಣ್ಣತಮ್ಮಂದಿರ ಜಿಂದಿಗಿಯನ್ನು ತಿರುಗಿ ತರಿಸುತ್ತಿದ್ದನು. ಆದರೆ ಅವನು ಬಹಳ ಶಾಂತ ಸ್ವಭಾವದವನೂ ವಿಚಾರವಂತನೂ ಇದ್ದು ತಂದೆಯ ಆಜ್ಞೆಯನ್ನು ಕೇಳಿಕೊಳ್ಳದೆ ಏನೂ ಮಾಡುತ್ತಿದ್ದಿಲ್ಲ. ಆದುದರಿಂದ ಅವನು ತನ್ನ ತಂದೆಗೆ ತನ್ನನ್ನು ಮೋಸಪಡಿಸಿದ ಸಹೋದರರ ಬಗ್ಗೆ ಏನು ಮಾಡಬೇಕೆಂದು ವಿಚಾರಿಸಿದನು. ಅದಕ್ಕೆ ಅವನ ತಂದೆಯು ಅವನಿಗೆ- " ಬಾಲಕಾ, ನೀನು ವಿವೇಕಿಯು ಇದ್ದು ವಿದ್ಯೆಯನ್ನಾದರೂ ಸಂಪಾದಿಸಿರುವೆ. ನಿನಗೆ ಸಹಜವಾಗಿ ಎಲ್ಲಿಯಾದರೂ ಬೇಕಾದಷ್ಟು ದ್ರವ್ಯವನ್ನು ಗಳಿಸುವ ಸಾಮರ್ಥ್ಯವಿರುತ್ತದೆ. ಆದುದರಿಂದ ನೀನು ನಿನ್ನ ಸಹೋದರರ ಗೊಡವೆಗೆ ಹೋಗಬೇಡ. ಅಂಗಿರಾ ಋಷಿಯು ಇಲ್ಲಿಯೇ ಸಮೀಪದಲ್ಲಿ ಯಜ್ಞಕಾರ್ಯವನ್ನು ಆರಂಭಿಸಿರುತ್ತಾನೆ. ಅವನ ಯಜ್ಞಕಾರ್ಯಕ್ಕೆ ಈಗ ರಂಗು ತುಂಬುತ್ತಿರುವದು. ಆದರೆ ಯಜ್ಞ ಮಾಡುವ ಋತ್ವಿಜರಿಗೆ ವೇದದೊಳಗಿನ ಎರಡು ಸೂಕ್ತಗಳು ನೆನಪಾಗಲೊಲ್ಲವು. ಅದುದರಿಂದ ಯಜ್ಞ ಕಾರ್ಯವು ಸ್ವಲ್ಪ ವಿರಸವಾದಂತೆ ಆಗಿರುತ್ತದೆ. ನೀನು ಈ ವೇಳೆಯಲ್ಲಿ ಅಲ್ಲಿಗೆ ಹೋಗಿ ಋತ್ವಿಜರಿಗೆ ಆ ಸೂಕ್ತಗಳನ್ನು ಸೂಚಿಸಿ ಕೊಡು. ಅಂದರೆ ಅವರ ಯಜ್ಞ ಕಾರ್ಯವು ಚೆನ್ನಾಗಿ ಕೊನೆಗಾಣುವದಲ್ಲದೆ ನಿನಗೆ ಅದರಿಂದ ಬಹಳ ದ್ರವ್ಯವು ಸಿಗುವದು " ಎಂದು ಹೇಳಿದನು.

ಈ ಪ್ರಕಾರ ತಂದೆಯು ಅಪ್ಪಣೆ ಮಾಡಿದ್ದನ್ನು ಕೇಳಿಕೊಂಡು ನಾಭಾಗನು ಆ ಯಜ್ಞಮಂಟಪಕ್ಕೆ ಹೋಗಿ ಋತ್ವಿಜರಿಗೆ ನೆನಪಾಗದೆ ಇದ್ದ ಸೂಕ್ತಗಳನ್ನು ಅವರಿಗೆ ನೆನಪು ಮಾಡಿಕೊಟ್ಟನು. ಅದರಿಂದ ಅವರು ಸಂತುಷ್ಟರಾಗಿ ಅವನಿಗೆ ಬಹಳ ದ್ರವ್ಯವನ್ನು ಕೊಟ್ಟರು. ಅವನು ಆ ದ್ರವ್ಯವನ್ನು ತೆಗೆದುಕೊಂಡು ಮನೆಗೆ ಬರುತ್ತಿರಲಾಗಿ ಮಾರ್ಗದಲ್ಲಿ ಅವನಿಗೆ ಒಮ್ಮಿಂದೊಮ್ಮೆ ಒಬ್ಬ ಕಾಳಪುರುಷನು ಬೆಟ್ಟಿಯಾಗಿ “ ಇಲ್ಲಿ ಇರುವ ಯಾವತ್ತು ವಸ್ತುಗಳ ಮೇಲೆ ನನ್ನ ಸ್ವಾಮಿತ್ವವುಂಟು. ಅದುದರಿಂದ ಈ ದ್ರವ್ಯವನ್ನು ಬಿಟ್ಟು ಹೋಗು. ಇದನ್ನು ನಿನಗೆ ನಾನು ಒಯ್ಯಗೊಡುವದಿಲ್ಲ ” ಎಂದು ಅವನ ಸಂಗಡ ಜಗಳಾಡಹತ್ತಿದನು. ಈ ದ್ರವ್ಯವು ತನ್ನದಿರುತ್ತದೆಂದು ನಾಭಾಗನು ಆ ಕಾಳಪುರುಷನಿಗೆ ಬೇಕಾದಷ್ಟು ಹೇಳಿದರೂ ಆ ಕಾಳಪುರುಷನು ಒಡಂಬಡಲಿಲ್ಲ. ಇಬ್ಬರೂ ತಮ್ಮೊಳಗೆ ಬಹಳೊತ್ತಿನ ತನಕ ವಾದ ಮಾಡಿ ಬೇಸತ್ತು ತಮ್ಮ ನ್ಯಾಯವನ್ನು ಮೂರನೇಯವನ ಕಡೆಗೆ ಒಯ್ದು ತೀರಿಸಿಕೊಳ್ಳಬೇಕೆಂದು ನಿರ್ಣಯ ಮಾಡಿಕೊಂಡರು. ಇಬ್ಬರೂ ನಾಭಾಗನ ತಂದೆಯಾದ ನಭಗನು ಕೊಟ್ಟ ತೀರ್ಪನ್ನು ಮಾನ್ಯ ಮಾಡಬೇಕೆಂತಲೂ, ಆ ತೀರ್ಪು ಆಗುವವರೆಗೆ ಆ ದ್ರವ್ಯವು ಕಾಳಪುರುಷನ ಕಡೆಗೆ ಇರಬೇಕೆಂತಲೂ ಗೊತ್ತು ಮಾಡಿಕೊಂಡರು. ಅಲ್ಲಿಂದ ನಾಭಾಗನು ತನ್ನ ಮನೆಗೆ ಹೋಗಿ ತನ್ನ ತಂದೆಯ ಮುಂದೆ ತನ್ನ ಮತ್ತು ಕಾಳಪುರುಷನ ನ್ಯಾಯವನ್ನು ತಿಳಿಸಿದನು.

ಈ ನ್ಯಾಯವನ್ನು ಕೇಳಿಕೊಂಡ ನಂತರ ನಭಗನು ಆ ದ್ರವ್ಯವು ಕಾಳಪುರುಷನದೆಂದು ನಿರ್ಣಯ ಕೊಟ್ಟನು. ತನ್ನ ತಂದೆಯು ಕೊಟ್ಟ ನ್ಯಾಯ ತೀರ್ಪನ್ನು ಕೇಳಿ ನಾಭಾಗನಿಗೆ ಬಹಳ ಆಶ್ಚರ್ಯವಾಯಿತು. ಆದರೂ ಅವನು ತನ್ನ ತಂದೆಯ ತೀರ್ಪನ್ನು ಮಾನ್ಯ ಮಾಡಿ ಕಾಳಪುರುಷನಿದ್ದಲ್ಲಿಗೆ ಹೋಗಿ ಅವನ ಮುಂದೆ ತನ್ನ ತಂದೆಯ ತೀರ್ಪನ್ನು ತಿಳಿಸಿದನು.

ನಾಭಾಗನು ತನ್ನ ತಂದೆಯ ಬಗ್ಗೆ ಇಷ್ಟು ಪೂಜ್ಯ ಬುದ್ಧಿಯುಳ್ಳವನೂ ಸತ್ಯಪ್ರಿಯನೂ ಇರುವದನ್ನು ಕಂಡು ಕಾಳಪುರುಷನಿಗೆ ಬಹಳ ಸಂತೋಷವಾಗಿ ಅವನು ನಾಭಾಗನಿಗೆ— “ ನಾಭಾಗಾ ! ನಾನು ಯಾರಿರುತ್ತೇನೆಂಬುವದು ನಿನಗೆ ಗೊತ್ತಿರಲಿಕ್ಕಿಲ್ಲ. ನಾನು ರುದ್ರನಿರುತ್ತೇನೆ. ನಾನು ನಿನ್ನ ಪರೀಕ್ಷೆಯನ್ನು

ಮಾಡುವದಕ್ಕಾಗಿ ಕಾಳಪುರುಷನ ರೂಪದಿಂದ ನಿನ್ನ ಕಡೆಗೆ ಬಂದಿದ್ದೆನು. ನಿನ್ನ ತಂದೆಯು ನಿಷ್ಪಕ್ಷಪಾತದಿಂದ ನ್ಯಾಯ ತೀರ್ಪು ಮಾಡಿದನು. ಹಾಗೂ ನೀನಾದರೂ ದ್ರವ್ಯದ ಮೇಲೆ ಲೋಭವನ್ನು ಹಿಡಿಯದೆ ನಿನ್ನ ವಿರುದ್ಧವಾಗಿ ನಿನ್ನ ತಂದೆಯು ಕೊಟ್ಟ ತೀರ್ಪವನ್ನು ನನಗೆ ತಿಳಿಸಲಿಕ್ಕೆ ಇಲ್ಲಿಯ ತನಕ ಬರುವ ಶ್ರಮ ತೆಗೆದುಕೊಂಡೆ. ಆದುದರಿಂದ ನನಗೆ ಬಹಳ ಸಂತೋಷವಾಗಿರುವದು. ಈ ಯಾವತ್ತು ದ್ರವ್ಯವು ನಿನ್ನದೇ ಇರುತ್ತದೆ. ನೀನೇ ಇದನ್ನು ತೆಗೆದುಕೋ. ಇದಲ್ಲದೆ ನಿನಗೆ ಇನ್ನೂ ಹೆಚ್ಚಿಗೆ ದ್ರವ್ಯವನ್ನು ಕೊಡುತ್ತೇನೆ. ಅದನ್ನೂ ತೆಗೆದುಕೋ" ಎಂದು ಹೇಳಿ ನಾಭಾಗನಿಗೆ ಯಥೇಷ್ಟವಾಗಿ ದ್ರವ್ಯವನ್ನು ಕೊಟ್ಟು ಕಳಿಸಿದನು. ಅದನ್ನು ನಾಭಾಗನು ತನ್ನ ಮನೆಗೆ ತೆಗೆದುಕೊಂಡು ಹೋಗಿ ತನ್ನ ತಂದೆಯನ್ನು ಸಂತುಷ್ಟಪಡಿಸಿ ಆನಂದದಿಂದ ಇರಲಿಕ್ಕೆ ಹತ್ತಿದನು.

## ೧೬. ಸನಾತನ ಧರ್ಮವು.

ಒಂದಾನೊಂದು ಸಾರೆ ಯುಧಿಷ್ಠಿರನು— "ಸನಾತನ ಧರ್ಮವೆಂದರೇನು? ಹಾಗೂ ವರ್ಣಾಶ್ರಮಗಳ ನಿಯಮಗಳು ಯಾವವು?" ಎಂಬದನ್ನು ಹೇಳಲಿಕ್ಕೆ ಕೇಳಲಾಗಿ ನಾರದನು ಹೇಳಿದ್ದೇನಂದರೆ:—

"ರಾಜನೇ! ವೇದವು ಸನಾತನ ಧರ್ಮದ ಮೂಲಗ್ರಂಥವಿರುತ್ತದೆ. ವೇದದ ಪರಿಪೂರ್ಣ ಜ್ಞಾನವಿದ್ದವರೇ ಸ್ಮೃತಿಗಳನ್ನು ರಚಿಸಿದರು. ಸತ್ಯವನ್ನು ಮಾತಾಡಬೇಕು. ಯಾವತ್ತು ಪ್ರಾಣಿಮಾತ್ರರಿಗೆ ದಯವನ್ನು ತೋರಿಸಬೇಕು. ಪರಿಶುದ್ಧರಾಗಿ ಇರಬೇಕು. ಸಹನಶೀಲರಾಗಿ ಇರಬೇಕು. ಯಾವದು ಚಲೋದು, ಯಾವದು ಕೆಟ್ಟದು, ಯಾವದು ಯೋಗ್ಯವಾದದು, ಯಾವದು ಅಯೋಗ್ಯವಾದದು ಎಂಬುದನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ತರುವಾಯ ಯಾವದೊಂದು ಕೆಲಸವನ್ನು ಕೈಕೊಳ್ಳಬೇಕು. ಮನಸ್ಸನ್ನು ತಮ್ಮ ಸ್ವಾಧೀನದಲ್ಲಿಡಬೇಕು. ಅದನ್ನು ಬೇಕಾದ ಕಡೆಗೆ ಹರಿದಾಡಿಗೊಡಬಾರದು.

ಯಾರ ಜೀವಕ್ಕೂ ಕಷ್ಟವನ್ನು ಕೊಡಬಾರದು. ಬ್ರಹ್ಮಚರ್ಯವ್ರತವನ್ನು ಸರಿಯಾಗಿ ಪಾಲಿಸಬೇಕು. ತಮ್ಮ ತಮ್ಮ ಶಕ್ತಿಯ ಪ್ರಕಾರ ದಾನಧರ್ಮ ಮಾಡಬೇಕು. ಸರಳತನದಿಂದ ವರ್ತಿಸಬೇಕು. ಯಾವಾಗಲು ಸಂತೋಷದಿಂದಿರಬೇಕು. ವ್ಯರ್ಥವಾಗಿ ಬಹಳ ಮಾತಾಡುತ್ತಿರಬಾರದು. ಮಾತನ್ನು ಸ್ವಲ್ಪ ಆಡಿ ಕೃತಿಯನ್ನು ಬಹಳ ಮಾಡಿ ತೋರಿಸಬೇಕು. ಪರಮೇಶ್ವರನ ಭಯವನ್ನು ಯಾವಾಗಲು ಹಿಡಿಯಬೇಕು. ಇವು ಧರ್ಮದ ಸಾಮಾನ್ಯ ಲಕ್ಷಣಗಳು. ”

ನಾರದನು ಪುನಃ ಹೇಳಿದ್ದೇನಂದರೆ:— “ ರಾಜನೇ! ಇನ್ನು ಮೇಲೆ ನಿನಗೆ ವರ್ಣ ಮತ್ತು ಆಶ್ರಮ ಇವುಗಳ ಧರ್ಮವನ್ನು ಹೇಳುತ್ತೇನೆ. ವರ್ಣಗಳು ನಾಲ್ಕು ಉಂಟು. ೧ ಬ್ರಾಹ್ಮಣ, ೨ ಕ್ಷತ್ರಿಯ, ೩ ವೈಶ್ಯ, ೪ ಶೂದ್ರ. ವಿದ್ಯಾ ಕಲಿಯುವದು ಮತ್ತು ಕಲಿಸುವದು, ಯಜ್ಞ ಮಾಡುವದು ಮತ್ತು ಮಾಡಿಸುವದು, ಹಾಗೂ ದಾನ ಕೊಡುವದು ಮತ್ತು ದಾನ ತೆಗೆದುಕೊಳ್ಳುವದು ಈ ಪ್ರಕಾರ ಬ್ರಾಹ್ಮಣರ ಕರ್ತವ್ಯಕರ್ಮಗಳು ಆರು ಇರುತ್ತವೆ. ಈ ಕರ್ತವ್ಯಗಳನ್ನು ಮಾಡುವವನೇ ನಿಜವಾದ ಬ್ರಾಹ್ಮಣನು. ಉಳಿದವರೆಲ್ಲರು ನಾಮಧಾರಿ ಬ್ರಾಹ್ಮಣರೆಂದು ತಿಳಿಯಬೇಕು. ಇವರಿಗೆ ‘ ಪತಿತ ’ರೆಂಬ ಹೆಸರುಂಟು. ವಿದ್ಯಾಕಲಿಯುವದು, ಯಜ್ಞಮಾಡುವದು, ದಾನಕೊಡುವದು, ಪ್ರಜೆಗಳ ಪಾಲನ ಮಾಡುವದು ಮುಂತಾದವುಗಳು ಕ್ಷತ್ರಿಯರ ಕರ್ತವ್ಯಗಳು. ಇವುಗಳನ್ನು ಮಾಡುವವನು ನಿಜವಾದ ಕ್ಷತ್ರಿಯನು. ಉಳಿದವರೆಲ್ಲರು ನಾಮಧಾರಿ ಕ್ಷತ್ರಿಯರೆಂದು ತಿಳಿಯಬೇಕು. ವಿದ್ಯೆಯನ್ನು ಕಲಿಯುವದು, ಯಜ್ಞ ಮಾಡುವದು, ದಾನ ಮಾಡುವದು, ಒಕ್ಕಲತನ ಮಾಡುವದು, ದನಗಳನ್ನು ಕಾಪಾಡುವದು ಮುಂತಾದವುಗಳೆಲ್ಲ ವೈಶ್ಯರ ಕರ್ತವ್ಯಗಳು. ಪರರ ಸೇವೆಯನ್ನು ಮಾಡುವದು ಶೂದ್ರರ ಕರ್ತವ್ಯವು. ಇವು ಪ್ರತ್ಯೇಕ ವರ್ಣದವರ ಕರ್ತವ್ಯಗಳಾದಾಗ್ಯೂ ಹೊತ್ತು ಬಂದರೆ ನಿರುಪಾಯದಿಂದ ಎರಡನೇ ಉದ್ಯೋಗಗಳನ್ನು ಮಾಡಿ ತಮ್ಮ ಸಂರಕ್ಷಣವನ್ನು ಮಾಡಿಕೊಳ್ಳಬೇಕು. ಎರಡನೆಯವರಿಗೆ ಭಾರವಾಗುವಂತೆ ನೀಚವೃತ್ತಿಯನ್ನು ಯಾರೂ ಸ್ವೀಕಾರ ಮಾಡಬಾರದು. ಬ್ರಾಹ್ಮಣರು ತಮ್ಮ ಯಜ್ಞಯಾಗಾದಿಗಳನ್ನು ನಡೆಸಲಿಕ್ಕೂ

ಕ್ಷತ್ರಿಯರು ತಮ್ಮ ತೇಜಸ್ಸನ್ನು ಕಾಪಾಡಲಿಕ್ಕೂ ತಪ್ಪಬಾರದು. ಬ್ರಾಹ್ಮಣರಲ್ಲಿ ಶಾಂತಿ, ದಮ (ಇಂದ್ರಿಯ ನಿಗ್ರಹ), ತಪಸ್ಸು, ಪವಿತ್ರ ಮನಸ್ಸು, ಸಂತೋಷ, ಕೋಮಲ ಅಂತಃಕರಣ, ದಯ, ಜ್ಞಾನ, ಈಶ್ವರಭಕ್ತಿ ಮತ್ತು ಸತ್ಯ ಇವುಗಳು ಇರಬೇಕು. ಕ್ಷತ್ರಿಯರಲ್ಲಿ ಶೌರ್ಯ, ಪರೋಪಕಾರ, ಧೀರತನವು, ತೇಜಸ್ವಿತನವು, ಔದಾರ್ಯ, ಕ್ಷಮಾ, ಪ್ರಸನ್ನತಾ ಮುಂತಾದ ಗುಣಗಳು ಇರಬೇಕು. ವೈಶ್ಯರಲ್ಲಿ ದೇವರ ಮೇಲೆ ಮತ್ತು ಗುರುಗಳ ಮೇಲೆ ಭಕ್ತಿ, ಧರ್ಮದ ಮೇಲೆ ವಿಶ್ವಾಸ, ಹಣ ಸಂಪಾದನ ಮಾಡುವ ಜ್ಞಾನ, ವ್ಯವಹಾರ ಚಾತುರ್ಯ ಮತ್ತು ಉದ್ಯೋಗಪ್ರೀತಿ ಇವುಗಳು ಇರಬೇಕು. ಶೂದ್ರರಲ್ಲಿ ದೊಡ್ಡವರ ಕೂಡ ನಮ್ರ ಭಾವದಿಂದ ನಡೆದುಕೊಳ್ಳುವದು, ಸ್ವಾಮಿನಿಷ್ಠೆ. ನಿಷ್ಕಪಟತನದಿಂದ ಸೇವೆ ಮಾಡುವ ಬುದ್ಧಿ, ಕಳವು ಮಾಡದೆ ಇರುವದು, ಸತ್ಯ ಮಾತಾಡುವದು, ಶುದ್ಧ ವರ್ತನ ಇವುಗಳು ಇರಬೇಕು. ”

ನಾರದನು ಪುನಃ ಅಂದದ್ದು— “ ರಾಜನೇ ! ಈಗ ನಿನಗೆ ನಾಲು ವರ್ಣಗಳ ಸಂಬಂಧವಾಗಿ ಹೇಳಿದಂತಾಯಿತು. ಇನ್ನು ಮೇಲೆ ನಿನಗೆ ನಾಲ್ಕು ಆಶ್ರಮಗಳ ಸಂಬಂಧವಾಗಿ ಹೇಳುತ್ತೇನೆ, ಕೇಳು. ಆಶ್ರಮಗಳು ನಾಲ್ಕು ಉಂಟು. **೧ ಬ್ರಹ್ಮಚರ್ಯ, ೨ ಗೃಹಸ್ಥ, ೩ ವಾನಪ್ರಸ್ಥ ಮತ್ತು ೪ ಸನ್ಯಾಸ. ಬ್ರಹ್ಮಚರ್ಯಾಶ್ರಮದ ನಿಯಮಗಳು ಯಾವವೆಂದರೆ:—** ತಮ್ಮ ಯಾವತ್ತು ಇಚ್ಛೆಗಳನ್ನು ತಮ್ಮ ಸ್ವಾಧೀನದಲ್ಲಿ ಇಟ್ಟುಕೊಳ್ಳಬೇಕು. ಗುರುಗಳ ಮನೆಯಲ್ಲಿ ವಾಸ ಮಾಡಬೇಕು. ಅವರ ಸೇವೆಯನ್ನು ಮಾಡಿ ಅವರ ಮನಸ್ಸನ್ನು ಪ್ರಸನ್ನ ಮಾಡಿಕೊಳ್ಳಬೇಕು. ಅವರು ಕಲಿಸುವದನ್ನು ಲಕ್ಷ್ಯಪೂರ್ವಕವಾಗಿ ಕಲಿಯಬೇಕು. ಅಲ್ಪಾಹಾರ ಮಾಡಬೇಕು. ಅಜೀರ್ಣವಾಗುವಷ್ಟು ಅಥವಾ ಮೈಯಲ್ಲಿ ಆಲಸ್ಯವು ಬರುವಷ್ಟು ತಿನ್ನಬಾರದು. ಹಗಲು ಹೊತ್ತು ಮಲಗಿಕೊಳ್ಳಬಾರದು. ಸ್ತ್ರೀಯರ ಸಂಗಡ ಅಥವಾ ಇತರ ಜನರ ಸಂಗಡದೂರಿಂದ ಮರ್ಯಾದೆಪೂರ್ವಕವಾಗಿ ಮಾತಾಡಬೇಕು. ಉನ್ಮತ್ತತನವನ್ನು ಮಾಡಬಾರದು. ಸಾದಾ ಬಟ್ಟೆಗಳನ್ನು ಧರಿಸಬೇಕು. ಅಲಂಕಾರ ಒಯ್ಯಾರಾದಿಗಳನ್ನು ಮಾಡಬಾರದು. ಯಾವದೊಂದು ವ್ಯಸನವನ್ನು ಹಚ್ಚಿಕೊಳ್ಳಬಾರದು. ಕೆಟ್ಟ ಹುಡುಗರ ಸಹವಾಸದಲ್ಲಿರಬಾರದು. ಗುರುಗಳ ಆಜ್ಞೆಯಂತೆಯೇ ನಡೆಯ

ಬೇಕು. ಅವರಿಗೆ **ಪೂಜ್ಯ**ರೆಂದು ತಿಳಿಯಬೇಕು. ಅವರು ಹೇಳಿದ್ದೆಲ್ಲ ತಮ್ಮ ಹಿತಕ್ಕಾಗಿಯೇ ಎಂದು ಅವರ ಮೇಲೆ ವಿಶ್ವಾಸವಿಡಬೇಕು. **ಗೃಹಸ್ಥಾಶ್ರಮದ ನಿಯಮಗಳು ಯಾವವೆಂದರೆ:–** ಗೃಹಸ್ಥರು ಪರಸ್ತ್ರೀಯರ ಸಂಗಡ ಮಾತಾಡಬೇಕಾದರೆ ದೂರಿಂದಲೇ ಮಾತಾಡಬೇಕು. ಮದ್ಯ ಮಾಂಸ ಮುಂತಾದ ದುಷ್ಟ ಪದಾರ್ಥಗಳನ್ನು ತ್ಯಾಗ ಮಾಡಬೇಕು. ತಮ್ಮ ಮನೆಯೊಳಗಿನ ಯಾವತ್ತು ಜನರ ಮೇಲೆ ಪ್ರೀತಿ ಮಾಡಬೇಕು. ಅವರ ಹಿತಕ್ಕೋಸ್ಕರ ಯಾವಾಗಲು ದಕ್ಷತೆಯನ್ನು ತೆಗೆದುಕೊಳ್ಳಬೇಕು. ಯಾವತ್ತರ ಗೂಡ ಮಮತೆಯಿಂದ ನಡೆದು ಅವರ ಸಂಬಂಧವಾಗಿ ತಮ್ಮ ಕರ್ತವ್ಯವನ್ನು ಮಾಡಿ ಅವರ ಪ್ರೇಮ ಮತ್ತು ವಿಶ್ವಾಸಗಳನ್ನು ಸಂಪಾದಿಸಬೇಕು. ಯೋಗ್ಯ ಮಾರ್ಗದಿಂದ ಹಣವನ್ನು ಸಂಪಾದಿಸಬೇಕು. ಅಡ್ಡತಿಡ್ಡ ಮಾರ್ಗದಿಂದ ಹಣವನ್ನು ಸಂಪಾದಿಸಬಾರದು. ತಮ್ಮ ಮನೆಗೆ ಹೊರಗಿನ ಗೃಹಸ್ಥರು ಅಥವಾ ಅತಿಥಿ ಅಭ್ಯಾಗತರು ಬಂದರೆ ಅವರ ಆದರಸತ್ಕಾರವನ್ನು ಯೋಗ್ಯರೀತಿಯಿಂದ ಮಾಡಬೇಕು. ಸ್ತ್ರೀಯರಿಗೆ ಮರ್ಯಾದೆಯನ್ನು ಕೊಡಬೇಕು. ಹಸಿವೆಯಾದವರಿಗೆ ಅನ್ನವನ್ನು ಮತ್ತು ನೀರಡಿಕೆಯಾದವರಿಗೆ ನೀರನ್ನು ಕೊಡಬೇಕು. ಕುಂಟರು, ಕುರುಡರು, ಮೂಕರು, ಅವಯವಹೀನರು, ಅನಾಥರು ಮೊದಲಾದವರ ಮೇಲೆ ದಯವನ್ನು ತೋರಿಸಿ, ಅವರಿಗೆ ತಪ್ಪದೆ ದಾನಧರ್ಮ ಮಾಡಬೇಕು. **ವಾನಪ್ರಸ್ಥಾಶ್ರಮದ ನಿಯಮಗಳು ಯಾವವೆಂದರೆ:–**ಸಂಸಾರದಲ್ಲಿಯ ಕರ್ತವ್ಯಗಳನ್ನು ಮಾಡಿವ ನಂತರ ಸಂಸಾರದಿಂದ ದೂರವಿರಲಿಕ್ಕೆ ಆರಂಭ ಮಾಡಿದವರು ವಾನಪ್ರಸ್ಥಾಶ್ರಮಿಗಳು. ಅವರು ಭೂಮಿಯಲ್ಲಿ ತಮ್ಮಷ್ಟಕ್ಕೆ ಹುಟ್ಟಿದಂಥ ಗಡ್ಡೆಗೆಣಸುಗಳನ್ನೂ ಹಣ್ಣು ಹಂಪಲಗಳನ್ನೂ ತಿಂದು ಅರಣ್ಯದಲ್ಲಿ ವಾಸಿಸಬೇಕು. ಅವರು ಊರಲ್ಲಿ ಇರಬಾರದು. ಅವರು ಏಕಾಂತವಾಸದಲ್ಲಿದ್ದು ಪರಮೇಶ್ವರನ ಚಿಂತನ ಮಾಡಬೇಕು. ಅಹಂಕಾರವನ್ನೂ ಸಂಸಾರದ ಮೇಲಿನ ಆಸಕ್ತಿಯನ್ನೂ ಬಿಟ್ಟು ಕೊಡಬೇಕು. ಅಂದರೆ ಅವರಿಗೆ ನಿಜಜ್ಞಾನವು ಪ್ರಾಪ್ತವಾಗುವದು. **ಈ ಮೂರು ಆಶ್ರಮಗಳನ್ನು ದಾಟಿದ ನಂತರ ಮನುಷ್ಯನು ಸನ್ಯಾಸಿಯಾಗುವನು. ಇದೇ ಸನ್ಯಾಸಾಶ್ರಮವು. ಸಂಸಾರದಿಂದ ಮನಸ್ಸನ್ನು ತೆಗೆದುಹಾಕಿ ನಿಜಜ್ಞಾನವನ್ನು ಪ್ರಾಪ್ತಮಾಡಿಕೊಂಡು ನಿಜಪ್ರೇಮ**

**ವನ್ನು ಅಂತಃಕರಣದಲ್ಲಿ ಏಕರಸ ಮಾಡುವವನೇ ನಿಜವಾದ ಸನ್ಯಾಸಾಶ್ರಮಿಯು.** ಇಂಥ ಸನ್ಯಾಸಾಶ್ರಮದಲ್ಲಿಯೇ ಮನುಷ್ಯನ ಅಂತ್ಯ ವಾಗಬೇಕು. ”

---

## ೧೭. ಸಮುದ್ರಮಂಥನವು.

ಒಂದಾನೊಂದು ಸಾರೆ ಇಂದ್ರನು ತನ್ನ ಐರಾವತದ ಮೇಲೆ ಕುಳಿತು ಕೊಂಡು ಹೋಗುವಾಗ್ಗೆ ದಾರಿಯಲ್ಲಿ ಅವನಿಗೆ ದುರ್ವಾಸ ಋಷಿಯು ಬೆಟ್ಟಿ ಯಾಯಿತು. ದುರ್ವಾಸನು ಇಂದ್ರನಿಗೆ ಒಂದು ಹೂವಿನ ಮಾಲೆಯನ್ನು ಪ್ರಸಾ ದವೆಂದು ಕೊಟ್ಟನು. ಇಂದ್ರನು ಅದನ್ನು ತೆಗೆದುಕೊಂಡು ತನ್ನ ಐರಾವತ ದ ಕೊರಳೊಳಗೆ ಹಾಕಿದನು. ಐರಾವತವು ಹೇಳಿಕೇಳಿ ಆನೆಯೇ. ಅದುದ ರಿಂದ ಅದು ಆ ಮಾಲೆಯು ಮತ್ತು ಆ ಮಾಲೆಯನ್ನು ಕೊಟ್ಟವನ ಯೋಗ್ಯತೆಯು ನ್ನು ತಿಳಿಯದೆ ಅದನ್ನು ತನ್ನ ಕಾಲೊಳಗೆ ಹಾಕಿ ತುಳಿದು ಬಿಟ್ಟಿತು. ಇದನ್ನು ದುರ್ವಾಸ ಋಷಿಯು ನೋಡಿ, ತಾನು ಪ್ರೀತಿಯಿಂದ ಕೊಟ್ಟಂಥ ವಸ್ತುವಿನ ಅಪಮಾನವು ಈ ಪ್ರಕಾರ ತನ್ನ ಮುಂದೆ ಆಯಿತೆಂದು ಬಹಳ ಸಿಟ್ಟಿಗೆದ್ದನು. ದುರ್ವಾಸ ಋಷಿಯು ಮೊದಲೇ ಸಿಟ್ಟಿನವನು ! ಅದರಲ್ಲಿ **“ ಉರಿಯುವದ ರ ಮೇಲೆ ಹುಲ್ಲು ಚೆಲ್ಲಿದಂತೆ”** ಐರಾವತವು ಅವನನ್ನು ಅಪಮಾನ ಮಾಡಿತು! ಅಂದಬಳಿಕ ಕೇಳುವದೇನದೆ ? ದುರ್ವಾಸನು ಇಂದ್ರನಿಗೆ— “ ಇಂದ್ರಾ, ನೀನು ಸೊಕ್ಕಿನಿಂದ ಈ ಪ್ರಕಾರ ನನ್ನನ್ನು ಅಪಮಾನ ಮಾಡಿದೆ. ಆದುದರಿಂದ ನಿನ್ನ ನ್ನೊಡಗೊಂಡು ತ್ರೈಲೋಕ್ಯವು ದರಿದ್ರವಾಗಲಿ ” ಎಂದು ಅವನಿಗೆ ಶಾಪ ಕೊ ಟ್ಟನು. ಋಷಿಯ ಬಾಯಿಂದ ಬಂದ ಶಬ್ದಗಳು ಹುಸಿಯಾಗುವದು ಹೇಗೆ? ಅದು ದರಿಂದ ಈ ಸಂಕಟವು ನಿಶ್ಚಯವಾಗಿ ಬರುವದೆಂದು ಇಂದ್ರನು ಬಹಳ ಹೆದರಿ ಕೊಂಡು ಬ್ರಹ್ಮದೇವನನ್ನು ಕರೆದುಕೊಂಡು ಮಹಾವಿಷ್ಣುವಿನ ಕಡೆಗೆ ಹೋದ ನು. ಅಲ್ಲಿ ಮಹಾ ವಿಷ್ಣುವು ಇಂದ್ರನು ಹೇಳಿದ್ದನ್ನೆಲ್ಲ ಕೇಳಿಕೊಂಡು ಇಂದ್ರನಿಗೆ— “ ನೀನು ದೈತ್ಯರಗೂಡ ಸ್ನೇಹಭಾವದಿಂದಿದ್ದು ಅಮೃತವನ್ನು ದೊರಕಿಸಲಿ

ಕ್ಕೆ ಪ್ರಯತ್ನ ಮಾಡು. ಅಂದರೆ ನಿನ್ನ ಶಾಪ ವಿಮೋಚನವಾಗುವದು ” ಎಂದು ಹೇಳಿದನು. ಆಗ ಇಂದ್ರನು ದೇವತೆಗಳ ಸಭೆಯನ್ನು ಕೂಡಿಸಿ **“ ಸ್ತ್ರೀಯರು ಕಡಗೋಲು ಹಾಕಿ ಮಜ್ಜಿಗೆ ಕಡೆದು ಬೆಣ್ಣೆ ತೆಗೆಯುವಂತೆ ”** ಸಮುದ್ರಮಂಥನ ಮಾಡಿ ಸಮುದ್ರದ ಹೊಟ್ಟೆಯೊಳಗಿಂದ ಅಮೃತವನ್ನು ತೆಗೆಯಬೇಕೆಂದು ನಿರ್ಣಯಮಾಡಿದರು. ಒಳಿಕ ಅವರು ಸಮುದ್ರವನ್ನು ಕಡೆಯುಲಿಕ್ಕೆ ಮಂದರ ಪರ್ವತವನ್ನು ಕಡಗೋಲು ಮಾಡಿ, ಸರ್ಪಗಳ ರಾಜನಾದ ವಾಸುಕಿಯನ್ನು ಕಡೆಯುವ ಹಗ್ಗವನ್ನು ಮಾಡಿ, ಆ ಹಗ್ಗವನ್ನು ಮಂದರಪರ್ವತವೆಂಬ ಕಡಗೋಲಿನ ಸುತ್ತಲು ಸುತ್ತಿ, ಆ ಹಗ್ಗದ ಒಂದು ತುದಿಯನ್ನು ದೇವತೆಗಳೂ ಮತ್ತೊಂದು ತುದಿಯನ್ನು ಬಲಿ, ಪೌಲೋಮ, ಕಾಲಕೇಯ ಮೊದಲಾದ ದೈತ್ಯರೂ ಹಿಡಿದು ಶೇಷನ ಬೆನ್ನ ಮೇಲೆ ಕಡಗೋಲಿನ ತುದಿಯನ್ನು ನಿಲ್ಲಿಸಿ, ಕಡೆಯಲಿಕ್ಕೆ ಹತ್ತಿದರು. ಕೆಲವು ಹೊತ್ತಿನ ಮೇಲೆ ಮಂದರಪರ್ವತವು ಕೆಳಗೆ ಇಳಿಯಲಿಕ್ಕೆ ಹತ್ತಿತು. ಆಗ ಮಹಾವಿಷ್ಣುವು ಕೂರ್ಮಾವತಾರವನ್ನು ಅಂದರೆ ಆಮೆಯ ರೂಪವನ್ನು ಧರಿಸಿ ಆ ಪರ್ವತವನ್ನು ತನ್ನ ಬೆನ್ನ ಮೇಲೆ ಹೊತ್ತುಕೊಂಡನು. ವಾಸುಕಿ ಸರ್ಪದ ಬಾಯಿಯು ದೇವತೆಗಳ ಕಡೆಗೆ ಇತ್ತು. ಈ ಮಂಥನದಿಂದ ಅದಕ್ಕೆ ಶ್ರಮವಾಗಲಾಗಿ ಅದರ ಬಾಯೊಳಗಿಂದ ಭಯಂಕರ ವಿಷಜ್ವಾಲೆಯು ಹೊರಡಲಿಕ್ಕೆ ಹತ್ತಿತು. ಇದರಿಂದ ಕೆಲವು ದೈತ್ಯರು ಸತ್ತರು. ಕೆಲವು ಹೊತ್ತು ಸಮುದ್ರಮಂಥನ ಮಾಡಿದ ತರುವಾಯ ಅದರೊಳಗಿಂದ ಅನೇಕ ಚಮತ್ಕಾರಿಕ ಪದಾರ್ಥಗಳು ಹೊರಡಲಿಕ್ಕೆ ಹತ್ತಿದವು. ಮೊದಲಿಗೆ ಹಾಲಾಹಲವೆಂಬ ಹೆಸರಿನ ಅತಿಶಯ ಭಯಂಕರ ವಿಷವು ಹೊರಟಿತು. ಅದನ್ನು ಯಾರೂ ತೆಗೆದುಕೊಳ್ಳದಾದರು. ಅದನ್ನು ಭೂಮಿಯ ಮೇಲೆ ಚೆಲ್ಲಿದರೆ ಭೂಮಿಯು ಸುಟ್ಟು ಬೂದಿಯಾಗುತ್ತಿತ್ತು! ಆಗ ಶ್ರೀ ಶಂಕರನು ಲೋಕಕಲ್ಯಾಣಕ್ಕಾಗಿ ಆ ಹಾಲಹಲ ವಿಷವನ್ನು ತಾನೇ ಕುಡಿದು ಬಿಟ್ಟನು. ಆ ವಿಷದಿಂದ ಶ್ರೀಶಂಕರನ ಕಂಠವು ಸುಟ್ಟು ನೀಲೀಕಪ್ಪು ಬಣ್ಣದ್ದಾಯಿತು. ಇದರಿಂದಲೇ ಶ್ರೀಶಂಕರನಿಗೆ ನೀಲಕಂಠನೆಂಬ ಹೆಸರು ಬಂದಿರುವದು. ಶ್ರೀಶಂಕರನು ಈ ವಿಷವನ್ನು ಕುಡಿಯುವಾಗ ಅದರ ಕೆಲವು ಹನಿಗಳು ಭೂಮಿಯ ಮೇಲೆ ಬೀಳಲಾಗಿ ಅವುಗಳನ್ನು ಚೇಳು, ಹಾವು

ನೊದಲಾದ ಪ್ರಾಣಿಗಳು ಕುಡಿದವು. ಇದರಿಂದ ಆ ಪ್ರಾಣಿಗಳು ವಿಷಪ್ರಾಣಿಗಳಾದವು. ಆ ವಿಷದ ತರುವಾಯ ಸಮುದ್ರದಲ್ಲಿ ಕಾಮಧೇನು ಹೊರಟಿತು. ಅದನ್ನು ಋಷಿಗಳು ತೆಗೆದುಕೊಂಡರು. ಆ ಮೇಲೆ ಉಚ್ಚೈಃಶ್ರವಾ ಎಂಬ ಕುದುರೆಯು ಹೊರಟಿತು. ಅದನ್ನು ದೇವತೆಗಳು ದೈತ ರ ರಾಜನಾದ ಬಲಿಗೆ ಕೊಟ್ಟರು. ಐರಾವತವನ್ನು ಇಂದ್ರನು ತೆಗೆದುಕೊಂಡನು. ಕೌಸ್ತುಭ ರತ್ನವನ್ನು ವಿಷ್ಣುವು ತೆಗೆದುಕೊಂಡನು. ಪಾರಿಜಾತಕ ವೃಕ್ಷವನ್ನು ಸ್ವರ್ಗಲೋಕದಲ್ಲಿ ಹಾಗೆಯೇ ಕಾದು ಇಟ್ಟರು. ಆ ಮೇಲೆ ಲಕ್ಷ್ಮಿಯು ಹೊರಟಳು. ಅವಳು ದೈತ್ಯರನ್ನು ವರಿಸದೆ ಮಹಾವಿಷ್ಣುವಿನನ್ನು ವರಿಸಿದಳು. ಇದರಿಂದ ದೈತ್ಯರಿಗೆ ಬಹಳ ಸಿಟ್ಟು ಬಂತು. ಲಕ್ಷ್ಮಿಯ ಹಿಂದಿನಿಂದ ಸುರೆಯು ಹೊರಟಿತು. ಅದನ್ನು ಲಕ್ಷ್ಮಿಯು ದೈತ್ಯರಿಗೆ ಒಯ್ದು ಕೊಟ್ಟಳು. ಸುರೆಯ ಹಿಂದಿನಿಂದ ಅಮೃತಕಲಶವನ್ನು ಕೈಯೊಳಗೆ ಹಿಡಿದುಕೊಂಡಂಥ "ಧನ್ವಂತರಿ" ಎಂಬ ಹೆಸರಿನ ಒಬ್ಬ ಪುರುಷನು ಹೊರಟನು. ದೈತ್ಯರು ಆ ಅಮೃತಕಲಶವನ್ನು "ಧನ್ವಂತರಿ"ಯ ಕೈಯೊಳಗಿಂದ ಬಲಾತ್ಕಾರದಿಂದ ಕಸದುಕೊಂಡು ಹೋದರು. ಆಗ ದೇವತೆಗಳು—"ನಾವು ಇಷ್ಟು ಶ್ರಮ ಮಾಡಿ ಹೊರಡಿಸಿದ್ದನ್ನು ದೈತ್ಯರು ತೆಗೆದುಕೊಂಡು ಹೋದರು. ಮುಂದೇನು ಗತಿ?" ಎಂದು ಬಹಳ ಚಿಂತೆ ಮಾಡಿದರು. ಮುಂದೆ ವಿಷ್ಣುವು ದೈತ್ಯರನ್ನು ಮರುಳುಗೊಳಿಸಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವದಕ್ಕಾಗಿ ಮೋಹಿನಿಯ ರೂಪವನ್ನು ಧರಿಸಿ ದೈತ್ಯರ ಕಡೆಗೆ ಹೋದನು.

---

## ೧೮. ಮೋಹಿನಿಯು ದೈತ್ಯರ ನ್ಯಾಯವನ್ನು ತೀರಿಸಿದ್ದು.

ಇತ್ತಲಾ ದೈತ್ಯರು ತಮ್ಮ ತಮ್ಮೊಳಗೆ ಮೊದಲು ಅಮೃತವನ್ನು ಕುಡಿಯತಕ್ಕವರು ಯಾರೆಂಬ ಬಗ್ಗೆ ಕಲಹವನ್ನು ಮಾಡುತ್ತ ಹಾಗೆಯೇ ನಿಂತುಕೊಂಡಿದ್ದರು. ಇದೇ ಹೊತ್ತು ಸಾಧಿಸಿ ಮೋಹಿನಿಯು ಆ ದೈತ್ಯರ ಮುಂದೆ

ಹೋದಳು. ಅವಳ ಸುಂದರ ರೂಪವನ್ನು ನೋಡಿ ಆ ದೈತ್ಯರು ಆನಂದ ಪಟ್ಟು ಅವಳ ಕಡೆಯಿಂದ ಅಮೃತವನ್ನು ಪಾಲು ಮಾಡಿಕೊಳ್ಳಬೇಕೆಂದು ಆಲೋಚಿಸಿ ತಮ್ಮ ಅಪೇಕ್ಷೆಯನ್ನು ಅವಳಿಗೆ ತಿಳುಹಿಸಿದರು. ಆಗ ಅವಳು ತನ್ನ ಬಗ್ಗೆ ಅವರ ಮನಸ್ಸಿನಲ್ಲಿ ಸಂಶಯವು ಬರಬಾರದೆಂದು ಬೇಕಂತೇ-" ನನಗೆ ಈ ಕಠಿಣ ಕೆಲಸವನ್ನು ಒಪ್ಪಿಸಬೇಡರಿ. ನನ್ನಿಂದ ಕದಾಚಿತ್ ಪಕ್ಷಪಾತವು ಆಗಿ ಯಾರಿಗಾದರೂ ಹೆಚ್ಚು ಅಥವಾ ಯಾರಿಗಾದರೂ ಕಡಿಮೆ ಪಾಲು ಬಂದಲ್ಲಿ ವಿನಾಕಾರಣ ನನ್ನ ಮೇಲೆ ಅನ್ಯಾಯದ ದೋಷವು ಬಂದೀತು. ಆದುದರಿಂದ ಸರ್ವಥಾ ನನಗೆ ಈ ಕೆಲಸವು ಬೇಡ" ಎಂದು ಹೇಳಿದಳು. ಮೋಹಿನಿಯು ಕೊಟ್ಟ ಉತ್ತರದಿಂದ ದೈತ್ಯರ ವಿಶ್ವಾಸವು ಅವಳ ಮೇಲೆ ಹೆಚ್ಚಾಗಲು" ನೀನೇ ನಮಗೆ ಪಾಲು ಹಂಚಿ ಕೊಡಲಿಕ್ಕೆ ಯೋಗ್ಯಳು." ಎಂದು ಅವರು ಅವಳಿಗೆ ಆಗ್ರಹ ಮಾಡಿ ಅವಳ ಕೈಯಲ್ಲಿ ಅಮೃತಕಲಶವವನ್ನು ಕೊಟ್ಟರು. ಅವಳು ಈ ಕೆಲಸಕ್ಕೆ ಒಪ್ಪಿಕೊಳ್ಳುವ ಮುಂಚೆ-" ನನ್ನಿಂದ ಏನಾದರೂ ಪ್ರಮಾದವುಂಟಾದರೆ ನೀವು ಏನೂ ಗುಣಗುಟ್ಟಬಾರದು" ಎಂದು ದೈತ್ಯರ ಕಡೆಯಿಂದ ವಚನ ತೆಗೆದುಕೊಂಡಳು. ದೇವತೆಗಳು ಸಹ ಅಮೃತದ ಪಾಲು ಬೇಡಲಿಕ್ಕೆ ಅಲ್ಲಿಗೆ ಬಂದರು. ಆಗ ಅವಳು ದೇವತೆಗಳನ್ನು ಒಂದು ಕಡೆಯಲ್ಲಿ, ದೈತ್ಯರನ್ನು ಇನ್ನೊಂದು ಕಡೆಯಲ್ಲಿ, ಕುಳ್ಳಿರಿಸಿ- " ಈ ದೇವತೆಗಳು ಬಹಳ ಆಶಾತುರರಿರುತ್ತಾರೆ. ಅವರಿಗೆ ತಾಳ್ಮೆಯು ಏನೇನೂ ಇಲ್ಲ. ಆದುದರಿಂದ ಅವರಿಗೆ ಸ್ವಲ್ಪ ಮೊದಲು ಏನಾದರೂ ಒಕ್ಕೊಟ್ಟು ತೃಪ್ತಿಪಡಿಸೋಣ" ಎಂದು ತನ್ನ ಮೋಹಕ ಮತ್ತು ಮಧುರ ಶಬ್ದಗಳಿಂದ ಆ ದೈತ್ಯರನ್ನು ಒಡಂಬಡಿಸಿ ದೇವತೆಗಳಿಗೆ ಮೊದಲಿಗೆ ಅಮೃತವನ್ನು ಕುಡಿಸಿದಳು. ಮೋಹಿನಿಯ ಕಪಟವು ದೈತ್ಯರಿಗೆ ಗೊತ್ತಾಯಿತು. ಆದರೆ ಅವಳು ಮಾಡಿದ್ದಕ್ಕೆ ಏನೂ ಹೆಸರಿಡಬಾರದೆಂದು ಮೊದಲೇ ಗೊತ್ತು ಆಗಿತ್ತು. ಆದುದರಿಂದ ಅವರು ನಿರುಪಾಯದಿಂದ ಸುಮ್ಮನಾದರು. ದೈತ್ಯರಲ್ಲಿ ರಾಹು ಎಂಬವನು ಒಬ್ಬ ದೇವತೆಯ ವೇಷವನ್ನು ಧಾರಣಮಾಡಿ ಗುಪ್ತ ರೀತಿಯಿಂದ ಸೂರ್ಯಚಂದ್ರರ ನಡುವೆ ಹೋಗಿ ಕುಳಿತುಕೊಂಡು ದೇವತೆಗಳ ಸಂಗಡ ತಾನೂ ಅಮೃತವನ್ನು ಕುಡಿಯಲಿಕ್ಕೆ ಹತ್ತಿದನು. ಇಷ್ಟರಲ್ಲಿ ಸೂರ್ಯಚಂದ್ರರು ಮೋಹಿನಿಗೆ ತಮ್ಮ ಕಣ್ಣಿನಿಂದ ಸಂಜ್ಞೆಯನ್ನು ಮಾಡಿದರು. ಆ ಕೂಡಲೇ ವಿಷ್ಣುವು

ರಾಹುವಿನ ಗಂಟಲೊಳಗೆ ಅಮೃತವು ಇಳಿಯುವ ಮುಂಚೆ ತನ್ನ ಚಕ್ರದಿಂದ ರಾಹುವಿನ ಚಂಡನ್ನು ಹಾರಿಸಿದನು. ರಾಹುವಿನ ಬಾಯಲ್ಲಿ ಅಮೃತವು ಹೋಗಿದ್ದರಿಂದ ಅವನ ಧಡದಿಂದ ಚಂಡು ಕತ್ತರಿಸಿ ಬಿದ್ದಾಗ್ಯೂ ಅವನು ಸಾಯಲಿಲ್ಲ. ಅವನು ಅಮರನಾದನು. ಆದುದರಿಂದ ವಿಷ್ಣುವು ರಾಹುವನ್ನು ಸೂರ್ಯಚಂದ್ರರ ಗ್ರಹಮಾಲೆಯಲ್ಲಿ ಹಾಕಿದನು. ರಾಹುವು ತಾನು ಅಮೃತವನ್ನು ಕುಡಿಯುವಾಗ ಸೂರ್ಯಚಂದ್ರರು ಕಣ್ಣಿನಿಂದ ಸಂಜ್ಞೆಯನ್ನು ಮಾಡಿದ ದ್ವೇಷದ ಸಲುವಾಗಿ ಅವರನ್ನು ನುಂಗುವದಕ್ಕಾಗಿ ಪೌರ್ಣಿಮೆಯ ಮತ್ತು ಅಮಾವಾಸ್ಯದ ದಿವಸ ಅವರ ಮೈಮೇಲೆ ಏರಿ ಹೋಗುತ್ತಾನೆ. ಸೂರ್ಯಚಂದ್ರರಿಗೆ ಗ್ರಹಣಗಳಾಗುವ ಕಾರಣವು ಇದೇ ಇರುತ್ತದೆ. ಮೇಲೆ ಹೇಳಿದ ಪ್ರಕಾರ ದೇವತೆಗಳಿಗೆ ಅಮೃತವನ್ನು ಕುಡಿಸುವದು ಮುಗಿಯುತ್ತ ಬರುವಷ್ಟರಲ್ಲಿ ವಿಷ್ಣುವು ಮೋಹಿಸಿಯ ರೂಪವನ್ನು ಬಿಟ್ಟುಕೊಟ್ಟು ತನ್ನ ನಿಜವಾದ ರೂಪವನ್ನು ತೋರಿಸಿದನು. ವಿಷ್ಣುವು ಮಾಡಿದ ಕಪಟವನ್ನು ಕಂಡು ದೈತ್ಯರಿಗೆ ಹೆಚ್ಚು ದ್ವೇಷವುಂಟಾಗಿ ಅವರು ದೇವತೆಗಳ ಕೂಡ ಹೆಚ್ಚು ಹಗೆತನವನ್ನು ಮಾಡಲಾರಂಭಿಸಿದರು.

---

## ೧೯. ಭಕ್ತಿಯ ಮಹಿಮೆಯು.

### ( ಅಂಬರೀಷನ ಕಥೆಯು. )

ಹಿಂದೆ ನಾಭಾಗನ ಕಥೆಯನ್ನು ಬರೆದಿರುತ್ತೇವಷ್ಟೇ. ಆ ನಾಭಾಗ ರಾಜನ ಮಗನಾದ ಅಂಬರೀಷನು ಮಹಾ ವಿಷ್ಣುಭಕ್ತನಿದ್ದನು ಅವನು ಸಂಸಾರದೊಳಗಿನ ತನ್ನ ಯಾವತ್ತು ಕರ್ತವ್ಯಗಳನ್ನು ಯೋಗ್ಯ ರೀತಿಯಿಂದ ಮಾಡುತ್ತಿದ್ದನು. ಅವನು ವಸಿಷ್ಠ, ಗೌತಮ ಮುಂತಾದ ಮಹಾನ್ ಮಹಾನ್ ಋಷಿಗಳನ್ನು ಕರೆಯಿಸಿ ಅನೇಕ ಅಶ್ವಮೇಧ ಯಜ್ಞಗಳನ್ನು ಮಾಡಿದನು. ಆದರೆ ಕೊನೆಗೆ ಅವನಿಗೆ ಯಜ್ಞಯಾಗಾದಿ ಕರ್ಮಗಳಿಗಿಂತಲು ಭಕ್ತಿಯೇ ಶ್ರೇಷ್ಠವಾದದ್ದೆಂದು ಮನವರಿಕೆಯಾದ್ದರಿಂದ ಅವನು ಭಕ್ತಿಯ ಯೋಗದಿಂದಲೇ ವಿಷ್ಣುವಿನನ್ನು ಸಂತುಷ್ಟ ಪಡಿಸಿದನು. ಇದಕ್ಕಾಗಿ ವಿಷ್ಣುವು ಅವನಿಗೆ ಸುದರ್ಶನ

ಚಕ್ರವನ್ನು ಕೊಟ್ಟನು. ಅಂಬರೀಷನ ಸುದೈವದಿಂದ ಅವನ ಹೆಂಡತಿಯಾದರೂ ಅವನಂತೆಯೇ ಮಹಾಭಕ್ತಿವಂತಳು ಇದ್ದಳು. ವಿಷ್ಣು ಭಕ್ತರು ಸಾಧನ ದ್ವಾದಶಿ ವ್ರತವನ್ನು ಮಾಡುವಂತೆ ಅಂಬರೀಷನಾದರೂ ಈ ವ್ರತವನ್ನು ಮಾಡುತ್ತಿದ್ದನು. ಅಂದರೆ ದಶಮಿಯ ಮಧ್ಯಾಹ್ನಕ್ಕೆ ಒಂದೇ ಹೊತ್ತು ಭೋಜನ ಮಾಡಿ, ಏಕಾದಶಿಯ ದಿವಸ ಉಪೋಷಣ ( ಉಪವಾಸ ) ಮಾಡಿ, ದ್ವಾದಶಿಯ ಬೆಳಿಗ್ಗೆ ವಿಷ್ಣು ಪೂಜೆಯನ್ನೂ, ಬ್ರಾಹ್ಮಣ ಸತ್ಕಾರವನ್ನೂ ಮುಗಿಸಿ, ಹಿಂದುಗಡೆ ಪಾರಣೆಯನ್ನು ಮಾಡುತ್ತಿದ್ದನು. ಒಂದು ಸಾರೆ ದ್ವಾದಶಿಯ ದಿವಸ ಅವನು ವಿಷ್ಣು ಪೂಜೆಯನ್ನು ಮಾಡಿದ ನಂತರ, ಬ್ರಾಹ್ಮಣರ ಅಜ್ಞೆಯನ್ನು ತೆಗೆದುಕೊಂಡು ಇನ್ನು ಪಾರಣೆಯನ್ನು ಮಾಡಬೇಕೆನ್ನುವಷ್ಟರಲ್ಲಿ ದುರ್ವಾಸ ಋಷಿಯು ಅಲ್ಲಿಗೆ ಬಂದನು. ಆಗ ರಾಜನು ಅವನನ್ನು ಯೋಗ್ಯ ರೀತಿಯಿಂದ ಸತ್ಕರಿಸಿ ಅವನಿಗೆ ತನ್ನ ಜೊತೆಗೆ ಭೋಜನವನ್ನು ಮಾಡಬೇಕೆಂದು ಆಗ್ರಹದ ವಿನಂತಿಯನ್ನು ಮಾಡಿದನು ಅದಕ್ಕೆ ದುರ್ವಾಸ ಋಷಿಯು " ಒಳ್ಳೇದು" ಎಂದು ಒಪ್ಪಿಕೊಂಡು, ಸ್ನಾನ ಮಾಡಲಿಕ್ಕೆ ನದಿಯ ತೀರಕ್ಕೆ ಹೊರಟು ಹೋದನು. ಅಲ್ಲಿ ದುರ್ವಾಸ ಋಷಿಗೆ ಸ್ನಾನಸಂಧ್ಯಾದಿ ಕರ್ಮಗಳನ್ನು ತೀರಿಸಿಕೊಳ್ಳಲಿಕ್ಕೆ ಬಹಳ ವೇಳೆಯು ಹತ್ತಿತು. ದ್ವಾದಶಿಯು ಇನ್ನೊಂದು ಗಳಿಗೆಯ ಪರಿಯಂತರ ಮಾತ್ರ ಉಳಿದಿತ್ತು. ಅಲ್ಲಿಯ ತನಕ ರಾಜನು ದುರ್ವಾಸ ಋಷಿಯು ಬರುವ ಮಾರ್ಗವನ್ನು ನೋಡಿದಾಗ್ಯೂ ಆ ಋಷಿಯು ಬರಲಿಲ್ಲ. ಆಗ ರಾಜನು ತಾನು ಯೋಗ್ಯ ವೇಳೆಯೊಳಗಾಗಿ ದ್ವಾದಶಿಯ ಪಾರಣೆಯನ್ನು ಮಾಡದಿದ್ದರೆ ತನ್ನ ಏಕಾದಶಿಯ ವ್ರತವು ಭಂಗವಾಗುವದು; ಋಷಿಯು ಬರುವ ಮೊದಲೇ ತಾನು ಪಾರಣೆಯನ್ನು ಮಾಡಿದರೆ ಋಷಿಯ ಅವಮಾನ ಮಾಡಿದಂತಾಗುವದು. ಇತ್ತ ಕೆರೆ, ಅತ್ತ ಬಾಂವಿ. ಎರಡೂ ಕಡೆಯಿಂದ ತನಗೆ ಸಂಕಟವು ಬಂತು ಎಂದು ಚಿಂತೆ ಮಾಡಹತ್ತಿದನು. ಮುಂದೆ ಸ್ವಲ್ಪ ಹೊತ್ತಿನ ಮೇಲೆ ತಾನು ಸ್ವಲ್ಪ ನೀರು ಕುಡಿದರೆ ಪಾರಣೆಯನ್ನು ಮಾಡಿದಂತೆ ಆಗುವದು; ಹಾಗೂ ಋಷಿಯ ಅಪಮಾನವನ್ನು ಮಾಡಿದಂತೆ ಆಗಲಾರದು ಎಂದು ತನ್ನ ಮನಸ್ಸಿನಲ್ಲಿ ವಿಚಾರ ಮಾಡಿ ಬ್ರಾಹ್ಮಣರ ಅನುಜ್ಞೆಯನ್ನು ತೆಗೆದುಕೊಂಡು ಸ್ವಲ್ಪ ನೀರು ಕುಡಿದನು. ಕೆಲವು ಹೊತ್ತಿನ ಮೇಲೆ ದುರ್ವಾಸ ಋಷಿಯು ಅಲ್ಲಿಗೆ ಬಂದು ರಾಜನು

ತನ್ನನ್ನು ಬಿಟ್ಟು ಒಬ್ಬನೇ ಪಾರಣೆಯನ್ನು ಮಾಡಿದನೆಂದು ಕೇಳಿ ಸಂತಾಪ ಗೊಂಡನು. ಮೊದಲೇ ದುರ್ವಾಸ ಋಷಿಯು ಕೋಪಿಷ್ಠನು! ಈಗಂತೂ ಕೇಳುವದೇನದೆ? ಕೂಡಲೇ ಅವನು ತನ್ನ ಜಡೆಯೊಳಗಿಂದ ಕೂದಲಗಳ ಒಂದು ಗೊಂಚಲವನ್ನು ಕಿತ್ತು ಆ ಗೊಂಚಲದಿಂದ ಒಬ್ಬ ರಾಕ್ಷಸಿಯನ್ನು ಉತ್ಪನ್ನಮಾಡಿ ಅವಳನ್ನು ಆ ರಾಜನ ಮೈಮೇಲೆ ಬಿಟ್ಟನು. ಆ ರಾಕ್ಷಸಿಯು ತನ್ನ ಕೈಯಲ್ಲಿ ಶಸ್ತ್ರವನ್ನು ತೆಗೆದುಕೊಂಡು ರಾಜನ ಮೈಮೇಲೆ ಹೋದಳು. ಹಿಂದಕ್ಕೆ ವಿಷ್ಣುವು ಅಂಬರೀಷನಿಗೆ ಒಂದು ಸುದರ್ಶನ ಚಕ್ರವನ್ನು ಕೊಟ್ಟಿದ್ದನು. ಆ ಸುದರ್ಶನ ಚಕ್ರದಿಂದ ರಾಜನ ಮೈಮೇಲೆ ಏನಾದರೂ ಸಂಕಟವು ಬಂದಾಗ ಅವನನ್ನು ರಕ್ಷಣ ಮಾಡುವ ಕೆಲಸವು ನಡೆಯುತ್ತಿತ್ತು. ಅದುದರಿಂದ ಈ ಸಾರೆ ಆ ಸುದರ್ಶನ ಚಕ್ರವು ದುರ್ವಾಸ ಋಷಿಯು ಉತ್ಪನ್ನ ಮಾಡಿದ ರಾಕ್ಷಸಿಯನು ಸಂಹಾರ ಮಾಡಿ ದುರ್ವಾಸನ ಬೆನ್ನನ್ನು ಹಿಡಕೊಂಡಿತು. ದುರ್ವಾಸನು ಹೋದಲ್ಲೆಲ್ಲ ಅದು ಅವನ ಬೆನ್ನು ಬಿಡಲೇ ಇಲ್ಲ. ಇದನ್ನು ಕಂಡು ಆ ದುರ್ವಾಸ ಋಷಿಯು ಅಂಜಿಕೊಂಡು, ತನಗೆ ಅಡಗಿಕೊಳ್ಳಲಿಕ್ಕೆ ಸ್ಥಳವನ್ನು ಹುಡುಕಹತ್ತಿದನು. ಆದರೆ ಎಲ್ಲಿಯೂ ಸ್ಥಳವು ದೊರಕಲಿಲ್ಲ. ಆಗ ಅವನ ಬ್ರಹ್ಮದೇವರ ಕಡೆಗೆ ಹೋಗಿ ಹೇಳಿಕೊಂಡನು. ಅವನು ವಿಷ್ಣುವಿನ ಸುದರ್ಶನ ಚಕ್ರವನ್ನು ನಿವಾರಣ ಮಾಡುವ ಶಕ್ತಿಯು ತನ್ನಲ್ಲಿ ಇಲ್ಲವೆಂದು ಹೇಳಿದನು. ಆಗ ದುರ್ವಾಸ ಋಷಿಯು ಶಂಕರನ ಕಡೆಗೆ ಹೋದನು. ಆಗ ಅವನು–" ನೀನು ವಿಷ್ಣುವಿನ ಕಡೆಗೆ ಹೋಗಿ ಹೇಳಿಕೋ" ಎಂದು ಸೂಚಿಸಿದನು. ಅಗ ಕೊನೆಗೆ ದುರ್ವಾಸನು ವಿಷ್ಣುವಿನ ಕಡೆಗೆ ಹೋಗಿ ಈ ಸಂಕಟದಿಂದ ತನ್ನನ್ನು ಬಿಡಿಸಬೇಕೆಂದು ಅವನಿಗೆ ಬಹಳ ಪರಿಯಿಂದ ಹೇಳಿಕೊಂಡನು. ಆಗ ವಿಷ್ಣುವು— " ನಾನು ಒಮ್ಮೆ ಕೊಟ್ಟ ಶಕ್ತಿಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಸಾಮರ್ಥ್ಯವು ನನ್ನ ಭಕ್ತರಲ್ಲಿದ್ದಷ್ಟು ಸ್ವತಃ ನನ್ನಲ್ಲಿ ಇಲ್ಲ. ಆದುದರಿಂದ ನೀನು ಯಾವನ ಅನ್ಯಾಯ ಮಾಡಿರುವಿಯೋ ಅವನ ಕಡೆಗೆ ಹೋಗು. ಅವನು ನಿನ್ನ ರಕ್ಷಣ ಮಾಡುವನು" ಎಂದು ಹೇಳಿದನು. ಆಗ ದುರ್ವಾಸ ಋಷಿಯು ಅಂಬರೀಷನ ಕಡೆಗೆ ಹೋಗಿ ಅವನ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡನು. ಇದರಿಂದ ರಾಜನಿಗೆ ಆ ಋಷಿಯ ಬಗ್ಗೆ ದಯವು ಹುಟ್ಟಲು, ರಾಜನು ಅವನನ್ನು ಸುದರ್ಶನ ಚಕ್ರದ ಕಾಟದಿಂದ ತಪ್ಪಿಸಿದನು.

# ೨೦. ರಾಣಿಯ ಜಾಣತನವು.

## ( ಕಲ್ಮಾಷಪಾದ ರಾಜನ ಕಥೆಯು. )

ಭಗೀರಥನ ವಂಶದಲ್ಲಿ ಸೌದಾಸ ಎಂಬ ಹೆಸರಿನ ಒಬ್ಬ ರಾಜನು ಆಗಿ ಹೋದನು. ಅವನಿಗೆ ಕಲ್ಮಾಷಪಾದ ಎಂಬ ಹೆಸರು ಬಿದ್ದಿತ್ತು. ಅದರ ಕಾರಣವೇನಂದರೆ:—ಒಮ್ಮೆ ಸೌದಾಸ ರಾಜನು ಅಡವಿಯಲ್ಲಿ ಬೇಟೆಯನ್ನಾಡಲಿಕ್ಕೆ ಹೋಗಿದ್ದನು. ಅಲ್ಲಿ ಅವನಿಗೆ ಇಬ್ಬರು ರಾಕ್ಷಸರು ಬೆಟ್ಟಿಯಾದರು. ಅವರಲ್ಲಿ ಒಬ್ಬ ರಾಕ್ಷಸನನ್ನು ಆ ರಾಜನು ಕೊಂದನು. ಆದರೆ ಎರಡನೇ ರಾಕ್ಷಸನು ಅವನಿಂದ ತಪ್ಪಿಸಿಕೊಂಡು ಹೋಗಿ ಅವನ ಮೇಲೆ ಸೇಡು ತೀರಿಸಿಕೊಳ್ಳುವದಕ್ಕಾಗಿ ಒಬ್ಬ ಅಡಿಗಿಯವನ ವೇಷ ಹಾಕಿಕೊಂಡು ಅವನ ಪಾಕಶಾಲೆಯಲ್ಲಿ ಕೆಲಸವನ್ನು ಹಿಡಕೊಂಡು ಇರಹತ್ತಿದನು. ವಸಿಷ್ಠಋಷಿಯು ಈ ರಾಜನ ಮನೆಯಲ್ಲಿ ಯಜ್ಞ ಮಾಡುವದಕ್ಕಾಗಿ ಅನೇಕ ದಿವಸಗಳ ಪರಿಯಂತರ ಅಲ್ಲಿ ಹೋಗಿ ಇರುತ್ತಿದ್ದನು. ಆಗ ಒಂದು ದಿವಸ ಆ ಕಪಟ ಅಡಿಗೆಯವನು ಮನುಷ್ಯನ ಮಾಂಸವನ್ನು ಕುದಿಸಿ ಆ ಋಷಿಯ ತಾಟಿನಲ್ಲಿ ಒಡಿಸಿದನು. ಈ ಪ್ರಕಾರ ಮಾಡುವದಕ್ಕೆ ರಾಜನೇ ಅಪ್ಪಣೆಯನ್ನು ಕೊಟ್ಟಿರಬಹುದೆಂದು ವಸಿಷ್ಠ ಋಷಿಯು ಸಂತಾಪಗೊಂಡು ಆ ರಾಜನಿಗೆ—" ನೀನು ರಾಕ್ಷಸನಾಗಿ ಹುಟ್ಟುವಿ" ಎಂದು ಶಾಪ ಕೊಟ್ಟನು. ಆಗ ರಾಜನು ತನ್ನ ಕಡೆಗೆ ಏನೂ ಅಪರಾಧವಿಲ್ಲದೆ ಋಷಿಯು ತನಗೆ ಶಾಪ ಕೊಟ್ಟದ್ದರಿಂದ ತಾನೂ ಬಹಳ ಸಂತಾಪಗೊಂಡು ಆ ಋಷಿಗೆ ತಿರುಗಿ ಶಾಪ ಕೊಡಬೇಕೆಂದು ತನ್ನ ಕೈಯಲ್ಲಿ ನೀರು ತೆಗೆದುಕೊಂಡನು. ಇಷ್ಟರಲ್ಲಿ ಅವನ ರಾಣಿಯು ಅಲ್ಲಿಗೆ ಬಂದು ವಸಿಷ್ಠ ಋಷಿಯ ಕಡೆಗೆ ಏನೂ ಅಪರಾಧವಿಲ್ಲೆಂತಲೂ ಇದೆಲ್ಲ ಅಡಿಗೆಯವನ ಅಪರಾಧವೆಂತಲೂ ಆ ರಾಜನ ಸಮಾಧಾನ ಮಾಡಿದಳು. ಆಗ ರಾಜನು ಸಮಾಧಾನ ಹೊಂದಿ ತಾನು ಕೈಯಲ್ಲಿ ತೆಗೆದುಕೊಂಡ ನೀರನ್ನು ಎಲ್ಲಿ ಚೆಲ್ಲಿಕೊಡಬೇಕೆಂದು ಬಹಳ ವಿಚಾರ ಮಾಡಿದನು. ಶಾಪದ ನೀರನ್ನು ಭೂಮಿಯ ಮೇಲೆ ಚೆಲ್ಲಿಕೊಟ್ಟರೆ ಭೂಮಿಯ ಮೇಲಿನ ಜನರೆಲ್ಲ ನಾಶವನ್ನು ಹೊಂದುವರೆಂದು ವಿಚಾರ ಮಾಡಿ ಅವನು ಆ ನೀರನ್ನು ತನ್ನ ಕಾಲಮೇಲೆಯೇ ಸುರುವಿಕೊಂಡನು. ಇದರಿಂದ ಅವನ ಕಾಲು

ಗಳು ಇದ್ದಲಿಯಂತೆ ಕಪ್ಪು ಆದವು. ಆದುದರಿಂದ ಅವನಿಗೆ ಕಲ್ಮಾಷಪಾದ ನೆಂಬ ಹೆಸರು ಬಿತ್ತು. ಈ ಯಾವತ್ತು ನಿಜ ಸಂಗತಿಗಳು ವಸಿಷ್ಠ ಋಷಿಗೆ ತಿಳಿ ದ ಬಳಿಕ ಅವನು ರಾಜನಿಗೆ–"ಇನ್ನು ೧೨ ವರ್ಷಗಳ ತರುವಾಯ ನಿನಗೆ ನಿನ್ನ ಮೊದಲಿನ ರೂಪವು ಬರುವದು" ಎಂದು ಹೇಳಿ ಯಾವತ್ತು ರೀತಿಯಿಂದ ಅವ ನ ಕಲ್ಯಾಣವನ್ನು ಮಾಡಿದನು.

---

## ೨೧. ಸ್ತ್ರೀ ಮೋಹವು.

### (ಪುರುರವಾ ಮತ್ತು "ಊರ್ವಶಿ ಇವರ" ಕಥೆಯು.)

ಒಂದು ಸಾರೆ ನಾರದಮುನಿಯು ಪುರುರವಾ ರಾಜನ ಅರಮನೆಯಿಂದ ಹೊರಟು ಇಂದ್ರಲೋಕಕ್ಕೆ ಹೋಗಿ, ಅಲ್ಲಿ ಆ ರಾಜನ ಸೌಂದರ್ಯವನ್ನು ಬಹಳವಾಗಿ ಬಣ್ಣಿಸಿ ಹೇಳಿದನು. ಅದನ್ನು ಕೇಳಿ ಇಂದ್ರನ ಅಪ್ಸರೆಯಾದ ಊರ್ವಶಿಗೆ ತಾನು ಆ ರಾಜನನ್ನು ವರಿಸಬೇಕೆಂಬ ಲವಲವಿಕೆಯು ಹುಟ್ಟಿ ಅವಳು ಆ ರಾಜನ ಬಳಿಗೆ ಬಂದು ಅವನಿಗೆ—" ನೀನು ನನ್ನ ಎರಡು ಮಾತು ಗಳಿಗೆ ಒಪ್ಪಿಕೊಂಡರೆ ನಾನು ನಿನ್ನನ್ನು ವರಿಸುತ್ತೇನೆ. ಒಂದನೇ ಮಾತು ಯಾವದೆಂದರೆ— ನಾನು ಎರಡು ಕುರಿಗಳನ್ನು ನನ್ನ ಹೊಟ್ಟೆಯ ಮಕ್ಕಳಂತೆ ಪಾಲನ ಮಾಡಿರುತ್ತೇನೆ. ಅವುಗಳಿಗೆ ಯಾವ ತರದಿಂದಲೂ ಉಪದ್ರವವಾಗದಂತೆ ನೀನು ಅವುಗಳನ್ನು ಪಾಲನ ಮಾಡಬೇಕು. ಹಾಗೂ ಎರಡನೇ ಮಾತು ಯಾ ವದೆಂದರೆ, ನನಗೆ ಸ್ವರ್ಗದಲ್ಲಿ ಅಮೃತವನ್ನು ಭೋಜನ ಮಾಡುವ ರೂಢಿಯು ಇರುತ್ತಿದ್ದು ಇಲ್ಲಿ ಮೃತ್ಯುಲೋಕದೊಳಗೆ ಅಮೃತವು ಸಿಗುವ ಸಂಭವ ವಿಲ್ಲದ್ದ ರಿಂದ ನಾನು ತುಪ್ಪವನ್ನು ಅಮೃತವೆಂದು ತಿಳಿದು ಅದನ್ನಷ್ಟೇ ಉಂಡು ಜೀವ ನ ಮಾಡುವೆನು. ನಾನು ಯಾವ ಪ್ರಸಂಗದಲ್ಲಿಯೂ ಅನ್ನವನ್ನು ಉಣ್ಣಲಿಕ್ಕಿಲ್ಲ" ಎಂದು ಹೇಳಿದಳು. ರಾಜನು ಈ ಎರಡೂ ಮಾತುಗಳಿಗೆ ಒಪ್ಪಿಕೊಂಡದ್ದ ರಿಂದ ಊರ್ವಶಿಯು ಅನೇಕ ದಿವಸಗಳ ವರೆಗೆ ರಾಜನ ಹತ್ತರ ಆನಂದದಿಂದ ಇದ್ದಳು. ಇತ್ತ ಊರ್ವಶಿಯನ್ನು ಬಿಟ್ಟು ಇಂದ್ರನಿಗೆ ಇರಲಿಕ್ಕೆ ಸಮಾಧಾನ

ವೆನಿಸಲಿಲ್ಲ. ಆಗ ಆವನು ಅವಳನ್ನು ಕರೆದುಕೊಂಡು ಒರಲಿಕ್ಕೆ ಗಂಧರ್ವನನ್ನು ಮೃತ್ಯುಲೋಕಕ್ಕೆ ಕಳುಹಿಸಿದನು. ಆ ಗಂಧರ್ವನು ಯುಕ್ತಿಯಿಂದ ಊರ್ವಶಿಯ ಎರಡೂ ಕುರಿಗಳನ್ನು ಒಡಿಸಿಕೊಂಡು ಹೋದನು. ಊರ್ವಶಿಯು ತನ್ನ ಕುರಿಮರಿಗಳು ಕಳೆದು ಹೋದ್ದರಿಂದ ತನ್ನ ಒಂದು ಮಾತು ಮುರಿದು ಹೋಯಿತೆಂದು ರಾಜನ ಮೇಲೆ ಸಿಟ್ಟಾಗಿ ಸ್ವರ್ಗಲೋಕಕ್ಕೆ ಹೊರಟು ಹೋದಳು. ಇದರಿಂದ ರಾಜನಿಗೆ ಊರ್ವಶಿಯ ವಿರಹಸಂತಾಪವು ಹೆಚ್ಚಾಗಿ ಅವನು ಭ್ರಮಿಷ್ಟನಂತೆ ಅಡ್ಡಾಡಹತ್ತಿದನು. ಒಂದು ದಿವಸ ಅವನು ಅಡ್ಡಾಡುತ್ತ ಸರಸ್ವತೀನದಿಯ ತೀರಕ್ಕೆ ಹೋದಾಗ ಅಲ್ಲಿ ಅವನಿಗೂ ಊರ್ವಶಿಗೂ ತಿರಿಗಿ ಭೆಟ್ಟಿಯಾಯಿತು. ಆಗ ರಾಜನು ಊರ್ವಶಿಯನ್ನು ಕಂಡು ತನ್ನ ಕಣ್ಣೊಳಗೆ ನೀರು ತಂದು ಅವಳನ್ನು ಬಿಟ್ಟು, ತಾನು ಒಂದು ಕ್ಷಣ ಸಹ ಜೀವಿಸಲಾರೆನೆಂದು ಅವಳ ಮುಂದೆ ಬಹಳವಾಗಿ ದುಃಖ ಮಾಡಿದನು. ಆಗ ಅವಳು ಅವನಿಗೆ-"ನೀನು ಗಂಧರ್ವನ ಪ್ರಾರ್ಥನೆಯನ್ನು ಮಾಡು" ಎಂದು ಹೇಳಿ ಹೊರಟು ಹೋದಳು. ಆದರಂತೆ ಅವನು ಮಾಡಲು, ಗಂಧರ್ವನು, ರಾಜನಿಗೆ ಒಂದು ಅಗ್ನಿಸ್ಥಾಲಿಯನ್ನು ಕೊಟ್ಟನು. ಅದನ್ನು ರಾಜನು ನಿತ್ಯದಲ್ಲಿ ಪೂಜೆ ಮಾಡುತ್ತಿರಲಾಗಿ ಊರ್ವಶಿಯ ಬಗ್ಗೆ ರಾಜನ ಹುಚ್ಚು ಹೊರಟು ಹೋಗಿ ಅವನ ಲಕ್ಷ್ಯವು ಕಮೇಣ ಈಶ್ವರಭಕ್ತಿಯ ಕಡೆಗೆ ತಿರುಗಿತು. ಇದರಿಂದ ರಾಜನು ಪುಣ್ಯ ಸಂಪಾದನ ಮಾಡಿ ಮುಂದೆ ಗಂಧರ್ವಲೋಕಕ್ಕೆ ಹೋದನು.

---

## ೨೨. ಭೂತದಯದ ಅವತಾರವು.

### (ರಾಜಾ ರಂತಿದೇವನ ಕಥೆಯು.)

ಪೂರ್ವದಲ್ಲಿ ಭರತ ಕುಲದೊಳಗೆ ರಂತಿದೇವನೆಂಬ ಹೆಸರಿನ ಒಬ್ಬ ಸುಪ್ರಸಿದ್ಧ ರಾಜನು ಆಗಿಹೋದನು. ಅವನು ಅರಣ್ಯದಲ್ಲಿ ಯಾವಾಗಲು ಸಂತುಷ್ಟ ವೃತ್ತಿಯಿಂದ ಇರುತ್ತಿದ್ದನು. ಅವನ ಕಡೆಗೆ ಯಾವನಾದರೂ ಅತಿಥಿಯು ಬಂದರೆ ಅವನು ತನ್ನ ಹತ್ತರ ತನಗೆ ಸಾಕಾಗುವಷ್ಟು, ಅದೆಯೋ ಇಲ್ಲ

ವೋ ಎಂಬದರ ವಿಚಾರ ಮಾಡದೆ ತನ್ನ ಹತ್ತರ ಇದ್ದದ್ದನ್ನೆಲ್ಲ ಕೊಟ್ಟು ಆ ಅತಿಥಿಯ ಸತ್ಕಾರ ಮಾಡುತ್ತಿದ್ದನು. ಇದರಿಂದ ಅವನ ಕುಟುಂಬದಲ್ಲಿಯ ಜನರಿಗೆ ಒಮ್ಮೊಮ್ಮೆ ಬಹಳ ಕಠಿಣ ಪ್ರಸಂಗವು ಬರುತ್ತಿತ್ತು. ಒಂದು ಸಾರೆ ಅವನ ಕುಟುಂಬದ ಜನರಿಗೆ ೪೮ ದಿವಸಗಳ ವರೆಗೆ ಅನ್ನನೀರಿಲ್ಲದೆ ಉಪವಾಸ ದಿಂದ ಇರಬೇಕಾಯಿತು. ೪೯ನೆಯ ದಿವಸ ಅವನಿಗೆ ಯಾರೋ ಒಬ್ಬರು ಹುಗ್ಗಿ, ತುಪ್ಪ, ಸಜ್ಜಿಗಿ. ಮತ್ತು ನೀರು ತಂದುಕೊಟ್ಟರು. ಇದನ್ನು ಕಂಡು ಅವನ ಕುಟುಂಬದ ಜನರಿಗೆ ಬಹಳ ಆನಂದವುಂಟಾಗಿ ಆವರು ಅದನ್ನು ಉಂಡು ತಮ್ಮ ಉದರಶಾಂತಿಯನ್ನು ಮಾಡಿಕೊಳ್ಳಬೇಕೆನ್ನುವಷ್ಟರಲ್ಲಿ ಅವರ ಬಾಗಿಲಿಗೆ ಒಬ್ಬ ಅತಿಥಿಯು ಬಂದನು. ಆ ಅತಿಥಿಯನ್ನು ನೋಡಿದ ಕೂಡಲೆ ರಂತಿ ದೇವನಿಗೆ ಬಹಳ ಸಂತೋಷವುಂಟಾಯಿತು. ಅವನು ಆ ಅತಿಥಿಗೆ ತೃಪ್ತಿಯಾ ಗುವಂತೆ ಊಟಕ್ಕೆ ಬಡಿಸಿದನು. ಆ ಮೇಲೆ ಉಳಿದ ಅನ್ನವನ್ನು ಅವನ ಕುಟುಂ ಬದವರು ಉಣ್ಣಬೇಕೆನ್ನುವಷ್ಟರಲ್ಲಿ ಅವನ ಬಳಿಗೆ ಒಬ್ಬ ಶೂದ್ರ ಅತಿಥಿಯು ಬಂದನು. ಆಗ ರತಿದೇವನು– "ಎಲ್ಲರೂ ಪರಮೇಶ್ವರನ ಮಕ್ಕಳು. ಎಲ್ಲರ ಮೇಲೂ ಸಮಾನವಾಗಿ ಪ್ರೀತಿ ಮಾಡಬೇಕು. ಪಂಗ್ತಿ ಪ್ರಪಂಚ ಮಾಡ ಬಾರದು. ಉಚ್ಚ ನೀಚ ಭಾವವನ್ನು ಮನಸ್ಸಿನಲ್ಲಿ ಎಂದೂ ತರಬಾರದು. ಅತಿ ಥಿಯನ್ನು ಬಿಟ್ಟುಕೊಟ್ಟು ನಾವು ಉಂಡರೆ ನಮ್ಮ ಹೊಟ್ಟೆಯಲ್ಲಿ ಬಂಗಾರವಾ ಗುವದಿಲ್ಲ." ಎಂದು ವಿಚಾರ ಮಾಡಿ ಅವನಿಗೂ ಅನ್ನವನ್ನು ಬಡಿಸಿ ಅವನನ್ನು ತೃಪ್ತಬಡಿಸಿದನು. ಅವನ ಹಿಂದಿನಿಂದ ಮೂರನೇ ಒಬ್ಬ ಅತಿಥಿಯು ತನ್ನ ನಾಯಿಗಳನ್ನು ಕರೆದುಕೊಂಡು ರಂತಿದೇವನಲ್ಲಿಗೆ ಬಂದನು. ಆಗ ರಂತಿದೇವ ನಿಗೆ ಆ ಅತಿಥಿಯ ಬಗ್ಗೆ ಮತ್ತು ಅವನ ಸಂಗಡ ಇದ್ದ ನಾಯಿಗಳ ಬಗ್ಗೆ ಭೂತ ದಯವು ಹುಟ್ಟಿ ಅವನು ತನ್ನ ಹತ್ತರ ಉಳಿದಿದ್ದ ಯಾವತ್ತು ಅನ್ನವನ್ನು ಅವರಿ ಗೆ ಬಡಿಸಿದನು. ಈ ಪ್ರಕಾರ ತನ್ನ ಹತ್ತರ ಇದ್ದ ಅನ್ನವೆಲ್ಲ ತೀರಿಹೋದ್ದರಿಂದ ತಾನು ನೀರು ಮಾತ್ರ ಕುಡಿದು ತನ್ನ ಜಠರಾಗ್ನಿಯನ್ನು ತೃಪ್ತಪಡಿಸಬೇಕೆಂದು ಮನಸ್ಸಿನಲ್ಲಿ ವಿಚಾರ ಮಾಡಿದನು. ಇಷ್ಟರಲ್ಲಿ ಒಬ್ಬ ಚಾಂಡಾಲನು ಬಹಳ ನೀ ರಡಿಸಿ ಬಂದು ಅವನಿಗೆ– "ಮಹಾರಾಯಾ, ನನಗೆ ನೀರಡಿಕೆಯಾಗಿ ನನ್ನ ಜೀವಕ್ಕೆ ಕಸವಿಸಿಯಾಗಲಿಕ್ಕೆ ಹತ್ತಿದೆ. ನೀನು ನನಗೆ ನೀರು ಕುಡಿಯಲಿಕ್ಕೆ

ಕೊಟ್ಟರೆ ಪರಮೇಶ್ವರನು ನಿನಗೆ ಬಹಳ ಕಲ್ಯಾಣ ಮಾಡುವನು.” ಎಂದು ನುಡಿದನು. ಇದನ್ನು ಕೇಳಿ ರಂತಿದೇವನಿಗೆ ದಯುವು ಹುಟ್ಟಿ ಅವನು ತನ್ನ ಹತ್ತ ರ ಉಳಿದಿದ್ದ ನೀರನ್ನೆಲ್ಲ ಆ ಚಾಂಡಾಲನಿಗೆ ಕುಡಿಯಲಿಕ್ಕೆ ಕೊಟ್ಟನು. ಈ ಅತಿಥಿ ರೂಪದಿಂದ ಬಂದವರು ನಿಜವಾದ ಅತಿಥಿಗಳಿರದೆ ಪ್ರತ್ಯಕ್ಷ ದೇವತೆಗಳೇ ರಂತಿದೇವನ ಪರೀಕ್ಷೆ ಮಾಡಲಿಕ್ಕೆ ಬಂದಿದ್ದರು. ಅವರು ರಂತಿದೇವನ ಅಲೌ ಕಿಕ ಭೂತದಯುವನ್ನು ನೋಡಿ ಆಶ್ಚರ್ಯಚಕಿತರಾಗಿ ಅವನಿಗೆ ತಮ್ಮ ನಿಜರೂಪ ವನ್ನು ಪ್ರಕಟ ಮಾಡಿ–“ ರಂತಿದೇವಾ! ನಿನ್ನ ಉದಾರಬುದ್ಧಿಯನ್ನು ನೋಡಿ ನಾವು ನಿನಗೆ ಪ್ರಸನ್ನರಾಗಿದ್ದೇವೆ. ನೀನು ನಿನಗೆ ಇಷ್ಟವಿದ್ದ ವರವನ್ನು ಬೇಡಿಕೋ” ಎಂದು ಹೇಳಿದರು. ಆದರೆ ರಾಜಾ ರಂತಿದೇವನು ಆ ದೇವತೆಗಳಿಗೆ ನಮಸ್ಕಾರ ಮಾಡಿ ಸುಮ್ಮನೆ ನಿಂತುಕೊಂಡನು. ಅವನು ಯಾವದೂ ವರವನ್ನು ಕೇಳಿಕೊಳ್ಳಲಿಲ್ಲ. ರಂತಿದೇವನ ನಿರಪೇಕ್ಷ ಬುದ್ಧಿಯು ಅರ್ಥಾತ್ ನಿಷ್ಕಾಮ ಕರ್ಮವು ಎಷ್ಟು ಶ್ಲಾಘನೀಯವಿರುತ್ತದೆಂದು ಹೇಳಬೇಕು! **ಫಲಾಶೆಯನ್ನು ಹಿಡಿಯದೆ ಭೂತದಯದ ಕೆಲಸಗಳನ್ನು ಮಾಡುವದು ತಮ್ಮ ಕರ್ತವ್ಯವೆಂದು ತಿಳಿಯಬೇಕೆಂದು ರಂತಿದೇವನ ಚರಿತ್ರವು ಸಾಕ್ಷಾತ್ಕಾರವಾಗಿ ಹೇಳುತ್ತದೆ.**

---

## ೨೪. ಯಾದವರು ಮತ್ತು ಅವರ ಪರಸ್ಪರ ಕಲಹವು.

ಪುರುವಂಶದಲ್ಲಿ ಹುಟ್ಟಿದಂಥವರು ಪೌರವರು, ಕುರುವಂಶದಲ್ಲಿ ಹುಟ್ಟಿದಂಥವರು ಕೌರವರು, ಪಂಡುವಿನ ಹೊಟ್ಟೆಯಿಂದ ಹುಟ್ಟಿದಂಥವರು ಪಾಂಡವರು ಅನ್ನಿಸಿಕೊಳ್ಳುವಂತೆಯೇ ಯದುರಾಜನ ವಂಶದಲ್ಲಿ ಹುಟ್ಟಿದಂಥವರು ಯಾದವರುಎಂದು ಅನ್ನಿಸಿಕೊಳ್ಳುವರು. ಯದುವು ಯಯಾತಿಯ ಮಗನು. ಯದುವಿನಿಂದ ಆದ ಯಾದವ ಕುಲದಲ್ಲಿ ಅನೇಕ ಮಂದಿ ಶೂರ ಮತ್ತು ಸುಪ್ರಸಿದ್ಧ ರಾಜರು ಆಗಿ ಹೋದರು. ಮಹಾ ಪರಾಕ್ರಮಿಯಾದ ರಾವಣನ ಸೊಕ್ಕು ಮುರಿದಂಥ

ಕಾರ್ತಿವೀರ್ಯ ಸಹಸ್ರಾರ್ಜುನನು ಯಾದವ ವಂಶದವನೇ. ಬಲರಾಮ, ಶ್ರೀಕೃಷ್ಣ, ಅನಿರುದ್ಧ ಮೊದಲಾದ ವೀರಪುರುಷರು ಸಹ ಇದೇ ವಂಶದವರೇ. ಈ ವಂಶದವರು ಶೌರ್ಯ, ಧೈರ್ಯ, ಉತ್ಸಾಹ, ಕೀರ್ತಿ, ಧರ್ಮಶ್ರದ್ಧೆ ಇತ್ಯಾದಿ ಸದ್ಗುಣಗಳ ಬಗ್ಗೆ ಪ್ರಖ್ಯಾತರಿದ್ದು ಶ್ರೀಕೃಷ್ಣನ ತರುವಾಯ ಈ ವಂಶದ ದುರ್ದಶೆಯಾಗಿ ಅದು ವಿನಾಶವನ್ನು ಹೊಂದಿತು. ಆ ವಿನಾಶಕ್ಕೆ ಕಾರಣಗಳು ಯಾವವೆಂದರೆ:— (೧) ಯಾದವರು ಮದ್ಯಪಾನದಂಥ ದುಷ್ಟ ವ್ಯಸನಕ್ಕೆ ಆಧೀನರಾಗಿ, ಮದ್ಯದ ಗುಂಗಿನಲ್ಲಿ ಕ್ಷುದ್ರ ಕಾರಣಗಳ ಸಲುವಾಗಿ ಪರಸ್ಪರ ಕಲಹ ಮಾಡಿ ಪರಸ್ಪರ ಅಹಿತವನ್ನು ಮಾಡಿದರು. (೨) ಯಾದವರು ಶತ್ರುಗಳ ಸಂಹಾರ ಮಾಡಲಿಕ್ಕೆ ಉಪಯೋಗಿಸುವಂಥ ಶಸ್ತ್ರವನ್ನು ತಮ್ಮ ಅಣ್ಣತಮ್ಮಂದಿರ ಕುತ್ತಿಗೆ ಕೊಯ್ಯಲಿಕ್ಕೆ ಉಪಯೋಗಿಸಿ ತಮ್ಮ ವಂಶವನ್ನು ಸಮೂಲ ನಾಶ ಮಾಡಿದರು. **ಯಾವ ಪ್ರಕಾರ ಬಿದರುಗಳು ವಿಶೇಷ ದಟ್ಟವಾಗಿ ಬೆಳೆದಂಥ ಬೆಟ್ಟದಲ್ಲಿ ಅವು ಒಂದಕ್ಕೊಂದು ತಾಕಲಾಡುವದರಿಂದ ಬೆಂಕಿಯು ಉತ್ಪನ್ನವಾಗಿ ಯಾವತ್ತು ಬಿದರುಗಳ ಬೆಟ್ಟವು ಸುಟ್ಟು ಭಸ್ಮವಾಗುವದೋ, ಆ ಪ್ರಕಾರ ಯಾದವರಲ್ಲಿ ಪರಸ್ಪರ ಮತ್ಸರ, ಪರಸ್ಪರ ಅಸೂಯೆ, ಮತ್ತು ಪರಸ್ಪರ ದ್ವೇಷಗಳಿಂದ ಭಯಂಕರ ಕಲಹಾಗ್ನಿಯು ಹುಟ್ಟಿ ಯಾದವ ವಂಶವು ವಿನಾಶ ಹೊಂದಿತು. ಪರಸ್ಪರ ಕಲಹ ಮಾಡುವದರಿಂದ ಎಷ್ಟು ಅನರ್ಥವಾಗುತ್ತದೆಂಬುವದನ್ನು ಇದರಿಂದ ಬೋಧ ತೆಗೆದುಕೊಳ್ಳತಕ್ಕದ್ದು.**

---

## ೨೪. ಅಣ್ಣ ತಂಗಿಯರ ದ್ವೇಷವು.

### ( ದೇವಕಿ ಮತ್ತು ಕಂಸ ಇವರ ಕಥೆಯು. )

ಯಾದವ ವಂಶದಲ್ಲಿ ಶೂರಸೇನನೆಂಬೊಬ್ಬ ರಾಜನು ಆಗಿ ಹೋದನು. ಅವನು ಮಥುರೆಯಲ್ಲಿ ಇದ್ದು ರಾಜ್ಯಕಾರಭಾರವನ್ನು ಮಾಡುತ್ತಿದ್ದ ಕಾರ

ಣ ಮಥುರೆಯು ಯಾವತ್ತು ಯಾದವ ರಾಜರ ರಾಜಧಾನಿಯೆಂದು ಜನರೊಳಗೆ ವಾಡಿಕೆಯಾಗಿತ್ತು. ಈ ಶೂರಸೇನನ ಮಗನಾದ ವಸುದೇವನು ಕಂಸನ ತಂಗಿಯಾದ ದೇವಕಿಯನ್ನು ಅತ್ಯಂತ ಸಮಾರಂಭದಿಂದ ಲಗ್ನಮಾಡಿಕೊಂಡನು. ಲಗ್ನಸಮಾರಂಭವು ಮುಗಿದ ತರುವಾಯ ವಸುದೇವನು ತನ್ನ ಹೆಂಡತಿಯಾದ ದೇವಕಿಯನ್ನು ಕರೆದುಕೊಂಡು ತನ್ನ ಊರಿಗೆ ಹೋಗಲಿಕ್ಕೆ ಹೊರಟನು. ಆಗ ಕಂಸನು ತನ್ನ ತಂಗಿಯನ್ನೂ ತನ್ನ ಬೀಗನನ್ನೂ ಅವರ ಊರಿಗೆ ಮುಟ್ಟಿಸುವದಕ್ಕಾಗಿ ಬಹು ಉತ್ಸಾಹದೊಡನೆ ತನ್ನ ಅನೇಕ ಜನ ಪರಿವಾರವನ್ನು ತನ್ನ ಸಂಗಡ ಕರೆದುಕೊಂಡು, ನೂರಾರು ಸುವರ್ಣ ರಥಗಳನ್ನು ಹೂಡಿಸಿಕೊಂಡು, ತನ್ನ ತಂಗಿಯ ರಥದಲ್ಲಿ ತಾನೇ ಸಾರಥಿಯಾಗಿ ಕುಳಿತು ಅವಳ ರಥವನ್ನು ಹೊಡೆದನು. ಅಣ್ಣತಂಗಿಯರ ಪ್ರೇಮವನ್ನು ನೋಡಿ ಜನರಿಗೆ ಬಹಳ ಕೌತುಕವೆನಿಸಿತು. ಕಂಸನು ಈ ಪ್ರಕಾರ ತನ್ನ ತಂಗಿಯ ರಥದ ಸಾರಥಿಯಾಗಿ ಅದನ್ನು ಹೊಡೆದು ಕೊಂಡು ಸ್ವಲ್ಪ ದೂರ ಹೋಗುವಷ್ಟರಲ್ಲಿ ಅವನಿಗೆ-“ ಮೂರ್ಖನಾದ ಕಂಸನೇ! ಯಾವ ನಿನ್ನ ತಂಗಿಯನ್ನು ಅವಳ ಅತ್ತೆಯ ಮನೆಗೆ ಕಳಿಸುವದಕ್ಕೆ ನೀನು ಬಹಳ ಸಮಾರಂಭದಿಂದ ಹೊರಟಿರುವಿಯೋ ಆಕೆಯ ಎಂಟನೇ ಸಂತತಿಯಿಂದ ನಿನಗೆ ಮೃತ್ಯುವು ಬರುವದು” ಎಂದು ಆಕಾಶವಾಣಿಯಾಯಿತು. ಈ ಶಬ್ದಗಳನ್ನು ಕೇಳುತ್ತಲೇ ಕಂಸನ ಮನಸ್ಸಿನೊಳಗಿನ ಪ್ರೇಮವೆಲ್ಲ ಜರ್ರನೆ ಇಳಿದು ಹೋಗಿ ಅವನು ದ್ವೇಷದಿಂದ ತನ್ನ ಶಸ್ತ್ರವನ್ನು ಜಳುಪಿಸಿ ದೇವಕಿಯನ್ನು ಕೊಲ್ಲುವ ಸಿದ್ಧತೆಯನ್ನು ಮಾಡಿದನು. ಆಗ ವಸುದೇವನು ಕಂಸನಿಗೆ ಈ ಪ್ರಕಾರದ ಅವಿಚಾರ ಕೃತ್ಯವನ್ನು ಮಾಡಬೇಡೆಂದು ಬಹಳ ಪರಿಯಿಂದ ಹೇಳಿಕೊಂಡನು. ಆದರೂ ಕಂಸನು ತನ್ನ ಅಗ್ರಹವನ್ನು ಬಿಡದೆ ಅವಳನ್ನು ಕೊಲ್ಲಲಿಕ್ಕೆ ಅವಳ ಮೈಮೇಲೆ ಏರಿ ಹೋಗಹತ್ತಿದನು. ಆಗ ವಸುದೇವನು ಅವಳಿಗೆ ಆದ ಸಂತತಿಯನ್ನು ನಿನ್ನ ಸ್ವಾಧೀನಕ್ಕೆ ಒಪ್ಪಿಸುತ್ತೇನೆಂದು ಕಂಸನಿಗೆ ವಚನ ಕೊಟ್ಟ ತರುವಾಯ ಕಂಸನು ವಸುದೇವನ ಮಾತಿಗೆ ಒಡಂಬಟ್ಟು ತನ್ನ ತಂಗಿಯನ್ನು ಕೊಲ್ಲುವದನ್ನು ಬಿಟ್ಟುಕೊಟ್ಟನು. ಮೊದಲು ಅತಿ ಪ್ರೇಮದಿಂದ ಇದ್ದಂಥ ಅಣ್ಣತಂಗಿಯರ ದ್ವೇಷವು ಎಷ್ಟು ಭಯಂಕರ ಸ್ಥಿತಿಗೆ ಹೋಯಿತು ನೋಡಿರಿ!

# ೨೫. ಕಂಸನು ಮಾಡಿದ ಬಾಲಹತ್ಯವು.

ಹಿಂದಿನ ಕಥೆಯಲ್ಲಿ ಹೇಳಿದ ಪ್ರಕಾರ ಕಂಸನು ವಸುದೇವನ ಮಾತಿಗೆ ಒಪ್ಪಿಕೊಂಡಾಗ್ಯೂ ಪುನಃ ಕಂಸನು ತನ್ನ ಮನಸ್ಸಿನಲ್ಲಿ-" ಪುತ್ರಲೋಭವು ಬಹಳ ಕಠಿಣವಿರುವದು. ಯಾರು ತಮ್ಮ ಮಗನನ್ನು ಕೊಲ್ಲಲಿಕ್ಕೆ ಎರಡನೆಯವರ ಕೈಯಲ್ಲಿ ತಿಳಿದೂ ತಿಳಿದೂ ಕೊಡುವರು? ಆದುದರಿಂದ ವಸುದೇವನ ಮಾತಿನ ಮೇಲೆ ವಿಶ್ವಾಸವಿಡಬಾರದು. ವಸುದೇವ ಮತ್ತು ದೇವಕಿ ಇವರಿಬ್ಬರನ್ನೂ ನನ್ನ ನೇತೃತ್ವದಲ್ಲಿ ಕಾರಾಗೃಹದೊಳಗಿಟ್ಟರೆ ನೆಟ್ಟಗಾಗುವದು" ಎಂದು ವಿಚಾರ ಮಾಡಿದನು. ಆದರೆ ಇದು ಹೇಗೆ ಸಾಧ್ಯವಾಗಬೇಕು? ಕಂಸನ ತಂದೆಯಾದ ಉಗ್ರಸೇನನು ಅರಸನಿದ್ದುದರಿಂದ ಅವನ ಅಪ್ಪಣೆಯನ್ನು ಪಡೆದು ಕೊಳ್ಳದೆ ಕಂಸನಿಗೆ ಇದನ್ನು ಮಾಡಲಿಕ್ಕೆ ಆಗುವಂತಿದ್ದಿಲ್ಲ. ಆದುದರಿಂದ ಕಂಸನು ತನ್ನ ತಂದೆಯನ್ನು ರಾಜ್ಯಸಿಂಹಾಸನದಿಂದ ತಳ್ಳಿಹಾಕಿ ಅವನನ್ನು ಕಾರಾಗೃಹದೊಳಗಿಟ್ಟು, ತಾನೇ ರಾಜ್ಯಕಾರಭಾರ ಮಾಡಲಿಕ್ಕೆ ಹತ್ತಿ, ತನ್ನ ಮನೋರಥವನ್ನು ಪೂರ್ಣಮಾಡಿಕೊಂಡನು!

ಈ ಪ್ರಕಾರ ವಸುದೇವ ಮತ್ತು ದೇವಕಿ ಈ ಇಬ್ಬರನ್ನೂ ಕಾರಾಗೃಹದಲ್ಲಿಟ್ಟಾಗ್ಗೆ ಅವರಿಗೆ ಮೊದಲನೇ ಮಗನು ಹುಟ್ಟಿದನು. ಆಗ ವಸುದೇವನು ಅವನನ್ನು ತನ್ನ ವಚನದ ಪ್ರಕಾರ ಕಂಸನ ಸ್ವಾಧೀನಕ್ಕೆ ಒಪ್ಪಿಸಿದನು. ಈ ಮೊದಲನೇ ಹುಡುಗನಿಂದ ತನಗೆ ಮೃತ್ಯುವಿನ ಭಯವಿಲ್ಲವೆಂತಲೂ ತಾನು ಅವನನ್ನು ಕೊಲ್ಲಬಾರದೆಂತಲೂ ಮೊದಲಿಗೆ ಕಂಸನ ಮನಸ್ಸಿನಲ್ಲಿ ಸುವಿಚಾರವು ಹುಟ್ಟಿತ್ತು. ಆದರೆ ಕಂಸನು ಬಹಳ ದುಷ್ಟನೂ ಸಂಶಯದ ಸ್ವಭಾವದವನೂ ಇದ್ದುದರಿಂದ ಅವನ ಮನಸ್ಸು ಬೇಗನೆ ತಿರುಗಿತು. ಇದರಿಂದ ಅವನು ಆ ಹುಡುಗನನ್ನು ಕೊಂದು ಹಾಕಿದನು. ದೇವಕಿಯು ಏಳನೇ ಗರ್ಭವು ಹೊಟ್ಟೆಯಲ್ಲಿಯೇ ಕರಗಿ ಹೋಯಿತು. ವಸುದೇವನಿಗೆ ಇನ್ನೂ ಅನೇಕ ಮಂದಿ ಹೆಂಡಂದಿರು ಇದ್ದರು. ಅವರಲ್ಲಿ ರೋಹಿಣಿಯು ಇದೇ ವೇಳೆಯಲ್ಲಿ ಬಸುರಾಗಿದ್ದಳು. ಆಕೆಯ ಜೀವಕ್ಕೆ ಏನಾದರೂ ಅಪಾಯವಾದೀತೆಂಬ ಹೆದರಿಕೆ

ಯಿಂದ ವಸುದೇವನು ಅವಳನ್ನು ಗೋಕುಲದಲ್ಲಿಯ ಯಾವತ್ತು ಗವಳಿಗರ ನಾಯಕನೂ ತನ್ನ ಮಿತ್ರನೂ ಆದ ನಂದನ ಮನೆಯಲ್ಲಿ ತಂದು ಇಟ್ಟನು. ಅಲ್ಲಿ ಅವಳಿಗೆ ಹುಟ್ಟಿದ ಮಗನಿಗೆ ಬಲರಾಮನೆಂಬ ಹೆಸರು ಇಟ್ಟರು.

---

## ೨೬. ಕೂಸುಗಳ ಅದಲುಬದಲು.

### (ವಸುದೇವನು ಮಾಡಿದ ಯುಕ್ತಿಯು.)

ದೇವಕಿಯ ಏಳನೇ ಗರ್ಭವು ಹೊಟ್ಟೆಯಲ್ಲಿ ಕರಗಿದ ಕಾರಣ ಅದರ ಹೆದರಿಕೆಯು ಕಂಸನಿಗೆ ಏನೂ ಉಳಿಯಲಿಲ್ಲ. ಆದರೆ ಬೇಗನೆ ದೇವಕಿಗೆ ಎಂಟನೇ ಗರ್ಭವು ನಿಂತಿತೆಂಬ ವರ್ತಮಾನವು ಕಂಸನಿಗೆ ಗೊತ್ತಾಯಿತು. ಆಗ ಕಂಸನು ತನ್ನ ಶತ್ರುವು ಇನ್ನು ಹುಟ್ಟುವನೆಂದು ಎಂಟನೇ ಗರ್ಭದಿಂದ ಹುಟ್ಟುವ ಕೂಸಿನ ಬಗ್ಗೆ ಬಹಳ ಕಾವಲವನ್ನಿಟ್ಟನು. ಶ್ರಾವಣ ವದ್ಯ ಅಷ್ಟಮಿಯ ರಾತ್ರಿ ೧೨ ಗಂಟೆಯ ಸುಮಾರಕ್ಕೆ ವಸುದೇವ ಮತ್ತು ದೇವಕಿ ಇವರಿಬ್ಬರೂ ಕಾರಾಗೃಹದಲ್ಲಿದ್ದಾಗ್ಗೆ ಶ್ರೀ ಕೃಷ್ಣನ ಜನ್ಮವಾಯಿತು. ಇದು ಮಧ್ಯರಾತ್ರಿಯೊಳಗೆ ಆದಕಾರಣ ಈ ವರ್ತಮಾನವು ಕಂಸನಿಗೆ ಆಗಿಂದಾಗಲೇ ಹೋಗಿ ಮುಟ್ಟಲಿಲ್ಲ. ಆದುದರಿಂದ ಈಗ ಮಧ್ಯ ರಾತ್ರಿಯಾಗಿದ್ದು ಕಗ್ಗತ್ತಲವಾಗಿರುವದರಿಂದ ಏನಾದರೂ ಯುಕ್ತಿ ಮಾಡಿ ಕಾರಾಗೃಹದೊಳಗಿಂದ ಹೊರಬಿದ್ದು ಆ ಹುಡುಗನನ್ನು ಗೋಕುಲದಲ್ಲಿ ನಂದನ ಮನೆಯಲ್ಲಿಟ್ಟು ಅದೇ ಗಳಗಿಗೆ ತಾನು ತಿರುಗಿ ಬಂದರೆ ಯಾರೂ ತನ್ನನ್ನು ಇಲ್ಲಿ ನೋಡಲಿಕ್ಕಿಲ್ಲವೆಂತಲೂ ತಾನು ಹೀಗೆ ಮಾಡುವದರಿಂದ ಹುಡುಗನ ಜೀವವು ಬದಕುವದೆಂತಲೂ ವಿಚಾರ ಮಾಡಿದನು. ಈಶಕೃಪೆಯಿಂದ ಎಲ್ಲ ಸಂಗತಿಗಳು ಅನುಕೂಲವಾದವು. ಕಾರಾಗೃಹದ ಬಾಗಿಲಕಾಯುವವರು ನಿದ್ರೆಹತ್ತಿ ಮಲಗಿ ಕೊಂಡಿದ್ದರು. ಆಗ ವಸುದೇವನು ಆ ಕೂಸನ್ನು ಲಗಬಗೆಯಿಂದ ಬಾಣಂತಿತನದ ಅರಿವೆಯ ಚಿಂದಿಗಳಲ್ಲಿ ಚೆನ್ನಾಗಿ ಸುತ್ತಿಕೊಂಡು ಯಮುನಾ ನದಿಯನ್ನು ದಾಟಿ ಹೋಗಿ ಗೋಕುಲದೊಳಗೆ ನಂದನ ಮನೆಗೆ ಮುಟ್ಟಿದನು. ಅಲ್ಲಿ ನಂದನ ಹೆಂಡತಿ

ಯಾದ ಯಶೋದೆಯು ಒಂದು ಹೆಣ್ಣು ಕೂಸನ್ನು ಹೆತ್ತಿದ್ದಳು. ಆ ಹುಡು ಗಿಯು ಯೋಗಶಕ್ತಿಯ ಅವತಾರವಿದ್ದ ಕಾರಣ ಆಕೆಗೆ ಮರಣವಿಲ್ಲೆಂಬುದು ವಸುದೇವನಿಗೆ ಗೊತ್ತಿತ್ತು. ಆದುದರಿಂದ ಅವನು ಶ್ರೀ ಕೃಷ್ಣನನ್ನು ಯಶೋದೆಯ ಮುಂದೆ ಇಟ್ಟು, ಆಕೆಯ ಮುಂದೆ ಮಲಗಿಕೊಂಡಿದ್ದ ಆಕೆಯ ಹುಡುಗಿಯನ್ನು ಎತ್ತಿಕೊಂಡು, ಬೆಳಗಾಗುವದರೊಳಗಾಗಿ ತನ್ನ ಕಾರಾಗೃಹಕ್ಕೆ ಬಂದು ಮುಟ್ಟಿ, ಕಾಲು ಸಪ್ಪಳ ಸಹ ಮಾಡದೆ, ಮುಂಚಿನಂತೆ ಅಲ್ಲಿ ಕುಳಿತುಕೊಂಡು ಬಿಟ್ಟನು. ಯಶೋದೆಗೆ ಪ್ರಸೂತಿ ವೇದನಗಳಿಂದ ಮೂರ್ಛೆಯು ಬಂದದ್ದರಿಂದ ಅವಳಿಗೆ ತಾನು ಹಡೆದ ಕೂಸು ಹೆಣ್ಣೋ ಗಂಡೋ ಎಂಬದು ಸಹ ತಿಳಿದಿದ್ದಿಲ್ಲ. ಆಕೆಯು ಮುಂಜಾನೆ ಎಚ್ಚರಾಗಿ ಶ್ರೀ ಕೃಷ್ಣನನ್ನು ನೋಡಿ ತನಗೆ ಗಂಡು ಕೂಸು ಹುಟ್ಟಿರುವದೆಂದು ಬಹಳ ಆಸಂದಬಟ್ಟಳು.

ದೇವಕಿಗೆ ಹೆಣ್ಣು ಕೂಸು ಹುಟ್ಟಿತೆಂಬ ವರ್ತಮಾನವು ಕಂಸನಿಗೆ ಪ್ರಾತಃ ಕಾಲಕ್ಕೆ ಗೊತ್ತಾದ ಕೂಡಲೆ ಅವನು ಅವಸರದಿಂದ ಅಲ್ಲಿಗೆ ಬಂದು ಆ ಕೂಸನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಅದರ ಜೀವ ತೆಗೆದುಕೊಳ್ಳಲಿಕ್ಕೆ ಹತ್ತಿದನು. ಇಷ್ಟರಲ್ಲಿ ಆ ಕೂಸು ಅವನ ಕೈಯೊಳಗಿಂದ ಬಿಡಿಸಿಕೊಂಡು ಆಕಾಶಕ್ಕೆ ಹಾರಿ ಹೋಗಿ ಹಾ ಹಾ ಅನ್ನುವಷ್ಟರಲ್ಲಿ ಮಾಟಾಮಾಯವಾಯಿತು. ಆ ಕೂಸು ಹೋಗ ಹೋಗುವಾಗ್ಗೆ ಕಂಸನಿಗೆ —" ಎಲೋ ಮುರ್ಖಾ! ನನ್ನನ್ನು ಕೊಲ್ಲುವದರಿಂದ ನಿನಗೇನು ಲಾಭವಾಗುತ್ತಿತ್ತು? ನಿನ್ನ ವೈರಿಯು ಜನ್ಮಕ್ಕೆ ಬಂದಿದ್ದು ಸುರಕ್ಷಿತವಿರುತ್ತಾನೆ! ಸುಮ್ಮನೆ ಎರಡನೆಯವರ ಮಕ್ಕಳನ್ನು ಕೊಲ್ಲುವ ಗೋಜಿಗೆ ಹೋಗಬೇಡ" ಎಂದು ನುಡಿಯಿತು. ಈ ಶಬ್ದಗಳನ್ನು ಕೇಳಿ ಕಂಸನಿಗೆ ತಾನು ಇಷ್ಟುದಿವಸ ತನ್ನ ತಂಗಿಗೆ ವ್ಯರ್ಥವಾಗಿ ಛಲಮಾಡಿದೆನೆಂದು ಪಶ್ಚಾತ್ತಾಪವಾಗಿ ಆಕೆಗೆ ಮಾಡಿದ ಛಲದಿಂದ ಏನೂ ಉಪಯೋಗವಾಗದೆ ತನ್ನ ವೈರಿಯು ತನ್ನ ಕೈಯೊಳಗಿಂದ ಪಾರಾದನೆಂದು ಬಹಳ ಕೆಡಕೆನಿಸಿತು. ಆದುದರಿಂದ ಏನು ಮಾಡಿದರೆ ತನ್ನ ವೈರಿಯ ಶೋಧವಾದೀತೆಂಬ ಬಗ್ಗೆ ಕಂಸನು ಬಹಳ ವಿಚಾರದಲ್ಲಿ ತೊಡಗಿರಲಾಗಿ ಅವನ ಮಂತ್ರಿಗಳು ಅವನಿಗೆ —" ನಿನ್ನ ರಾಜ್ಯದಲ್ಲಿಯ ಎಲ್ಲ ಮೊಲೆಗೂಸುಗಳನ್ನು ಕೊಲ್ಲಿಸಿದರೆ ನೀನು ಸುರಕ್ಷಿತನಾಗುವಿ"

ಎಂದು ಹೇಳಿದರು. ಆಗ ಅವನು ತನ್ನ ರಾಜ್ಯದಲ್ಲಿ ಆ ಪ್ರಕಾರ ಮಾಡ ಲಿಕ್ಕೆ ಅಪ್ಪಣೆಯನ್ನು ಕೊಟ್ಟನು.

---

## ೨೭. ಕೃಷ್ಣನ ಬಾಲಲೀಲೆಯು.

ಕಂಸನು ತನ್ನ ರಾಜ್ಯದಲ್ಲಿಯ ಎಲ್ಲ ಮೊಲೆಗೂಸುಗಳನ್ನು ಕೊಲ್ಲುವ ಕೆಲಸಕ್ಕಾಗಿ **ಪೂತನಾ** ರಾಕ್ಷಸಿಯನ್ನು ಯೋಜಿಸಿದನು. ಆ ರಾಕ್ಷಸಿಯು ಎಲ್ಲ ಪುರಗಳಲ್ಲಿಯೂ, ಗ್ರಾಮಗಳಲ್ಲಿಯೂ, ಗವಳಿಗರ ಮನೆಗಳಲ್ಲಿಯೂ ಹೊಕ್ಕು ಅಲ್ಲಿಯ ಹುಡುಗರನ್ನು ಕೊಲ್ಲುತ್ತ ಗೋಕುಲದೊಳಗೆ ಹೋದಳು. ಆ ಸಮಯಕ್ಕೆ ನಂದನು ಯಾವದೋ ಕೆಲಸಕ್ಕಾಗಿ ಹೊರಗೆ ಹೊರಟು ಹೋಗಿದ್ದನು. ಅಲ್ಲಿ **ಪೂತನಾ** ರಾಕ್ಷಸಿಯು ಒಬ್ಬ ಸುಂದರ ಸ್ತ್ರೀಯ ರೂಪವನ್ನು ಧಾರಣಮಾಡಿ, ಯಶೋದೆಯ ಕಡೆಗೆ ಹೋಗಿ, ಆಕೆಯ ಸಂಗಡ ಸವಿಸವಿ ಮಾತುಗಳನ್ನಾಡುತ್ತ, ಆಕೆಯು ಎತ್ತಿಕೊಂಡಿದ್ದ ಶ್ರೀ ಕೃಷ್ಣನನ್ನು ತಾನು ಎತ್ತಿಕೊಂಡು ಮುದ್ದಾಡಿ, ಅವನನ್ನು ತೊಡೆಯ ಮೇಲೆ ಮಲಗಿಸಿಕೊಂಡು, ಅವನಿಗೆ ತನ್ನ ಮೊಲೆಯುಣ್ಣಿಸಲಿಕ್ಕೆ ಹತ್ತಿದಳು. ಅವಳು ತನ್ನ ಮೊಲೆಗೆ ಭಯಂಕರವಾದ ವಿಷವನ್ನು ಲೇಪಿಸಿಕೊಂಡು ಬಂದಿದ್ದಳು. ಕೃಷ್ಣನು ಪ್ರತ್ಯಕ್ಷ ವಿಷ್ಣುವಿನ ಅವತಾರವಿದ್ದ ಕಾರಣ ಅವನಿಗೆ **ಪೂತನಾ** ರಾಕ್ಷಸಿಯ ಕಪಟವು ಮೋದಲೇ ತಿಳಿದಿತ್ತು. ಅವನಿಗೆ ವಿಷದ ಬಾಧೆಯು ಹೇಗೆ ಆಗಬೇಕು? ಅವನು ಆ **ಪೂತನಾ** ರಾಕ್ಷಸಿಯ ಮೊಲೆಯ ವಿಷವನ್ನಷ್ಟೇ ಹೀರಿಕೊಳ್ಳದೆ ಅವಳ ಮೈಯೊಳಗಿನ ಯಾವತ್ತು ರಕ್ತವನ್ನು ಸಹ ಹೀರಿಕೊಂಡ ಕಾರಣ ಅವಳು ನೆಲದ ಮೇಲೆ ಸತ್ತುಬಿದ್ದಳು!

ಒಂದು ಸಾರೆ ಯಶೋದೆಯು ಕೃಷ್ಣನಿಗೆ ಎರೆದು, ಅವನ ಮೈಯಲ್ಲಿ ಅರಿವೆಯನ್ನು ತೊಡಿಸಿ, ಅವನನ್ನು ತೊಟ್ಟಿಲದಲ್ಲಿ ಮಲಗಿಸಿ, ತಾನು ಕೆಲಸಕ್ಕಾಗಿ ಹೊರಗೆ ಹೊರಟು ಹೋದಳು. ಇತ್ತ ಶ್ರೀ ಕೃಷ್ಣನು ಎಚ್ಚತ್ತು ತೊಟ್ಟಿಲದೊಳಗೆ ಆಡುತ್ತ, ತನ್ನ ಕಾಲು ಮೇಲೆ ಮಾಡಿ, ತೊಟ್ಟಿಲದ ಮೇಲ್ಭಾಗಕ್ಕೆ ಕಟ್ಟಿ

ದ ನೆಲವಿನೊಳಗೆ ಇಟ್ಟಂಥ ಹಾಲು ಮೊಸರಿನ ಗಡಿಗೆಗಳನ್ನು ಉರುಳಿಸಿಬಿಟ್ಟನು!

ಒಂದು ದಿವಸ ಯಶೋದೆಯು ಕೃಷ್ಣನನ್ನು ತೊಡೆಯ ಮೇಲೆ ತೆಗೆದುಕೊಂಡು ಅವನನ್ನು ನಗಿಸುತ್ತಲೂ ಆಡಿಸುತ್ತಲೂ ಕುಳಿತಿದ್ದಳು. ಆಗ ಒಮ್ಮಿಂದೊಮ್ಮೆ ಅವಳ ಮೈಮೇಲೆ ಒಂದು ದೊಡ್ಡ ಗುಡ್ಡವು ಬಂದು ಕುಳಿತಿರುವಂತೆ ಕೃಷ್ಣನು ಆಕೆಗೆ ಜಡವಾದನು!

ಕಂಸನು ಕೃಷ್ಣನ ಸಂಬಂಧವಾದ ಅನೇಕ ಚಮತ್ಕಾರಿಕ ವರ್ತಮಾನಗಳನ್ನು ಕೇಳಿ ಅವನನ್ನು ಕೊಲ್ಲಲಿಕ್ಕೆ ತೃಣಾವರ್ತನೆಂಬ ರಾಕ್ಷಸನನ ಕಳಿಸಿದನು. ಆ ರಾಕ್ಷಸನು ಬಿರುಗಾಳಿಯ ರೂಪವನ್ನು ಧರಿಸಿಕೊಂಡು ಕೃಷ್ಣನ ಕಡೆಗೆ ಹೋಗಲು ಕೃಷ್ಣನು ಅವನನ್ನು ಹಿಚಿಕಿ ಕೊಂದು ಬಿಟ್ಟನು.

ಕೃಷ್ಣನು ಒಂದು ಸಾರೆ ಆಕಳಿಸುವಾಗ್ಗೆ ತನ್ನ ಬಾಯಿಯನ್ನು ತೆರೆಯಲಾಗಿ ಯಶೋದೆಗೆ ಅವನ ಬಾಯಿಯಲ್ಲಿ ಪೃಥ್ವಿ, ಆಕಾಶ, ಸೂರ್ಯ, ಚಂದ್ರ ಮುಂತಾದ ಯಾವತ್ತು ಬ್ರಹ್ಮಾಂಡವು ಕಾಣಿಸಿತು!

ಕೃಷ್ಣನು ನೆರೆಹೊರೆಯಲ್ಲಿರುವ ಗವಳಗಿತ್ತಿಯರ ಮನೆಗಳಲ್ಲಿ ಹೊಕ್ಕು ಅವರು ತಮ್ಮ ಎಮ್ಮೆ ಆಕಳುಗಳ ಹಾಲು ಹಿಂಡಿಕೊಳ್ಳುವ ಮುಂಚಿತವಾಗಿಯೇ ಅವುಗಳ ಕರುಗಳನ್ನು ಉಣ್ಣಿಸುತ್ತಿದ್ದನು. ಅವರ ಮನೆಗಳಿಗೆ ಬೇಕಾದಾಗ್ಗೆ ಹೋಗಿ ಅವರು ಇಟ್ಟ ಹಾಲು ಮೊಸರು ಬೆಣ್ಣೆಗಳನ್ನು ತಾನು ತಿಂದು ತನ್ನ ಗೆಳೆಯರಿಗೆ ಸಹ ಕೊಡುತ್ತಿದ್ದನು. ಅವರ ಮನೆಗಳಲ್ಲಿ ಮಲಗಿಕೊಂಡಿದ್ದ ಸಣ್ಣ ಸಣ್ಣ ಕೂಸುಗಳಿಗೆ ಚಿವಟಿ ಅವರನ್ನು ಎಬ್ಬಿಸುತ್ತಿದ್ದನು. ಕೃಷ್ಣನು ಈ ಪ್ರಕಾರ ಜನರನ್ನು ಬಹಳ ಪೀಡಿಸುವದನ್ನು ಕೇಳಿ ಯಶೋದೆಯು ಒಂದು ಸಾರೆ ಹಗ್ಗದಿಂದ ಅವನ ಕೈಕಾಲು ಕಟ್ಟಿಹಾಕಿ ತಾನು ಹೊರಗೆ ಕೆಲಸಕ್ಕೆ ಹೋಗಿದ್ದಳು. ಇತ್ತಲಾ ಕೃಷ್ಣನು ಹೆಡಮುರಿಗೆ ಸಹಿತವಾಗಿ ಮೆಲ್ಲನೆ ಸರಿದುಕೊಳ್ಳುತ್ತ ಹೊರಟು ಹೋಗಿ, ತನ್ನ ಹೆಡಮುರಿಗಿಯ ಹಗ್ಗವನ್ನು ಎರಡು ಗಿಡಗಳಿಗೆ ತೊಡಗಿಸಿ, ಆ ಗಿಡಗಳನ್ನು ಕೆಳಗೆ ಕೆಡವಿಬಿಟ್ಟನು!

ರೋಹಿಣಿಯ ಮಗನಾದ ಬಲರಾಮನು ಶ್ರೀ ಕೃಷ್ಣನಿಗಿಂತ ಸ್ವಲ್ಪ ದೊಡ್ಡವನಿದ್ದನು. ಅವರಿಬ್ಬರೂ ಒಂದೇ ಕಡೆಗೆ ಕೂಡಿ ಇದ್ದು ಕೂಡಿ ಆಡುತ್ತಿದ್ದರು. ಕೆಲವು ದಿವಸಗಳ ತರುವಾಯ ನಂದ ಮೊದಲಾದ ಯಾವತ್ತು ಗವಳಿ

ಗರು ಗೋಕುಲವನ್ನು ಬಿಟ್ಟು ವೃಂದಾವನಕ್ಕೆ ಹೋಗಿ ಅಲ್ಲಿ ಇರಲಿಕ್ಕೆ ಹತ್ತಿದರು. ಅಲ್ಲಿ ಅವರೆಲ್ಲರಿಗೂ ಆಡಲಿಕ್ಕೆ ಯಮುನಾ ನದಿಯ ಉಸುಕಿನ ಬೈಲು ಪ್ರದೇಶ ಮತ್ತು ಗೋವರ್ಧನ ಪರ್ವತ ಇವೆರಡು ಉತ್ತಮ ಸ್ಥಳಗಳು ಸಿಕ್ಕದ್ದರಿಂದ ಅವರಿಗೂ ಅವರ ಗೆಳೆಯರಿಗೂ ಬಹಳ ಆನಂದವಾಯಿತು. ಅವರು ದನಕಾಯಲಿಕ್ಕೆ ಹೋಗುವಷ್ಟು ದೊಡ್ಡವರಾದ ಬಳಿಕ ಕೊಳಲು, ಕೊಂಬು, ಚಂಡು, ಚಿಣಿಫಣಿಗಳನ್ನು ತೆಗೆದುಕೊಂಡು ಅಡವಿಯಲ್ಲಿ ಆಡಲಿಕ್ಕೆ ಹೋಗಹತ್ತಿದರು. ಒಂದು ಸಾರೆ ಅವರು ಆಡವಿಯೊಳಗೆ ಹೋದಾಗ ಒಬ್ಬ ರಾಕ್ಷಸನು ಒಂದು ಆಕಳ ಕರದ ರೂಪವನ್ನು ಧಾರಣಮಾಡಿ ಅವರ ದನಗಳೊಳಗೆ ಸೇರಿಕೊಂಡನು. ಆಗ ಕೃಷ್ಣನು ಬಲರಾಮನಿಗೆ ತನ್ನ ಕಣ್ಣಿನಿಂದ ಸಂಜ್ಞೆಮಾಡಲು ಬಲರಾಮನು ಆ ರಾಕ್ಷಸನ ಕಾಲು ಹಿಡಿದು ಗಿಮಿಗಿಮಿ ತಿರುಗಿಸಿ ಅವನನ್ನು ಒಂದು ಬೆಳವಲಕಾಯಿಯ ಗಿಡದ ಮೇಲೆ ಒಕ್ಕೊಟ್ಟು ಬಿಟ್ಟನು!

ಒಂದು ಸಾರೆ ಎಲ್ಲರು ದನಗಳಿಗೆ ನೀರು ಕುಡಿಸುವದಕ್ಕಾಗಿ ಯಮುನಾ ನದಿಗೆ ಹೋಗಿದ್ದರು. ಅಲ್ಲಿ ಒಬ್ಬ ರಾಕ್ಷಸನು ಒಂದು ನೀರುಗೋಳಿಯ ವೇಷವನ್ನು ಹಾಕಿಕೊಂಡು ಕುಳಿತಿದ್ದನು. ಆ ರಾಕ್ಷಸನು ಮೊದಲಿಗೆ ಕೃಷ್ಣನ ಕೂಡ ಚೇಷ್ಟೆ ಮಾಡಲಿಕ್ಕೆ ಹತ್ತಿದನು. ಆಗ ಕೃಷ್ಣನು ಆ ನೀರುಗೋಳಿಯ ಚುಂಚುಪುಟವನ್ನು ಹಿಡಿದು, ಅದನ್ನು ನೆಟ್ಟಗೆ ನಿಲ್ಲಿಸಿ, ಅದನ್ನು ಇಬ್ಭಾಗವಾಗಿ ಸೀಳಿಬಿಟ್ಟನು. ಬಲರಾಮ, ಕೃಷ್ಣ ಮತ್ತು ಇತರ ಬಾಲಗೋಪಾಲರು ಅಡವಿಯಲ್ಲಿ ದನಗಳನ್ನು ಮೇಯಿಸಲಿಕ್ಕೆ ಹೋಗುವಾಗ್ಗೆ ತಮ್ಮ ಸಂಗಡ ಬುತ್ತಿಯನ್ನು ಕಟ್ಟಿಕೊಂಡು ಹೋಗಿ, ಮಧ್ಯಾಹ್ನದಲ್ಲಿ ಯಮುನಾ ನದಿಯ ತೀರದಲ್ಲಿ ಒಬ್ಬರಿಗೊಬ್ಬರು ನಗುತ್ತ ಕೆಲೆಯುತ್ತ ವಿನೋದದಿಂದ ಆಟಗಳನ್ನು ಆಡಿ, ಒಬ್ಬರಿಗೊಬ್ಬರು ಸಲಿಗೆ ಮಾಡುತ್ತ, ತಾವು ತಿನ್ನಲಿಕ್ಕೆ ಮನೆಯಿಂದ ಕಟ್ಟಿಕೊಂಡು ಒಯ್ದದ್ದನ್ನು ಅದಲು ಬದಲು ಮಾಡುತ್ತ, ಒಳ್ಳೇ ಆನಂದದಿಂದ ಎಲ್ಲರು ಕುಳಿತು ಊಟ ಮಾಡುತ್ತಿದ್ದರು. ಒಮ್ಮೊಮ್ಮೆ ಕೊಳಲು, ಪುಂಗಿ, ಕೊಂಬು ಮುಂತಾದವುಗಳನ್ನು ಊದುತ್ತ ಅವುಗಳ ಸ್ವರದ ಗತ್ತಿನಿಂದ


ಕುಣಿಯುತ್ತಿದ್ದರು. ಒಮ್ಮೊಮ್ಮೆ ಅತ್ತಿಂದ ಇತ್ತ, ಇತ್ತಿಂದ ಅತ್ತ, ಓಡಾಡುತ್ತಿದ್ದರು. ಒಮ್ಮೊಮ್ಮೆ ಗಿಡದ ಮೇಲೆ ಕುಳಿತು ಮಂಗಗಳ ಬಾಲವು ಜೋತು ಬಿದ್ದದ್ದನ್ನು ಹಿಡಿದು ಜಗ್ಗಿ, ಅವುಗಳನ್ನು ಅಣಗಿಸಿ, ಅವುಗಳ ಮುಂದೆ ನಿಂತು ಅವುಗಳಂತೆಯೇ ಧ್ವನಿ ತೆಗೆದು ಒದರುತ್ತಿದ್ದರು. ಒಮ್ಮೊಮ್ಮೆ ಪಶುಪಕ್ಷಿಗಳಂತೆ ಕೂಗಾಡುತ್ತಿದ್ದರು. ಈ ಪ್ರಕಾರ ಈ ಬಾಲಗೋಪಾಲರು ಆಡುತ್ತಿದ್ದಾಗ್ಗೆ ಅಘ ಎಂಬೊಬ ರಾಕ್ಷಸನು ಒಂದು ಹೆಬ್ಬಾವಿನಂತೆ ಬಾಯಿ ತೆಗೆದುಕೊಂಡು ನೆಲದ ಮೇಲೆ ಬಿದ್ದಿದ್ದನು. ಅವನ ಬಾಯಿಯೊಳಗೆ ಅವರೆಲ್ಲರು ತಿಳಿಯದೆ ಪ್ರವೇಶಮಾಡಿದರು. ಅವರ ಹಿಂದಿನಿಂದ ಕೃಷ್ಣನಾದರೂ ಪ್ರವೇಶ ಮಾಡಿದನು. ಆಗ ರಾಕ್ಷಸನು ತನ್ನ ಬಾಯಿಯನ್ನು ತೆರೆಯುತ್ತಿರುವಷ್ಟರಲ್ಲಿ ಕೃಷ್ಣನು ಒತ್ತರದಿಂದ ತನ್ನ ಮೈ ಹಿಗ್ಗಿಸಿದ್ದರಿಂದ ಆ ರಾಕ್ಷಸನಿಗೆ ಬಾಯಿ ತೆರೆಯಲಿಕ್ಕೆ ಆಗಲಿಲ್ಲ. ಇದರಿಂದ ಆ ರಾಕ್ಷಸನು ಶ್ವಾಸಕಟ್ಟಿ ಸತ್ತುಹೋದನು. ಆಗ ಗೋಪಾಲರೆಲ್ಲರು ಸುರಕ್ಷಿತವಾಗಿ ಹೊರಗೆ ಬಂದರು.

ಈ ರೀತಿಯಿಂದ ಬಲರಾಮನೂ ಕೃಷ್ಣನೂ ಅನೇಕ ಸಾರೆ ರಾಕ್ಷಸರನ್ನು ಕೊಂದು, ತಮ್ಮ ಸಂಗಡಿಗರನ್ನು ರಕ್ಷಣ ಮಾಡಿ, ತಮ್ಮ ಪರಾಕ್ರಮದ ಬಗ್ಗೆ ಎಲ್ಲರಿಂದ ಧನ್ಯವಾದವನ್ನು ದೊರಸಿಕಿದರು.

---

## ೨೮. ಕಾಲಿಯಾಮರ್ದನ.

ಒಂದು ದಿವಸ ಕೃಷ್ಣನು ಆಕಳುಗಳನ್ನು ವೃಂದಾವನದಲ್ಲಿ ಮೇಯಿಸುತ್ತಿದ್ದಾಗ್ಗೆ ಎರಡನೇ ಗೋಪಾಲಕರಿಗೆ ಬಹಳ ನೀರಡಿಕೆಯಾದ್ದರಿಂದ ಅವರು ಕೃಷ್ಣನ ದಾರಿಯನ್ನು ನೋಡದೆ ತಾವೇ ಯಮುನಾ ನದಿಗೆ ನೀರು ಕುಡಿಯಲಿಕ್ಕೆ ಹೋದರು. ಅಲ್ಲಿ ಒಂದು ದೊಡ್ಡ ಮಡುವಿನಲ್ಲಿ ಕಾಲಿಯಾ ಎಂಬ ಒಂದು ಭಯಂಕರವಾದ ವಿಷವುಳ್ಳ ಹಾವು ಇರುತ್ತಿತ್ತು. ಆದುದರಿಂದ ಆ ಹಾವಿನ ವಿಷದ ಮೂಲಕ ಆ ಮಡುವಿನ ನೀರೆಲ್ಲ ವಿಷವಾಗಿದ್ದವು. ಆದುದರಿಂದ ಗೋಪಾಲಕರು ಆ ನೀರನ್ನು ಕುಡಿಯಲಾಗಿ ಸತ್ತುಬಿದ್ದರು. ಇಷ್ಟರಲ್ಲಿ ಕೃಷ್ಣನು ಅಲ್ಲಿಗೆ ಬಂದು ಅವರೆಲ್ಲರ ವಿಷವನ್ನು ಇಳಿಸಿ, ಅವರನ್ನು ಸಜೀವ ಮಾ



ಕಾಲಿಯಾಮರ್ದನ. C. P. D.

ಡಿದನು. ಆಮೇಲೆ ಕೃಷ್ಣನು ಆ ಮಡುವಿನೊಳಗಿನ ಹಾವನ್ನು ಅಲ್ಲಿಂದ ಅಟ್ಟ ಬೇಕೆಂದು ನಿಶ್ಚಯಮಾಡಿ ಅಲ್ಲಿಯೇ ಸಮೀಪದಲ್ಲಿದ್ದ ಕದಂಬ ವೃಕ್ಷದ ಮೇಲೆ ಹತ್ತಿ, ಆ ವೃಕ್ಷದ ಮೇಲಿಂದ ಆ ಮಡುವಿನಲ್ಲಿ ಹಾರಿಕೊಂಡನು. ಆ ಕೂಡಲೆ ನೀರು ಕಸುವಿನಿಂದ ಮೇಲಕ್ಕೆ ಪುಟಿಯಲು ನೀರೊಳಗೆ ಬಹಳ ಕಲಬಿಲಿ ಸಪ್ಪ ಳವು ಆಯಿತು. ಆ ಸಪ್ಪಳವನ್ನು ಕೇಳಿ ಆ ಮಡುವಿನಲ್ಲಿದ್ದ ಕಾಲಿಯಾ ಹಾವು ಸಿಟ್ಟಿನಿಂದ ಹೊರಗೆ ಬಂದು, ಕೃಷ್ಣನನ್ನು ತಿರಿತಿರಿವಿ ಕಚ್ಚಿ, ಅವನ ಮೈಗೆ ಮು ರಗಾಳಿ ಹಾಕಿತು. ಅದನ್ನು ನೋಡಿ ಕೃಷ್ಣನ ಸಂಗಡ ಇದ್ದ ಅವನ ಗೆಳೆಯರೆ ಲ್ಲರು ಹೆದರಿ ಹೌ ಹಾರಿದರು. ಆಕಳುಗಳು ಅಂಬಾ ಎಂದು ಒದರಾಡಹತ್ತಿದವು. ಕೃಷ್ಣನಿಗೆ ಮನೆಗೆ ಬರಲಿಕ್ಕೆ ತಡವಾಯಿತೆಂದು ನೋಡಿ ನಂದನೂ ಯಶೋ ದೆಯೂ ಬಹಳ ಚಿಂತೆಮಾಡಲಿಕ್ಕೆ ಹತ್ತಿದರು. ಕೃಷ್ಣನಾಗಲೀ ಅವನ ಆಟದ ಗೆಳೆಯರಾಗಲೀ ಮನೆಗೆ ಬರಲಿಲ್ಲವೆಂದು ಯಾವತ್ತು ಗೋಪಾಲಕರು ಅವನ ಶೋಧ ಮಾಡುತ್ತ ಆ ಮಡುವಿನ ಹತ್ತರ ಬಂದು, ಕೃಷ್ಣನು ಸಂಕಟದಲ್ಲಿ ಬಿದ್ದುದನ್ನು ನೋಡಿ ಬಹಳ ಹೆದರಿದರು. ಇತ್ತಲಾ ಕೃಷ್ಣನು ಮೆಲ್ಲ ಮೆ ಲ್ಲನೆ ತನ್ನ ಮೈಯನ್ನು ಉಬ್ಬಿಸಲಿಕ್ಕೆ ಪ್ರಾರಂಭಮಾಡಿದನು. ಅವನು ತನ್ನ ಮೈಯನ್ನು ಹೆಚ್ಚೆಚ್ಚು ಉಬ್ಬಿಸಿದ ಹಾಗೆ ಆ ಹಾವಿಗೆ ಹೆಚ್ಚು ಕಸವಿಸಿಯಾಗ ಲಿಕ್ಕೆ ಹತ್ತಿತು. ಆ ಮೇಲೆ ಆ ಹಾವು ತಾನು ಕೃಷ್ಣನಿಗೆ ಹಾಕಿದ್ದ ಮುರಗಾ ಳಿಯನ್ನು ತೆಗೆದುಬಿಟ್ಟಿತು. ಆದರೂ ಆ ಹಾವು ಕೃಷ್ಣನನ್ನು ಪುನಃ ಕಚ್ಚುವ ಸಂಧಿಯನ್ನು ನೋಡುತ್ತಿತ್ತು. ಇತ್ತ ಕೃಷ್ಣನು ಅದರ ಹೆಡೆಯ ಮೇಲೆ ತಾನು ಜಿಗಿದು ಕಾಲಿಡುವ ಸಂಧಿಯನ್ನು ಸಾಧಿಸುವದಕ್ಕಾಗಿ ಆ ಹಾವಿನ ಸುತ್ತಲು ಸುಳಿದಾಡಿದನು. ಈ ಪ್ರಕಾರ ಕೃಷ್ಣನು ಜಪ್ಪಿಸಿ ಸುಳಿದಾಡುವಾಗ್ಗೆ ಅವನಿಗೆ ಒಮ್ಮೆ ಸಂಧಿಯು ಸಾಧಿಸಿದ್ದರಿಂದ ಅವನು ಆ ಕಾಲಿಯಾ ಹಾವಿನ ಹೆಡೆಯ ಮೇಲೆ ಏರಿ ಅದರ ಮೇಲೆ ಕುಣಿಕುಣಿದು ತನ್ನ ಕಾಲಿನ ಹಿಂಬಡದಿಂದ ಅದರ ಹೆಡೆಯನ್ನು ಜಜ್ಜಿಬಿಟ್ಟನು. ಅದರಿಂದ ಕಾಲಿಯಾ ಹಾವಿನ ಶರೀರವು ಹ ಣ್ಣಾಗಿ ಅದರ ಮೈಯೊಳಗಿಂದ ರಕ್ತವು ಹರಿಯಹತ್ತಿತು. ಆಗ ಆ ಹಾವಿನ ಸೊಕ್ಕು ಮುರಿಯಿತು. ಆ ಮೇಲೆ ಕೃಷ್ಣನು ಆ ಹಾವಿಗೆ ಆ ಮಡುವನ್ನು

ಜ... ...ರದಸೇ ಕಡೆಗೆ ಹೋಗೆಂದು ಅಪ್ಪಣೆ ಮಾಡಲು ಅದು ಆ ಪ್ರಕಾರ ಹಾರಿಟು ಹೋಯಿತು.

---

## ೨೯. ಕೃಷ್ಣನು ಪರ್ವತವನ್ನು ಚತ್ತರಿಗೆ ಯಾಗಿ ಮಾಡಿದನು.

ಪೌರಾಣಿಕ ಕಾಲದಲ್ಲಿ ಯಾವದಾದರೊಂದು ವರ್ಷ ಮಳೆಯು ಬಾರ ...ರೆ ...ಂದ್ರನನ್ನು ಪ್ರಸನ್ನಮಾಡಿಕೊಳ್ಳುವದಕ್ಕಾಗಿ ಯಜ್ಞವನ್ನು ಮಾಡುವ ...ತಿಯು ಇತ್ತು. ಆ ಪ್ರಕಾರ ನಂದ ಮೊದಲಾದ ಗೋಪಾಲರು ಯಜ್ಞ ವನ್ನು ಮಾಡುವ ಸಿದ್ಧತೆಯನ್ನು ನಡೆಸಿದರು. ಇದನ್ನು ನೋಡಿ ಕೃಷ್ಣನು– “ನಮ್ಮದೂ ಇಂದ್ರನದೂ ಸಂಬಂಧವೇನು? ನಿತ್ಯದಲ್ಲಿ ನಮ್ಮದೂ ಗೋವ ರ್ಧನ ಪರ್ವತದ್ದೂ ಸಂಬಂಧವು ಇರುತ್ತಿರುವದರಿಂದ ನಾವು ಗೋವರ್ಧನ ಪರ್ವತಕ್ಕೆ ನೈವೇದ್ಯವನ್ನು ಅರ್ಪಣ ಮಾಡೋಣ” ಎಂದು ಸೂಚಿಸಿದನು. ಇದಕ್ಕೆ ನಂದನು ಒಡಂಬಟ್ಟನು. ಈ ಯಾವತ್ತು ಸಂಗತಿಯನ್ನು ನೋಡಿ ಇಂದ್ರನು ತನಗೆ ಗೋಪಾಲರು ಅಪಮಾನ ಮಾಡಿದರೆಂದು ಸಿಟ್ಟಿಗೆದ್ದು ಭಯಂ ಕರ ವೃಷ್ಟಿಯನ್ನು ಮಾಡುವದಕ್ಕೆ ಮೇಘನಿಗೆ ಅಪ್ಪಣೆ ಕೊಟ್ಟನು. ಆ ಪ್ರಕಾ ರ ಮೇಘನು ಗೋಕುಲದ ಮೇಲೆ ಅತಿವೃಷ್ಟಿಯನ್ನು ಮಾಡಿದನು. ಒಂದೇ ಸವನೆ ಗುಡುಗು ಮಿಂಚುಗಳ ಸಪ್ಪಳವು ನಡೆದು, ಅನೇಕಲ್ಲುಗಳು ಬಿದ್ದು, ಎಲ್ಲ ಕಡೆಗೆ ಅತಿಶಯ ನೀರು ಹರಿಯಲಿಕ್ಕೆ ಹತ್ತಿತು. ಕಾಲು ಇಡಲಿಕ್ಕೆ ಒಂದು ಎಳ್ಳಷ್ಟು ಸಹ ಒಣನೆಲವು ಇರಲಿಲ್ಲ. ಎಲ್ಲ ಜನರು ಚಳಿಯಿಂದ ಗದ ಗದ ನಡುಗಲಿಕ್ಕೆ ಹತ್ತಿದರು. ಇದನ್ನು ನೋಡಿ ಇನ್ನೇನು ಮಾಡಬೇಕೆಂದು ಎಲ್ಲರೂ ಚಿಂತೆ ಮಾಡುತ್ತಿರಲಾಗಿ, ಕೃಷ್ಣನು ಇಂದ್ರನ ಗರ್ವವನ್ನು ಖಂಡನ ಮಾಡಲಿಕ್ಕೆ ಗೋವರ್ಧನ ಪರ್ವತವನ್ನು ಕಿತ್ತು ಅದನ್ನು ತನ್ನ ಕರಾಂಗುಲಿಯ ಮೇಲೆ ಎತ್ತರಿಸಿ ಹಿಡಿದು, ಅದನ್ನೇ ಚತ್ತರಿಗೆಯಂತೆ ಮಾಡಿ, ಯಾವತ್ತು ಗೋಪ

ಗೋಪಿಯರನ್ನೂ, ಆಕಳುಗಳನ್ನೂ, ಅವುಗಳ ಕರುಮರಿಗಳನ್ನೂ, ಆ ಪರ್ವತದ ಆಶ್ರಯದ ಕೆಳಗೆ ನಿಲ್ಲಿಸಿಕೊಂಡನು. ಈ ಪ್ರಕಾರ ಕೃಷ್ಣನು ತನ್ನ ಕರಾಂಗುಲಿಯ ಮೇಲೆ ಗೋವರ್ಧನ ಪರ್ವತವನ್ನು ಒಂದೇ ಸವನೆ ಏಳು ದಿವಸ ಹಿಡಿದುಕೊಂಡು ನಿಂತನು. ಇದನ್ನು ಇಂದ್ರನು ನೋಡಿದ ಕೂಡಲೆ ಇಂದ್ರನ ಸೊಕ್ಕು ಜರ್‍ರನೆ ಇಳಿದು ಹೋಯಿತು. ಆಗ ಅವನು ಮಳೆಯನ್ನು ನಿಲ್ಲಿಸಿ, ನದಿ ಹಳ್ಳಗಳ ನೀರನ್ನು ಕಡಿಮೆಮಾಡಿ, ನೆಲವನ್ನು ಒಣಗಿಸಿದನು. ಆಗ ಯಾವತ್ತು ಜನರು ಪುನಃ ಗೋಕುಲದಲ್ಲಿ ಹೋಗಿ ಇರಲಿಕ್ಕೆ ಹತ್ತಿದರು.

---

## ೩೦. ಕೃಷ್ಣನನ್ನು ಕೊಲ್ಲಿಸಲಿಕ್ಕೆ ಕಂಸನು ಮಾಡಿದ ಯುಕ್ತಿಯು.

ಕೃಷ್ಣನು ಈ ಪ್ರಕಾರ ವಿಧವಿಧವಾದ ಚಮತ್ಕಾರಗಳನ್ನು ನಡೆಸಿರುತ್ತಾನೆಂತಲೂ, ಅವನು ಅನೇಕ ಮಂದಿ ರಾಕ್ಷಸರನ್ನು ಕೊಂದನೆಂತಲೂ ನಾಲ್ಕೂಕಡೆಗೆ ವರ್ತಮಾನವು ಹಬ್ಬಿತು. ಈ ವರ್ತಮಾನವು ಸ್ವತಃ ಕಂಸನ ಕಿವಿಗೆ ಹೋಗಿ ಮುಟ್ಟಿತು. ಆದರೆ ಈ ಪರಾಕ್ರಮಿಯಾದ ಕೃಷ್ಣನು ವಸುದೇವ ಮತ್ತು ದೇವಕಿಯರ ಲನೇ ಮಗನು ಮತ್ತು ತನ್ನ ಶತ್ರುವು ಇರುತ್ತಾನೆಂಬುವದು ಮಾತ್ರ ಇನ್ನೂ ಕಂಸನಿಗೆ ಗೊತ್ತಾಗಿದ್ದಿಲ್ಲ. ಆಗ ಕಲಹಪ್ರಿಯ ನಾರದನು ಕಂಸನ ಕಡೆಗೆ ಬೇಕಂತೇ ಹೋಗಿ ಅವನ ಮುಂದೆ ಕೃಷ್ಣನ ಜನ್ಮದಾರಭ್ಯ ಯಾವತ್ತು ನಿಜವಾದ ಸಂಗತಿಗಳನ್ನು ತಿಳಿಸಿದನು. ಹಾಗೂ ಗೋಕುಲದೊಳಗಿನ ನಂದನು ವಸುದೇವನ ಮಿತ್ರನೆಂತಲೂ ಅವನ ಹತ್ತರ ವಸುದೇವನ ಮಕ್ಕಳಾದ ಬಲರಾಮ ಮತ್ತು ಕೃಷ್ಣ ಈ ಇಬ್ಬರು ಹುಡುಗರು ಇರುತ್ತಾರೆಂತಲೂ ತಿಳಿಸಿದನು. ಇದನ್ನು ಕೇಳಿದ ಕೂಡಲೆ ವಸುದೇವನು ತನಗೆ ಮೋಸ ಮಾಡಿದನೆಂದು ಕಂಸನು ಬಹಳ ಸಿಟ್ಟಿಗೆದ್ದು ವಸುದೇವನನ್ನು ಕೊಲ್ಲುವ ಸಿದ್ಧತೆಯನ್ನು ನಡೆಸಿದನು. ಆದರೆ ಅವನು ನಾರದನ ಹೇಳಿಕೆಯ ಮೇಲಿಂದ

ವಸುದೇವನನ್ನು ಕೊಲ್ಲದೆ ವಸುದೇವನನ್ನೂ ಅವನ ಹೆಂಡತಿಯಾದ ದೇವಕಿಯನ್ನೂ ಕಾರಾಗೃಹದಲ್ಲಿ ಮಾತ್ರ ಇಟ್ಟನು.

ಕಂಸನು ವಸುದೇವನ ಮಕ್ಕಳಾದ ಬಲರಾಮ ಮತ್ತು ಕೃಷ್ಣ ಈ ಉಭಯತರನ್ನು ಯಾವ ಪ್ರಕಾರದಿಂದ ಕೊಲ್ಲಿಸಬೇಕೆಂದು ಬೇರೆ ಬೇರೆ ಉಪಾಯಗಳನ್ನು ಯೋಚಿಸಹತ್ತಿದನು. ಈ ಕೆಲಸಕ್ಕಾಗಿ ಅವನು ಕೇಶೀ ದೈತ್ಯನನ್ನು ಮೊದಲಿಗೆ ನೇಮಿಸಿದನು. ಇದಲ್ಲದೆ ಅವರನ್ನು ಮಲ್ಲ ಯುದ್ಧದಲ್ಲಿ ಝರ್ಜರ ಮಾಡಿ ಕೊಂದು ಬಿಡಬೇಕೆಂದು ಮುಷ್ಟಿಕ ಮತ್ತು ಚಾಣೂರ ಎಂಬ ಇಬ್ಬರು ರಾಕ್ಷಸರಿಗೂ ಹೇಳಿದನು. ಹಾಗೂ ಅವರನ್ನು ಆನೆಯ ಕಾಲಿಗೆ ಕಟ್ಟಿಸಿ ಕೊಲ್ಲಲಿಕ್ಕೆ ಕುವಲಯಪೀಡ ಎಂಬ ಉನ್ಮತ್ತವಾದ ಆನೆಯನ್ನು ಸಹ ಸಿದ್ಧಮಾಡಿದನು. ಕಂಸನು ಈ ಪೂರ್ವ ಸಿದ್ಧತೆಯನ್ನು ಮಾಡಿದ ತರುವಾಯ, ಅವರನ್ನು ಧನುರ್ಯಾಗದ ನಿಮಿತ್ಯದಿಂದ ಕರೆದುಕೊಂಡು ಬರುವದಕ್ಕಾಗಿ ಅಕ್ರೂರನ ಕೈಯಲ್ಲಿ ನಿರೂಪವನ್ನು ಕೊಟ್ಟು ಗೋಕುಲಕ್ಕೆ ಕಳುಹಿಸಿದನು! ಅಕ್ರೂರನು ಮಹಾ ಸಜ್ಜನನಿದ್ದನು. ಆದರೆ ಅವನು ರಾಜಾಜ್ಞೆಯನ್ನು ಮೀರಲಾರದೆ ರಾಜಾಜ್ಞೆಗೆ ಅನುಸರಿಸಿ ಗೋಕುಲಕ್ಕೆ ಹೋದನು. ಅಲ್ಲಿ ನಂದನು ಅವನ ಆದರಾತಿಥ್ಯವನ್ನು ಚೆನ್ನಾಗಿ ಮಾಡಿದನು. ಅಲ್ಲಿ ಅಕ್ರೂರನು ನಂದನ ಮುಂದೆ ರಾಜಾಜ್ಞೆಯನ್ನು ಮಾತ್ರ ತಿಳಿಸಿದನು. ಆದರೆ ಅವನಿಗೆ ಕೃಷ್ಣನ ದರ್ಶನವಾದ ನಂತರ ಅವನು ಕೃಷ್ಣನ ಮುಂದೆ ಕಂಸನ ಓಲಗದಲ್ಲಿ ನಡೆದ ಯಾವತ್ತು ಸಂಗತಿಗಳನ್ನು ಒಂದೂ ಬಚ್ಚಿಡದೆ ಹೇಳಿ, ಕಂಸನು ಯೋಚಿಸಿಟ್ಟ ಉಪಾಯಗಳನ್ನು ತಿಳಿಸಿದನು. ಈ ರಾಜಾಜ್ಞೆಯ ಪ್ರಕಾರ ನಂದನು ಬಲರಾಮ ಮತ್ತು ಕೃಷ್ಣ ಈ ಇಬ್ಬರನ್ನೂ ಇನ್ನೂ ಕೆಲವು ಗೋಪಾಲಕರನ್ನೂ ಕರೆದುಕೊಂಡು, ರಾಜನಿಗೆ ಕೊಡತಕ್ಕ ಕಾಣಿಕೆಯನ್ನು ಸಹ ತೆಗೆದುಕೊಂಡು, ಮಥುರೆಗೆ ಹೊರಟುಹೋದನು.

# ೩೧. ಬಲರಾಮ ಮತ್ತು ಕೃಷ್ಣರ ಅದ್ಭುತ ಶಕ್ತಿಯು.

ಮೇಲೆ ಹೇಳಿದ ಪ್ರಕಾರ ಅಕ್ರೂರನು ನಂದ, ಬಲರಾಮ ಮತ್ತು ಕೃಷ್ಣ ಈ ಮೂವ್ವರನ್ನೂ ಕರೆದುಕೊಂಡು ಮಥುರೆಗೆ ಮುಟ್ಟಿದ ತರುವಾಯ ಅವರನ್ನೂ ಅವರ ಸಂಗಡ ಬಂದಿದ್ದ ಗೋಪಾಲಕರ ಸಮೂಹವನ್ನೂ ನಗರದ ಹೊರಗೆ ಇಳಿಸಿ, ಅವರು ಬಂದ ವರ್ತಮಾನವನ್ನು ತಿಳಿಸುವದಕ್ಕೆ ತಾನೊಬ್ಬನೇ ಕಂಸನ ಕಡೆಗೆ ಹೋದನು. ಇತ್ತಲಾ ಬಲರಾಮ ಮತ್ತು ಕೃಷ್ಣ ಇವರಿಬ್ಬರೂ ನಗರದ ಶೋಭೆಯನ್ನು ನೋಡಲಿಕ್ಕೆ ಹೊರಟರು. ಕೃಷ್ಣನ ಕೀರ್ತಿಯು ಮಥುರೆಯಲ್ಲಿ ಮೊದಲೇ ಹರಡಿದ್ದ ಕಾರಣ ಜನರು ತಮ್ಮ ಮನೆಗಳ ಮುಂಭಾಗದಲ್ಲಿ ಗುಂಪು ಗುಂಪಾಗಿ ನಿಂತುಕೊಂಡು, ಅವನನ್ನು ಉತ್ಸುಕತೆಯಿಂದ ನೋಡಲಿಕ್ಕೆ ಹತ್ತಿದರು. ಆಗ ಬಲರಾಮ ಮತ್ತು ಕೃಷ್ಣ ಇವರಿಬ್ಬರೂ ಈ ಸೊಬಗನ್ನು ನೋಡುತ್ತ ದಾರಿಯಿಂದ ನಡೆದಿದ್ದರು. ಇಷ್ಟರೊಳಗೆ ಇವರ ಎದುರಿನಿಂದ ರಾಜನ ಬಟ್ಟೆಗಳನ್ನು ಒಗೆಯುವ ಅಗಸನು ತನ್ನ ಅರಿವೆಯ ಮೊಟ್ಟೆಯನ್ನು ಕಟ್ಟಿಕೊಂಡು ಇವರಿದ್ದೆಡೆಗೆ ಬಂದನು. ಅವನನ್ನು ಕೃಷ್ಣನು ನೋಡಿ –"ನಿನ್ನ ಮೊಟ್ಟೆಯೊಳಗಿನ ಉತ್ತಮ ಬಟ್ಟೆಗಳನ್ನು ನಮಗೆ ಕೊಡು" ಎಂದು ಕೇಳಿದನು. ಅದಕ್ಕೆ ಆ ಉನ್ಮತ್ತ ಅಗಸನು –"ಎಲೋ ಕಾಡ ಮನುಷ್ಯರೇ! ನನ್ನ ಮೊಟ್ಟೆಯಲ್ಲಿ ರಾಜನ ಬಟ್ಟೆಗಳಿರುತ್ತವೆ. ಇವುಗಳನ್ನು ಬೇಡುವ ನಿಮ್ಮ ಮೂರ್ಖತನಕ್ಕೆ ಏನು ಹೇಳಬೇಕು?" ಎಂದು ತಿರಸ್ಕಾರದಿಂದ ನುಡಿದನು. ಇದನ್ನು ಕೇಳಿ ಕೃಷ್ಣನು ಸಿಟ್ಟಿಗೆದ್ದವನೇ ಅವನ ಕಪಾಳದ ಮೇಲೆ ಒಂದು ಏಟು ಹೊಡೆದನು. ಆ ಕೂಡಲೆ ಆ ಅಗಸನು ಅಲ್ಲಿ ಸತ್ತುಬಿದ್ದನು. ಆಮೇಲೆ ಬಲರಾಮ ಮತ್ತು ಕೃಷ್ಣ ಈ ಇಬ್ಬರೂ ತಮಗೆ ಬೇಕಾದ ಬಟ್ಟೆಗಳನ್ನು ಆ ಅಗಸನ ಮೊಟ್ಟೆಯೊಳಗಿಂದ ತೆಗೆದುಕೊಂಡು ದಾರೀ ಹಿಡಿದರು. ಮುಂದೆ ಒಬ್ಬ ನೇಕಾರನು ಅವರಿಗೆ ತಾನಾಗಿ ಪ್ರೇಮದಿಂದ ಕೆಲವು ಬಟ್ಟೆಗಳನ್ನು ತಂದು ಅರ್ಪಿಸಿದನು. ಅವುಗಳನ್ನು ಅವರಿಬ್ಬರೂ ಸಂತೋಷದಿಂದ ಸ್ವೀಕಾರಮಾಡಿ ಸುದಾಮನೆಂಬ ಹೂಗಾರವನು,

ತಮಗೆ ಅರ್ಪಿಸಿದ ಹೂಗಳನ್ನು ಸಹ ಸ್ವೀಕಾರಮಾಡಿ, ಮುಂದೆ ನಡೆದು ಹೋಗುತ್ತಿದ್ದಾಗ್ಗೆ ಕುಬ್ಜಾ ಎಂಬೊಬ್ಬ ಕಂಸನ ದಾಸಿಯು ಸುಗಂಧ ದ್ರವ್ಯ ವನ್ನು ಸಿದ್ಧಮಾಡಿಕೊಂಡು ಅರಮನೆಗೆ ನಡೆದಿದ್ದಳು. ಅವಳ ಅಂಗವು ಮೂರು ಕಡೆಗೆ ಮಣಿದು ಸೊಟ್ಟಾಗಿತ್ತು. ಅವಳು ಬಲರಾಮ ಮತ್ತು ಕೃಷ್ಣ ಈ ಇಬ್ಬರನ್ನು ನೋಡಿ ತನ್ನಲ್ಲಿಯ ಪರಿಮಳ ದ್ರವ್ಯವನ್ನು ಲೇಪಿಸಲಿಕ್ಕೆ ಈ ಪುರುಷರೇ ಯೋಗ್ಯರಿರುತ್ತಾರೆಂದು ವಿಚಾರಮಾಡಿ ಅವರಿಗೆ ಅದನ್ನು ಲೇ ಪಿಸಿದಳು. ಆಗ ಕೃಷ್ಣನು ಅವಳಿಗೆ ಪ್ರತ್ಯುಪಕಾರವನ್ನು ಮಾಡುವದಕ್ಕಾಗಿ ತನ್ನ ಕಾಲಿನಿಂದ ಅವಳ ಬೆನ್ನಮೇಲೆ ಒದ್ದು ಅವಳ ಅಂಗವನ್ನು ಸರಳವಾಗಿ ಮಾಡಿದನು.

ಈ ಪ್ರಕಾರ ಈ ಇಬ್ಬರು ಅಣ್ಣತಮ್ಮಂದಿರು ಜನರಿಗೆ ಚಮತ್ಕಾರಗಳನ್ನು ತೋರಿಸುತ್ತ ಕಂಸನ ಯಜ್ಞಶಾಲೆಗೆ ಹೋದರು. ಆ ಯಜ್ಞಶಾಲೆಯ ಹತ್ತರ ಇಂದ್ರನ ಧನುಷ್ಯವು ಇಡಲ್ಪಟ್ಟಿದ್ದು ಅದರ ಮೇಲೆ ರಾಜಾಜ್ಞೆಯ ಪ್ರಕಾರ ಕಾವಲು ಇತ್ತು. ಆ ಕಾವಲುಗಾರರ ಮಾತು ಕೇಳದೆ ಕೃಷ್ಣನು ಆ ಧನು ಷ್ಯವನ್ನು ಎತ್ತಿ ಮುರಿದುಬಿಟ್ಟನು; ಹಾಗೂ ತನಗೆ ತಡೆಯಲಿಕ್ಕೆ ತನ್ನ ಮೈ ಮೇಲೆ ಬಂದಿದ್ದ ಕಾವಲುಗಾರರನ್ನು ಕೊಂದನು. ಈ ವರ್ತಮಾನವು ಕಂಸ ನಿಗೆ ತಿಳಿದ ಕೂಡಲೆ ಅವನು ಕೃಷ್ಣನನ್ನೂ ಬಲರಾಮನನ್ನೂ ಹಿಡಿದುಕೊಂಡು ಬರಲಿಕ್ಕೆ ತನ್ನ ಸೈನ್ಯವನ್ನು ಕಳಿಸಿದನು. ಆ ಸೈನ್ಯವನ್ನು ಸಹ ಅವರು ಕೊಂದು ಬಿಟ್ಟರು. ಆಗ ಮಥುರೆಯ ಯಾವತ್ತು ಜನರು ಆಶ್ಚರ್ಯಚಕಿತರಾದರು. ಕಂಸನಿಗಂತೂ ಆ ರಾತ್ರಿ ಅಂಜಿಕೆಯಿಂದ ನಿದ್ರೆಯು ಬರಲಿಲ್ಲ. ಇದಲ್ಲದೆ ಅವನಿಗೆ ಭಯಂಕರ ಸ್ವಪ್ನಗಳು ಬಿದ್ದವು. ಈ ಪ್ರಕಾರ ಅವನು ಆ ರಾತ್ರಿಯನ್ನು ಕಸವಿಸಿ ಯಿಂದ ಕಳೆದ ನಂತರ ಮರುದಿವಸ ಮಲ್ಲರ ಕುಸ್ತಿಯ ಯೋಜನೆಯನ್ನು ಮಾ ಡಿ, ಆ ಕುಸ್ತಿಯನ್ನು ನೋಡಲಿಕ್ಕೆ ಬರುವದಕ್ಕಾಗಿ ನಂದ ಮೊದಲಾದ ಗೋಪಾ ಲರಿಗೆ ಆಮಂತ್ರಣವನ್ನು ಕಳಿಸಿದನು. ಆ ಆಮಂತ್ರಣದ ಪ್ರಕಾರ ನಂದ ನು ತನ್ನ ಕೆಲವು ಗೋಪಾಲ ಸಮೂಹವನ್ನು ಕೂಡಿಕೊಂಡು ಕುಸ್ತಿಯ ಮಂ ಟಪಕ್ಕೆ ಹೋಗಿ ತಾನು ರಾಜನಿಗೆ ಕಾಣಿಕೆಯನ್ನು ಕೊಡಲಿಕ್ಕೆ ಒಯ್ದು ವ

ಸ್ತ್ರಾದಿಗಳನ್ನು ಅರ್ಪಿಸಿದ ತರುವಾಯ ಅವರೆಲ್ಲರು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಂಡರು. ಕೆಲವು ಹೊತ್ತಿನ ಮೇಲೆ ಬಲರಾಮ ಮತ್ತು ಕೃಷ್ಣ ಇವರಿಬ್ಬರೂ ಮಂಟಪದ ಬಾಗಿಲದ ಹತ್ತರ ಬಂದರು. ಅಲ್ಲಿ ಕುವಲಯ ಪೀಡವೆಂಬ ಮತ್ತವಾದ ಆನೆಯು ನಿಂತಿತ್ತು. ಅದರ ಮಾವುತನು ಈ ಇಬ್ಬರು ಬಂದದ್ದನ್ನು ನೋಡಿದವನೇ ಅದನ್ನು ಅವರ ಮೈಮೇಲೆ ಸಾಗಿಸಿದನು. ಆದರೆ ಕೃಷ್ಣನು ತಾನು ಮುಂದೆ ಹೋಗಿ ಆ ಆನೆಯ ಸಂಗಡ ಬಹಳ ಹೊತ್ತು ಗುದ್ದಾಡಿ, ಅದರ ಬಾಲವನ್ನು ಹಿಡಿದು ಜಗ್ಗಿ, ಅದನ್ನು ಬಹಳವಾಗಿ ದಣಿಸಿ, ಕಡೆಗೆ ಅದನ್ನೂ ಅದರ ಮಾವುತನನ್ನೂ ಕೊಂದುಬಿಟ್ಟನು. ಈ ಪ್ರಕಾರ ಕೃಷ್ಣನು ಆ ಆನೆಯನ್ನು ಕೊಂದನೆಂಬ ವರ್ತಮಾನವು ಕಂಸನಿಗೆ ಆಗಿಂದಾಗಲೇ ಹೋಗಿ ಮುಟ್ಟಿತು. ಇಷ್ಟರಲ್ಲಿ ಬಲರಾಮ ಕೃಷ್ಣರು ತಾವು ಕಿತ್ತು ತೆಗೆದಿದ್ದ ಆನೆಯ ಕೋರೆಗಳನ್ನು ಶಸ್ತ್ರಗಳಂತೆ ಹೆಗಲ ಮೇಲೆ ಹಾಕಿಕೊಂಡು, ರಕ್ತತುಂಬಿದ ಅರಿವೆಗಳಿಂದ ಮಂಟಪವನ್ನು ಪ್ರವೇಶಿಸಿದರು. ಇವರ ಕಡೆಗೆ ಕೆಲವರು ಭೀತಿಯಿಂದ, ಕೆಲವರು ಪ್ರೇಮದಿಂದ, ಕೆಲವರು ಕೌತುಕದಿಂದ, ಹಾಗೂ ಕೆಲವರು ಆಶ್ಚರ್ಯದಿಂದ ನೋಡಲಿಕ್ಕೆ ಹತ್ತಿದರು. ಇವರು ಮಂಟಪಕ್ಕೆ ಬಂದ ಬಳಿಕ ಮುಷ್ಟಿಕ ಮತ್ತು ಚಾಣೂರ ಈ ಇಬ್ಬರು ಮಲ್ಲರು ಇವರನ್ನು ಕುಸ್ತಿಯಾಡಲಿಕ್ಕೆ ಬನ್ನಿರೆಂದು ಕರೆದರು. ಆಗ ಬಲರಾಮ ಮತ್ತು ಕೃಷ್ಣ ಈ ಇಬ್ಬರೂ ಕುಸ್ತಿಯ ಕಣದೊಳಗೆ ಹೋದರು. ಕೃಷ್ಣನು ಚಾಣೂರ ಎಂಬ ಮಲ್ಲನ ಕೂಡ ಹಾಗೂ ಬಲರಾಮನು ಮುಷ್ಟಿಕಾ ಎಂಬ ಮಲ್ಲನ ಕೂಡ ಕುಸ್ತಿಯಾಡಿದರು. ಆಗ ಯಾರು ಯಾರನ್ನು ಒಗೆಯುವರೆಂದು ನೋಡುವದಕ್ಕಾಗಿ ಪ್ರೇಕ್ಷಕರು ಚಿತ್ರದೊಳಗಿನ ಗೊಂಬೆಗಳಂತೆ ಮೌನದಿಂದ ಕುಳಿತು ಬಿಟ್ಟಿದ್ದರು. ಬಲರಾಮ ಮತ್ತು ಕೃಷ್ಣರು ತಮ್ಮ ಜೋಡಿಯ ಮಲ್ಲರ ಗೂಡ ಕೆಲವು ಹೊತ್ತಿನ ತನಕ ಒಳ್ಳೇ ಚಮತ್ಕಾರದ ಕುಸ್ತಿಯನ್ನಾಡಿ ಆ ಮೇಲೆ ಆ ಇಬ್ಬರು ಮಲ್ಲರನ್ನು ಕೊಂದು ಬಿಟ್ಟರು. ಇದನ್ನು ನೋಡಿ ಇತರ ಮಲ್ಲರು ಇವರ ಮೇಲೆ ಸಾಗಿ ಹೋದರು. ಆಗ ಅವರಿಗಾದರೂ ಅದೇ ಪಾರಪತ್ಯವನ್ನು ಮಾಡಿದರು. ಇದನ್ನೆಲ್ಲ ನೋಡಿ ಕಂಸನು ಭಯಭೀತನಾಗಿ — "ಈ ಇಬ್ಬರು ಉಪದ್ವ್ಯಾಪಿ ಹುಡುಗರನ್ನು ಮಂಟಪದಿಂದ ಹೊರಗೆ ಹಾಕಿ

ಬಿಡಿರಿ. ನಮ್ಮ ಶತ್ರುಗಳಿಗೆ ಆಶ್ರಯ ಕೊಟ್ಟ ನಂದನನ್ನು ಕಾರಾಗೃಹದಲ್ಲಿಡಿರಿ. ಹಾಗೂ ವಸುದೇವನ ಮತ್ತು ಅವನ ತಂದೆಯಾದ ಉಗ್ರಸೇನನ ತಲೆಯನ್ನು ಹಾರಿಸಿರಿ" ಎಂದು ಅಪ್ಪಣೆಯನ್ನು ಮಾಡಿದನು.

---

## ೩೨. ಕಂಸ ವಧ.

ಕಂಸನು ಮಾಡಿದ ಅಪ್ಪಣೆಯನ್ನು ಕೇಳಿ ಕೃಷ್ಣನಿಗೆ ಬಹಳ ಸಿಟ್ಟು ಬಂದಿತು. ಆಗ ಕೃಷ್ಣನು ಈ ದುಷ್ಟ ರಾಜನು ತನ್ನ ಪ್ರತ್ಯಕ್ಷ ಸೋದರಮಾವನಾದಾಗ್ಯೂ ಇನ್ನು ಮೇಲೆ ಏನೂ ಅನುಮಾನ ಮಾಡದೆ ಅವನನ್ನು ಕೊಲ್ಲುವದೇ ಯೋಗ್ಯವೆಂದು ಎಣಿಸಿ ಕಂಸನ ಸಿಂಹಾಸನದ ಮೇಲೆ ಒಮ್ಮೆಲೆ ಜಿಗಿದು ಅವನ ಮೇಲೆ ಸಾಗಿ ಹೋದನು. ಕಂಸನು ತನ್ನ ಆತ್ಮಸಂರಕ್ಷಣೆಯ ಸಲುವಾಗಿ ತನ್ನ ಕತ್ತಿ ಢಾಲುಗಳನ್ನು ಕೈಯಲ್ಲಿ ತೆಗೆದುಕೊಂಡು ತನ್ನ ಕತ್ತಿಯನ್ನು ಕೃಷ್ಣನ ಮೇಲೆ ಉಪಯೋಗ ಮಾಡಲಿಕ್ಕೆ ಹತ್ತಿದನು. ಆದರೆ ಕೃಷ್ಣನು ಒಮ್ಮಿಂದೊಮ್ಮೆ ಅವನ ಮೇಲೆ ಜಡಪು ಹಾಕಿ ಅವನ ಕುತ್ತಿಗೆಯನ್ನು ಹಿಡಿದು, ಅವನ ಕಿರೀಟವನ್ನು ಕೆಳಗೆ ಕೆಡವಿ, ಅವನ ಜಂಡಿಕೆಯನ್ನು ಹಿಡಿದು ಜಗ್ಗಿ, ಅವನನ್ನು ಸಿಂಹಾಸನದಿಂದ ಕೆಳಗೆ ದಬ್ಬಿದ ತರುವಾಯ ಒಂದು ಕ್ಷಣಮಾತ್ರದಲ್ಲಿ ಅವನನ್ನು ಕೊಂದುಬಿಟ್ಟನು.

ಕೃಷ್ಣನು ಈ ಪ್ರಕಾರ ಕಂಸನನ್ನು ಕೊಂದಕೂಡಲೆ ಮಥುರೆಯಲ್ಲಿ ಯಾವತ್ತು ಕಡೆಗೆ ಹಾಹಾಕಾರವಾಯಿತು. ಕಂಸನ ಎಂಟು ಮಂದಿ ತಮ್ಮಂದಿರು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವದಕ್ಕಾಗಿ ಕೃಷ್ಣನ ಮೈಮೇಲೆ ಸಾಗಿ ಹೋದರು ಆಗ ಕೃಷ್ಣನು ಅವರೆಲ್ಲರನ್ನು ಕೊಂದು ಬಿಟ್ಟನು.

ಈ ಪ್ರಕಾರ ಬಲರಾಮ ಕೃಷ್ಣರಿಬ್ಬರೂ ತಮ್ಮ ಪರಾಕ್ರಮವನ್ನು ತೋರಿಸಿದನಂತರ ತಮ್ಮ ತಾಯಿತಂದೆಗಳನ್ನು ಕಾರಾಗೃಹದಿಂದ ಮುಕ್ತ ಮಾಡಿ ಅವರ ಕಾಲಮೇಲೆ ತಮ್ಮ ತಲೆಯನ್ನಿಟ್ಟು ಸಾಷ್ಟಾಂಗ ನಮಸ್ಕಾರ ಮಾಡಿದರು

ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಮಕ್ಕಳು ಇಷ್ಟು ದೊಡ್ಡ ಪರಾಕ್ರಮ ಮಾಡಿದ್ದನ್ನು ಕಂಡು ಅವರಿಗೆ ಅತಿಶಯ ಆನಂದವಾಯಿತು.

ಬಲರಾಮ ಕೃಷ್ಣರು ಈ ಪ್ರಕಾರ ತಮ್ಮ ತಾಯಿತಂದೆಗಳ ಬಿಟ್ಟಿಯನ್ನು ತೆಗೆದುಕೊಂಡು ಅವರ ಆಶೀರ್ವಾದವನ್ನು ತೆಗೆದುಕೊಂಡ ನಂತರ ತಮ್ಮ ಅಜ್ಜನಾದ ಉಗ್ರಸೇನನ ಕಡೆಗೆ ಹೋದರು. ಕಂಸನು ಉಗ್ರಸೇನನ ಸಿಂಹಾಸನವನ್ನು ಕಸದುಕೊಂಡು ಉಗ್ರಸೇನನಿಗೆ ಅನೇಕತರದ ಯಾತನೆಯನ್ನು ಕೊಟ್ಟಿದ್ದನು. ಈಗ ಕೃಷ್ಣನು ಅವನ ರಾಜ್ಯವನ್ನು ಅವನಿಗೆ ತಿರುಗಿ ಒಪ್ಪಿಸಿ, ಕಂಸನ ಭೀತಿಯ ಮೂಲಕ ಎರಡನೇ ಕಡೆಗೆ ಓಡಿ ಹೋಗಿದ್ದ ಯಾದವರನ್ನು ತಿರುಗಿ ಕರೆಯಿಸಿ, ಅವರಿಗೆ ಮಥುರೆಯಲ್ಲಿ ನಿರ್ಭೀತಿಯಿಂದ ವಾಸಮಾಡಿಕೊಂಡು ಇರಲಿಕ್ಕೆ ತಿಳುಹಿಸಿದನು. ಆ ಮೇಲೆ ಬಲರಾಮ ಕೃಷ್ಣರು ತಾವು ಮಥುರೆಯಲ್ಲಿ ಶಾಂತತೆಯನ್ನು ನೆಲೆಗೊಳಿಸಲಿಕ್ಕೆ ಕೆಲವು ದಿವಸ ಇದ್ದು ಕೊಂಡು ಹಿಂದುಗಡೆ ಗೋಕುಲಕ್ಕೆ ಬರುತ್ತೇವೆಂದು ಹೇಳಿ ನಂದನಿಗೂ ಇತರ ಗೋಪಾಲರಿಗೂ ಗೋಕುಲಕ್ಕೆ ಕಳುಹಿಸಿದರು.

---

## ೩೩. ಗುರುದಕ್ಷಿಣವು.

ಮುಂದೆ ವಸುದೇವನು ಬಲರಾಮನ ಮತ್ತು ಕೃಷ್ಣನ ಉಪನಯನವನ್ನು ತನ್ನ ಕುಲಗುರುಗಳಾದ ಗರ್ಗಮುನಿಗಳಿಂದ ಮಾಡಿಸಿ, ಅವರಿಗೆ ವಿದ್ಯಾಭ್ಯಾಸ ಮಾಡಿಸುವದಕ್ಕಾಗಿ ಅವರನ್ನು ಸಂದೀಪನೀ ಎಂಬ ಹೆಸರಿನ ಒಬ್ಬ ವಿದ್ವಾನ್ ಬ್ರಾಹ್ಮಣನ ಮನೆಯಲ್ಲಿ ಇಟ್ಟನು. ಅಲ್ಲಿ ಅವರಿಬ್ಬರೂ ತಮ್ಮ ಗುರುವಿನ ಸೇವೆಯನ್ನು ಉತ್ತಮ ಪ್ರಕಾರವಾಗಿ ಮಾಡುತ್ತ ವೇದ, ಉಪನಿಷತ್ತು ಮತ್ತು ಶಾಸ್ತ್ರಗಳ ಅಭ್ಯಾಸವನ್ನು ಮಾಡಿದರು. ಈ ಪ್ರಕಾರ ಅವರು ತಮ್ಮ ಎಲ್ಲ ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ತಮ್ಮ ಗುರುವಿಗೆ— “ನೀವು ನಿಮ್ಮ ಇಚ್ಛಾನುಸಾರ ಬೇಕಾದ ಗುರುದಕ್ಷಿಣವನ್ನು ಬೇಡಬೇಕು” ಎಂದು ಪ್ರಾರ್ಥಿಸಿದರು. ಆಗ ಸಂದೀಪನೀ ಗುರುವು— “ನನ್ನ ಮಗನು ಪ್ರಭಾಸ ಕ್ಷೇತ್ರದಲ್ಲಿ

ಸಮುದ್ರದೊಳಗೆ ಮುಳುಗಿದ್ದು ಅವನನ್ನು ನೀವು ತಂದುಕೊಡಬೇಕು" ಎಂದು ಹೇಳಿದನು. ಆಗ ಅವರಿಬ್ಬರೂ "ಯಾಕಾಗಲೊಲ್ಲದು" ಎಂದು ಒಡಂಬಟ್ಟು ಪ್ರಭಾಸಕ್ಷೇತ್ರಕ್ಕೆ ಹೋಗಿ ಅಲ್ಲಿ ಸಮುದ್ರನಿಗೆ —"ನೀನು ನಮ್ಮ ಗುರುಬಂಧುವನ್ನು ನಿನ್ನ ತೆರೆಗಳ ಕೂಡ ತೆಗೆದುಕೊಂಡು ಬಂದಿರುತ್ತೀ. ಅವನನ್ನು ನೀನು ನಮಗೆ ತಿರುಗಿ ಕೊಡು" ಎಂದು ಕೇಳಿದರು. ಅದಕ್ಕೆ ಸಮುದ್ರನು — "ನಾನು ಅವನನ್ನು ತೆಗೆದುಕೊಂಡು ಬಂದಿಲ್ಲ. ಆದರೆ ನನ್ನ ಹೊಟ್ಟೆಯಲ್ಲಿ ಶಂಖದ ರೂಪವನ್ನು ಧರಿಸಿದ ಒಬ್ಬ ರಾಕ್ಷಸನು ಇರುವನು. ಅವನು ತೆಗೆದುಕೊಂಡು ಬಂದಿರುತ್ತಾನೆ" ಎಂದು ಉತ್ತರಕೊಟ್ಟನು. ಆಮೇಲೆ ಕೃಷ್ಣನು ಆ ರಾಕ್ಷಸನನ್ನು ಕೊಂದು ಅವನ ಹೊಟ್ಟೆಯನ್ನು ಬಗಿದನು. ಆದರೆ ಅವನ ಹೊಟ್ಟೆಯೊಳಗೆ ಆ ಗುರುಪುತ್ರನು ದೊರೆಯಲಿಲ್ಲ. ಆ ಮೇಲೆ ಕೃಷ್ಣನು ಆ ರಾಕ್ಷಸನ ಶರೀರದಿಂದ ಉತ್ಪನ್ನವಾದಂಥ ಪಾಂಚಜನ್ಯ ಶಂಖವನ್ನು ತೆಗೆದುಕೊಂಡು ಯಮನ ಕಡೆಗೆ ಹೋಗಿ, ಅವನ ಕಡೆಯಿಂದ ಗುರುಪುತ್ರನನ್ನು ಬಿಡಿಸಿಕೊಂಡು ಬಂದು, ಅವನನ್ನು ಸಂದೀಪನಿ ಗುರುವಿನ ಸ್ವಾಧೀನಕ್ಕೆ ಒಪ್ಪಿಸಿದನು. ಆಗ ಆ ಗುರುವು ಅತ್ಯಂತ ಸಂತುಷ್ಟನಾಗಿ ಆ ಉಭಯ ಶಿಷ್ಯರಿಗೂ ಉತ್ತಮ ಪ್ರಕಾರದ ಆಶೀರ್ವಾದಗಳನ್ನು ಕೊಟ್ಟನು. ಆ ಬಳಿಕ ಬಲರಾಮ ಕೃಷ್ಣರಿಬ್ಬರೂ ಆ ಗುರುವಿನ ನಿರೂಪವನ್ನು ತೆಗೆದುಕೊಂಡು ಮಥುರೆಗೆ ತಿರುಗಿ ಬಂದರು.

---

## ೩೪. ದ್ವಾರಕೆಯ ಉತ್ಪತ್ತಿಯು.

ಕೃಷ್ಣನು ಕಂಸನನ್ನು ಕೊಂದನೆಂಬ ವರ್ತಮಾನವನ್ನು ಕೇಳಿ ಕಂಸನ ಮಾವನಾದ ಜರಾಸಂಧನೆಂಬ ಮಗಧ ದೇಶದ ಅರಸನು ದೊಡ್ಡ ಸೈನ್ಯವನ್ನು ತೆಗೆದು ಕೊಂಡು ಬಂದು ಮಥುರೆಗೆ ಮುತ್ತಿಗೆಯನ್ನು ಹಾಕಿದನು. ಆಗ ಬಲರಾಮ ಮತ್ತು ಕೃಷ್ಣರಿಬ್ಬರು ಅವನಕೂಡ ಯುದ್ಧಮಾಡಿ ಅವನನ್ನು ಪ

ರಾಭವ ಮಾಡಿದರು. ಇಷ್ಟೇಅಲ್ಲ, ಬಲರಾಮನು ಅವನನ್ನು ಹೆಡಮುರಿಗೆ ಕಟ್ಟಿ ತಂದನು. ಆದರೆ ಕೃಷ್ಣನು ಅವನ ಹೆಡಮುರಿಗೆಯನ್ನು ಬಿಚ್ಚಿಸಿದನು. ಇದರಿಂದ ಜರಾಸಂಧನು ಬಹಳ ಅವಮಾನಹೊಂದಿ ತಿರುಗಿ ಹೋದನು. ಆದರೂ ಅವನು ಪುನಃ ಪುನಃ ಮಥುರೆಗೆ ಬಂದು ಪರಾಭವ ಹೊಂದಿ ಹೋಗುತ್ತಿದ್ದನು. ಈ ಪ್ರಕಾರ ಅವನು ಹದಿನೇಳು ಸಾರೆ ಬಲರಾಮಕೃಷ್ಣರಿಂದ ಪರಾಭವಹೊಂದಿದನು. ಮುಂದೆ ಕೆಲವು ದಿವಸಗಳಾದ ತರುವಾಯ ಕಾಲಯವನ ಎಂಬ ಹೆಸರಿನ ಒಬ್ಬ ವೀರಪುರುಷನು ಮಥುರೆಯ ಮೇಲೆ ಸಾಗಿ ಹೋದನು. ಇದೇ ಪ್ರಸಂಗವನ್ನು ಸಾಧಿಸಿ ಜರಾಸಂಧನು ತಾನೂ ಮಥುರೆಯ ಮೇಲೆ ಸಾಗಿ ಬರಬೇಕೆಂದು ಸಿದ್ಧತೆಯನ್ನು ನಡೆಸಿದನು. ಕೃಷ್ಣನು ಈ ವರ್ತಮಾನವನ್ನು ಕೇಳಿ ತಾನು ಈ ಇಬ್ಬರ ಸಂಗಡ ಒಮ್ಮಿಲೆ ಯುದ್ಧವನ್ನು ಆರಂಭ ಮಾಡಿದರೆ ಯಾದವರು ನಾಶವಾಗುವರೆಂದು ತಿಳಿದು ಸಮುದ್ರದೊಳಗೆ ದ್ವಾರಕಾನಗರವನ್ನು ನಿರ್ಮಾಣಮಾಡಿ ಅಲ್ಲಿ ಯಾದವರನ್ನು ಒಯ್ದು ಇಟ್ಟು ಅವರ ಸಂರಕ್ಷಣಕ್ಕಾಗಿ ಬಲರಾಮನನ್ನು ಕಳಿಸಿ ತಾನೊಬ್ಬನೇ ಕಾಲಯವನನ ಕೂಡ ಯುದ್ಧ ಮಾಡಲಿಕ್ಕೆ ಹೊರಟನು. ಕಾಲಯವನನು ಬಹಳ ಬಲಶಾಲಿಯು ಇದ್ದುದರಿಂದ ಅವನನ್ನು ಯುಕ್ತಿಯಿಂದಲೇ ಕೊಲ್ಲಬೇಕೆಂದು ವಿಚಾರ ಮಾಡಿ ಕೃಷ್ಣನು ಓಡಿ ಹೋಗಲಿಕ್ಕೆ ಹತ್ತಿದನು. ಇದರಿಂದ ಕಾಲಯವನನು ಕೃಷ್ಣನನ್ನು ಹಿಡಿಯುವದಕ್ಕಾಗಿ ಅವನ ಬೆನ್ನುಹತ್ತಿದನು.

---

## ೩೫. ಸಾಧು ಮುಚಕುಂದನು.

ಈ ಪ್ರಕಾರ ಕೃಷ್ಣನು ಮುಂದೆ ಓಡುತ್ತಿರುವಾಗ ಕಾಲಯವನನು ಅವನ ಬೆನ್ನು ಹತ್ತಿರಲು ಅವರಿಬ್ಬರು ಒಂದು ಗುಹೆಯೊಳಗೆ ಪ್ರವೇಶಿಸಿದರು. ಅಲ್ಲಿ ಕತ್ತಲವಿದ್ದುದರಿಂದ ಕಾಲಯವನನಿಗೆ ತನ್ನ ಮುಂದೆ ಹೋದ ಕೃಷ್ಣನು ಕಾಣಿಸಲಿಲ್ಲ. ಅದೇಹೊತ್ತಿನಲ್ಲಿ ಆ ಗುಹೆಯೊಳಗೆ ಒಬ್ಬ ಸಾಧು ಪುರುಷನು ಮಲಗಿಕೊಂಡಿದ್ದನು. ಅವನನ್ನು ನೋಡಿ ಕಾಲಯವನನು ಕೃಷ್ಣನೇ ಸಾ

ಧು ಪುರುಷನ ಕಪಟ ವೇಷದಿಂದ ಮಲಗಿ ಕೊಂಡಿರಬಹುದೆಂದು ತಿಳಿದು ಆ ವನಿಗೆ ಕಾಲಿನಿಂದ ಒದ್ದನು. ಇದರಿಂದ ಆ ಸಾಧುವು ಸಿಟ್ಟಿನಿಂದ ಮೇಲಕ್ಕೆ ಎದ್ದು ತನ್ನ ನೇತ್ರಕಟಾಕ್ಷದಿಂದ ಕಾಲಯವನನ್ನು ಸುಟ್ಟು ಭಸ್ಮ ಮಾಡಿದನು. ಈ ಪ್ರಕಾರ ಮಲಗಿಕೊಂಡಿದ್ದ ಸಾಧುಪುರುಷನು ಇಕ್ಷ್ವಾಕುವಂಶದಲ್ಲಿಯ ಪ್ರಸಿದ್ಧ ಅರಸನಾದ ಮಾಂಧಾತಾ ಎಂಬವನ ಮಗನಾದ ಮುಚಕುಂದನಿದ್ದನು. ದೇವದಾನವರ ಯುದ್ಧವು ನಡೆದಾಗ್ಗೆ ಇವನು ದೇವತೆಗಳಿಗೆ ಉತ್ತಮ ಪ್ರಕಾರದಿಂದ ಸಹಾಯಮಾಡಿದ ನಂತರ ವಿಶ್ರಾಂತಿಯನ್ನು ತೆಗೆದುಕೊಳ್ಳುವದಕ್ಕಾಗಿ ಈ ಗುಹೆಯಲ್ಲಿ ಬಂದು ಮಲಗಿಕೊಂಡಿದ್ದನು. ಹಾಗೂ ತನ್ನ ನಿದ್ರಾಭಂಗ ಮಾಡಿದವರಿಗೆ ಬರಿಯ ನೇತ್ರಕಟಾಕ್ಷದಿಂದ ಸುಟ್ಟು ಭಸ್ಮ ಮಾಡುವ ವರವನ್ನು ದೇವತೆಗಳಿಂದ ಪಡೆದುಕೊಂಡಿದ್ದನು. ಈ ಪ್ರಕಾರ ಮುಚಕುಂದನ ಕೈಯಿಂದ ಕಾಲಯವನನು ನಾಶಹೊಂದಿದ ತರುವಾಯ ಕೃಷ್ಣನು ಅವನಿಗೆ ಬೆಟ್ಟಿಯಾಗಿ ಯಾವತ್ತು ಸಂಗತಿಯನ್ನು ತಿಳುಹಿಸಿದನು. ಆಗಿನಿಂದ ಮುಚಕುಂದನು ಕೃಷ್ಣನ ಪರಮ ಭಕ್ತನಾದನು. ಆಮೇಲೆ ಕೃಷ್ಣನು ಅಲ್ಲಿಂದ ದ್ವಾರಕೆಗೆ ಹೊರಟು ಹೋದನು.

---

## ೩೬ ರುಕ್ಮಿಣೀಸ್ವಯಂವರವು.

ಕೃಷ್ಣನು ದ್ವಾರಕೆಗೆ ಹೊರಟುಹೋದ ವರ್ತಮಾನವನ್ನು ಕೇಳಿದ ತರುವಾಯ ಜರಾಸಂಧನು ದ್ವಾರಕೆಯಮೇಲೆ ಸಾಗಿಹೋದನು. ಆದರೆ ಕೃಷ್ಣನು ಅವನ ಕೂಡ ಯುದ್ಧಮಾಡದೆ ಬಲರಾಮನನ್ನು ಕೂಡಿಕೊಂಡು ಅಲ್ಲಿಂದ ಓಡಿ ಹೋಗಲಿಕ್ಕೆ ಹತ್ತಿದನು. ಅವರಿಬ್ಬರನ್ನು ಹಿಡಿಯಲಿಕ್ಕೆ ಜರಾಸಂಧನು ಅವರ ಬೆನ್ನು ಹತ್ತಿದನು. ಆಗ ಬಲರಾಮ ಮತ್ತು ಕೃಷ್ಣ ಇವರಿಬ್ಬರು ಪ್ರವರ್ಷಣವೆಂಬ ಪರ್ವತವನ್ನೇರಿದರು. ಆಗ ಜರಾಸಂಧನು ಅವರನ್ನು ಸುಟ್ಟುಬಿಡುವದಕ್ಕಾಗಿ ಆ ಪರ್ವತಕ್ಕೆ ನಾಲ್ಕು ಮಗ್ಗಲದಿಂದ ಬೆಂಕಿ ಹಚ್ಚಿ ಇನ್ನು ಮೇಲೆ ಇವರು ನಿ

ಕ್ಷಯದಿಂದ ಸಾಯುವರೆಂದು ತನ್ನ ಮನಸ್ಸಿನಲ್ಲಿ ತಿಳಿದುಕೊಂಡು ಅಲ್ಲಿಂದ ಹೊರಟು ಹೋದನು. ಆಗ ಬಲರಾಮಕೃಷ್ಣರು ಆ ಪರ್ವತದಮೇಲಿಂದ ಕೆಳಗೆ ಹಾರಿಕೊಂಡು ಹೊರಟು ಹೋದರು. ಈ ಪ್ರಕಾರವಾದ ಬಳಿಕ ಬಲರಾಮ ಮತ್ತು ಕೃಷ್ಣರಿಬ್ಬರದೂ ಲಗ್ನವಾಯಿತು. ಬಲರಾಮನಿಗೆ ರೇವತರಾಜನು ತನ್ನ ಮಗಳಾದ ರೇವತಿಯನ್ನು ಕೊಟ್ಟನು. ಆದರೆ ಕೃಷ್ಣನು ಮಾತ್ರ ರುಕ್ಮಿಣಿಯ ಪ್ರಾಪ್ತಿಗಾಗಿ ಬಹಳ ಪ್ರಯಾಸವನ್ನು ಮಾಡಬೇಕಾಯಿತು. ಅದರ ಕಥೆಯು ಕೆಳಗೆ ಬರೆದ ಪ್ರಕಾರ ಇರುತ್ತದೆ:—

ವಿದರ್ಭ ದೇಶದ ಅರಸನಾದ ಭೀಷ್ಮಕನೆಂಬವನಿಗೆ ರುಕ್ಮಿಣಿಯೆಂಬ ಹೆಸರುಳ್ಳ ಒಬ್ಬ ಮಗಳಿದ್ದಳು. ಅವಳು ಲಗ್ನದ ವಯಸ್ಸಿಗೆ ಬಂದಿದ್ದಳು. ಒಂದು ದಿವಸ ಯಾರೋ ಒಬ್ಬರು ಭೀಷ್ಮಕರಾಜನ ಮುಂದೆ ಕೃಷ್ಣನ ಗುಣಗಳನ್ನು ಬಹಳ ಮನೋಹರವಾದ ರೀತಿಯಿಂದ ವರ್ಣಿಸಿದರು. ಇದನ್ನು ರುಕ್ಮಿಣಿಯು ಕೇಳಿ ತಾನು ಕೃಷ್ಣನನ್ನೇ ಲಗ್ನಮಾಡಿ ಕೊಳ್ಳಬೇಕೆಂದು ನಿಶ್ಚಯಿಸಿದಳು. ಇದು ಎಲ್ಲರ ಮನಸ್ಸಿಗೆ ಬಂತು. ಆಕೆಯ ಅಣ್ಣನಾದ ರುಕ್ಮಿಯು ಕೃಷ್ಣನಕೂಡ ದ್ವೇಷಮಾಡುತ್ತಿದ್ದನಾದುದರಿಂದ ಅವನ ಮನಸ್ಸಿಗೆ ಮಾತ್ರ ಇದು ಬರಲಿಲ್ಲ. ಅವನ ಮನಸ್ಸಿನಲ್ಲಿ ರುಕ್ಮಿಣಿಯನ್ನು ಶಿಶುಪಾಲನಿಗೆ ಲಗ್ನ ಮಾಡಿಕೊಡಬೇಕೆಂದು ಇತ್ತು. ಆ ಪ್ರಕಾರ ರುಕ್ಮಿಯು ಹಟವನ್ನು ಹಿಡಿದ ಕಾರಣ ರುಕ್ಮಿಣಿಯು ಒಂದು ಪತ್ರವನ್ನು ಬರೆದು ಅದನ್ನು ಒಬ್ಬ ಬ್ರಾಹ್ಮಣನ ಕಡೆಯಿಂದ ಕೃಷ್ಣನ ಕಡೆಗೆ ಕಳಿಸಿದಳು. ಆ ಪತ್ರದಲ್ಲಿ ಅವಳು ತನ್ನ ಯಾವತ್ತು ಹೃದ್ಗತವನ್ನು ಬರೆದು ತಿಳಿಸಿದಳು. ಅದರಲ್ಲಿ ಅವಳು ಬರೆದದ್ದೇನಂದರೆ:—

"ನನ್ನ ಅಣ್ಣನು ಬಹಳ ದುರಾಗ್ರಹಿಯು ಇದ್ದು ಅವನು ತನ್ನ ಮಾತನ್ನು ಗೆಲಿಸುವ ಯತ್ನ ನಡೆಸಿರುತ್ತಾನೆ. ಲಗ್ನದ ಮುಂಚಿನ ದಿವಸ ನಮ್ಮ ಕುಲಾಚಾರದಂತೆ ನಾನು ಮತ್ತು ಶಿಶುಪಾಲನು ಅಂಬಿಕೆಯ ದರ್ಶನಕ್ಕೆ ಹೊಗುತ್ತೇವೆ. ಅಲ್ಲಿ ನೀವು ಬಂದು ಯಾವತ್ತರನ್ನು ಗೆದ್ದು ನನ್ನನ್ನು ತೆಗೆದುಕೊಂಡು ಹೋಗಬೇಕು" ಆ ಪತ್ರಕ್ಕನುಸರಿಸಿ ಕೃಷ್ಣನು ಮಾಡಿದನು. ರುಕ್ಮಿಣಿಯ ಲಗ್ನ ಸಮಾರಂಭದ ಯಾವತ್ತು ಸಿದ್ಧತೆಯು ಆದ ಬಳಿಕ ಅವಳು ಮತ್ತು ಶಿಶುಪಾಲನು ( ಮದಿಮಗಳು ಮತ್ತು ಮದಿಮಗನು ) ಅಂಬಿಕೆಯ ದರ್ಶನಕ್ಕೆ ಹೋ

ದಾಗ್ಗೆ ಕೃಷ್ಣನು ಜಪ್ಪಿಸಿ ಹೋಗಿ ರುಕ್ಮಿಣಿಯನ್ನು ತೆಗೆದುಕೊಂಡು ಹೋದನು. ಲಗ್ನಕ್ಕೆ ನೆರೆದ ರಾಜರೆಲ್ಲರು ಕೃಷ್ಣನನ್ನು ಹಿಡಿಯಲಿಕ್ಕೆ ಯತ್ನ ಮಾಡಹತ್ತಿದರು. ಇಷ್ಟರಲ್ಲಿ ಬಲರಾಮನು ತನ್ನ ಸೈನ್ಯವನ್ನು ತೆಗೆದುಕೊಂಡು ಬಂದನು. ಆಗ ಬಲರಾಮ ಮತ್ತು ಕೃಷ್ಣರಿಬ್ಬರೂ ಕೂಡಿ ಎಲ್ಲರನ್ನು ಪರಾಭವ ಮಾಡಿದರು. ಆಗ ಭೀಷ್ಮಕರಾಜನು ಎಲ್ಲರ ಸಮಕ್ಷ ಯೋಗ್ಯ ರೀತಿಯಿಂದ ರುಕ್ಮಿಣಿಯನ್ನು ಕೃಷ್ಣನಿಗೆ ಲಗ್ನಮಾಡಿಕೊಟ್ಟನು. ರುಕ್ಮಿಣಿಗೆ ಹತ್ತು ಮಂದಿ ಮಕ್ಕಳಾದರು. ಅವರಲ್ಲಿ ಪ್ರದ್ಯುಮ್ನನೆಂಬವನು ಬಹಳ ಪರಾಕ್ರಮಿಯು ಇದ್ದನು. ಅವನು ಶಂಬರಾಸುರನನ್ನು ಕೊಂದನು.

---

## ೩೭. ಕೃಷ್ಣನ ಮೇಲೆ ಬಂದ ಅಪವಾದವು.

ಸತ್ರಾಜಿತನೆಂಬ ಒಬ್ಬ ಯಾದವನು ಇರುತ್ತಿದ್ದನು. ಅವನಿಗೆ ಸೂರ್ಯನು ಒಂದು ದಿವ್ಯ ತೇಜಸ್ವಿಮಣಿಯನ್ನು ಕೊಟ್ಟಿದ್ದನು. ಅದನ್ನು ಕೃಷ್ಣನು ತನಗೆ ಕೊಡೆಂದು ಸತ್ರಾಜಿತನಿಗೆ ಬೇಡಿದನು. ಆಗ ಅವನು ಅದನ್ನು ಕೊಡಲಿಲ್ಲ. ಮುಂದೆ ಒಂದು ದಿವಸ ಸತ್ರಾಜಿತನ ತಮ್ಮನಾದ ಪ್ರಸೇನನು ಆ ಮಣಿಯನ್ನು ಕೊರಳೊಳಗೆ ಹಾಕಿಕೊಂಡು ಬೇಟೆಯನ್ನಾಡಲಿಕ್ಕೆ ಹೋದಾಗ್ಗೆ ಒಂದು ಸಿಂಹವು ಅವನನ್ನು ಕೊಂದು ಆ ಮಣಿಯನ್ನು ಅವನ ಕೊರಳೊಳಗಿಂದ ತೆಗೆದುಕೊಂಡು ಹೋಯಿತು. ಆ ಸಿಂಹವನ್ನು ಜಾಂಬವಾನ ಎಂಬ ಅಸ್ವಲವು ಕೊಂದು ಆ ಮಣಿಯನ್ನು ತನ್ನ ಮನೆಗೆ ಒಯ್ದು ತನ್ನ ಹುಡುಗರ ಕೈಯಲ್ಲಿ ಆಡಲಿಕ್ಕೆ ಕೊಟ್ಟಿತು. ಪ್ರಸೇನನು ಬೇಟೆಯಾಡಲಿಕ್ಕೆ ಹೋಗಿ ಬಹಳ ಹೊತ್ತು ಆದಾಗ್ಯೂ ತಿರುಗಿ ಬರಲಿಲ್ಲವೆಂದು ನೋಡಿ ಸತ್ರಾಜಿತನಿಗೆ ತನ್ನ ತಮ್ಮನನ್ನು ಕೃಷ್ಣನೇ ಮಣಿಯಸಲುವಾಗಿ ಕೊಂದಿರಬಹುದೆಂದು ಸಂಶಯವನ್ನು ತೆಗೆದುಕೊಂಡನು. ಹಾಗೂ ಈ ತನ್ನ ಸಂಶಯವನ್ನು ಅನೇಕ ಜನರ ಮುಂದೆ ಆಡಿ ತೋರಿಸಿದನು. ಈ ವರ್ತಮಾನವು ಕೃಷ್ಣನಿಗೆ ತಿಳಿಯಿತು. ಆಗ ಕೃಷ್ಣನು ತನ್ನ ಮೇಲೆ ಬಂದಿದ್ದ ಈ ಸುಳ್ಳು ಆರೋಪವನ್ನು ಕಳೆದುಕೊಳ್ಳುವದಕ್ಕಾಗಿ ಪ್ರಸೇನನ ಶೋಧಮಾಡ

ಬೇಕೆಂದು ಅಡವಿಯೊಳಗೆ ಅಡ್ಡಾಡುತ್ತಿರುವಾಗ ಒಂದು ಸಿಂಹವು ಪ್ರಸೇನನನ್ನು ಕೊಂದದ್ದಾಗಿಯೂ ಆ ಸಿಂಹವನ್ನು ಜಾಂಬವಾನ ಅಶ್ವಲವು ಕೊಂದದ್ದಾಗಿಯೂ ತಿಳಿದು ಬಂತು. ಆಗ ಕೃಷ್ಣನು ಜಾಂಬವಾನನ ಗುಹೆಯ ಹತ್ತರ ಹೋಗಿ ತನ್ನ ಸಂಗಡ ಕರೆದುಕೊಂಡು ಹೋಗಿದ್ದ ಜನರನ್ನು ಆ ಗುಹೆಯ ಹೊರಗೆ ನಿಲ್ಲಿಸಿ ತಾನೊಬ್ಬನೇ ಆ ಗುಹೆಯೊಳಗೆ ಪ್ರವೇಶಿಸಿದನು. ಆ ಗುಹೆಯಲ್ಲಿ ಒಬ್ಬ ಹುಡುಗನು ಆ ತೇಜಸ್ವಿ ಮಣಿಯನ್ನು ತೆಗೆದುಕೊಂಡು ಆಡುವದನ್ನು ಕಂಡು ಕೃಷ್ಣನು ಆ ಮಣಿಯನ್ನು ತೆಗೆದುಕೊಳ್ಳುವದಕ್ಕಾಗಿ ಮುಂದಕ್ಕೆ ಹೋದನು. ಇದು ಜಾಂಬವಾನನಿಗೆ ತಿಳಿದಕೂಡಲೆ ಆ ಜಾಂಬವಾನನು ಓಡುತ್ತ ಆ ಸ್ಥಳಕ್ಕೆ ಬಂದನು. ಅಲ್ಲಿ ಜಾಂಬವಾನನ ಮತ್ತು ಕೃಷ್ಣನ ನಡುವೆ ಯುದ್ಧವು ನಡೆಯಿತು. ಆ ಯುದ್ಧದಲ್ಲಿ ಕೃಷ್ಣನು ಜಾಂಬವಾನನನ್ನು ಪರಾಭವ ಮಾಡಿದನು. ಆಗ ಜಾಂಬವಾನನು ತನ್ನ ಮಗಳಾದ ಜಾಂಬುವತಿಯನ್ನೂ ಆ ಮಣಿಯನ್ನೂ ಕೃಷ್ಣನಿಗೆ ಕೊಟ್ಟು ಕೃಷ್ಣನಿಗೆ ಹೋಗಲಿಕ್ಕೆ ನಿರೂಪಕೊಟ್ಟನು. ಆ ಬಳಿಕ ಕೃಷ್ಣನು ಆ ಮಣಿಯನ್ನು ತೆಗೆದುಕೊಂಡು ಸತ್ರಾಜಿತ ಕಡೆಗೆ ಹೋಗಿ ಈ ಯಾವತ್ತು ಸಂಗತಿಯನ್ನು ವಿವರಿಸಿದನು. ಆಗ ಸತ್ರಾಜಿತನಿಗೆ ತಾನು ವ್ಯರ್ಥವಾಗಿ ಕೃಷ್ಣನಮೇಲೆ ಸಂಶಯ ತೆಗೆದುಕೊಂಡು ಸುಳ್ಳು ಆರೋಪ ಹೊರಿಸಿದ್ದಕ್ಕಾಗಿ ಬಹಳ ವ್ಯಸನವೆನಿಸಿ, ಅವನು ತನ್ನ ಮಗಳಾದ ಸತ್ಯಭಾಮೆಯನ್ನು ಕೃಷ್ಣನಿಗೆ ಕೊಟ್ಟು, ಸ್ಯಮಂತಕಮಣಿಯನ್ನು ತನ್ನ ಅಳಿಯನಿಗೆ ಕಾಣಿಕೆಯಾಗಿ ಕೊಡಲಿಕ್ಕೆ ಹೋದನು. ಆದರೆ ಕೃಷ್ಣನು ಅದನ್ನು ತೆಗೆದುಕೊಳ್ಳಲಿಲ್ಲ.

## ೩೮. ಉಷಾಪರಿಣಯವು.

ಶ್ರೀಕೃಷ್ಣನಿಗೆ ರುಕ್ಮಿಣಿ, ಜಾಂಬವತಿ ಮತ್ತು ಸತ್ಯಭಾಮಾ ಎಂಬ ಮೂರು ಜನ ಹೆಂಡರು ಇದ್ದರು. ಆದರೂ ಶ್ರೀ ಕೃಷ್ಣನು ಇನ್ನೂ ಐದು

ಜನ ಸ್ತ್ರೀಯರನ್ನು ಲಗ್ನ ಮಾಡಿಕೊಂಡನು. ಇಷ್ಟರಿಂದ ತೀರಲಿಲ್ಲ. ಭೌಮಾಸುರನೆಂಬ ದುಷ್ಟ ದೈತ್ಯನು ಹದಿನಾರು ಸಾವಿರ ಒಂದು ನೂರು ಲಗ್ನದ ಪ್ರಾಯಕ್ಕೆ ಬಂದಂಥ ತರುಣ ಹುಡಿಗಿಯರನ್ನು ಹಿಡಿದು ತಂದು ಬಂಧನದಲ್ಲಿಟ್ಟಿದ್ದನು. ಆದರೆ ಕೃಷ್ಣನು ಭೌಮಾಸುರನನ್ನು ಕೊಂದು ಆ ಎಲ್ಲ ಹುಡುಗಿಯರನ್ನು ಬಂಧಮುಕ್ತ ಮಾಡಿದನು. ಬಳಿಕ ಅವರೆಲ್ಲರು ತಾವಾಗಿಯೇ ಕೃಷ್ಣನನ್ನು ಲಗ್ನ ಮಾಡಿಕೊಳ್ಳಲಿಕ್ಕೆ ಸಿದ್ಧರಾದರು. ಅದುದರಿಂದ ಕೃಷ್ಣನು ಅವರೆಲ್ಲರನ್ನು ಲಗ್ನ ಮಾಡಿಕೊಂಡನು. ಕೃಷ್ಣನಿಗೆ ಈ ಎಲ್ಲ ಸ್ತ್ರೀಯರಿಂದ ಅನೇಕಮಂದಿ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಆದರು. ಈ ರೀತಿಯಿಂದ ಕೃಷ್ಣನ ಬಳಗವು ಬಹಳ ದೊಡ್ಡದಾಯಿತು.

ಕೃಷ್ಣನ ಮಗನಾದ ಪ್ರದ್ಯುಮ್ನನಿಗೆ ಒಬ್ಬ ಮಗನಿದ್ದನು. ಅವನ ಹೆಸರು ಅನಿರುದ್ಧನು. ಈ ಅನಿರುದ್ಧನು ಬಾಣಾಸುರನ ಮಗಳಾದ ಉಷೆಯನ್ನು ಲಗ್ನ ಮಾಡಿಕೊಂಡನು. ಇವನ ಲಗ್ನದ ಕಥೆಯು ಬಹಳ ಮನೋರಂಜಕವಿರುತ್ತದೆ. ಅದು ಹೇಗೆಂದರೆ:—

ಬಾಣಾಸುರನೆಂಬವನು ಶೋಣಿತಪುರದ ರಾಜನಿದ್ದನು. ಅವನಿಗೆ ತನ್ನಷ್ಟು ಬಲಶಾಲಿಯು ಯಾರೂ ಇಲ್ಲವೆಂಬ ಗರ್ವವು ಬಹಳವಿತ್ತು. ಅವನಿಗೆ ತನ್ನ ಸಂಗಡ ಯುದ್ಧಮಾಡುವದಕ್ಕೆ ತನ್ನಂಥ ವೀರನು ಯಾವನಾದರೂ ದೊರಕಬೇಕೆಂದು ಬಹಳ ಹಂಬಲವಿತ್ತು. ಈ ಅವನ ಹಂಬಲವು ಬೇಗನೆ ಕೈಗೂಡಿತು. ಅವನ ಮಗಳಾದ ಉಷೆಯು ಒಂದು ದಿವಸ ತನ್ನ ಸ್ವಪ್ನದಲ್ಲಿ ಅನಿರುದ್ಧನನ್ನು ನೋಡಿದಳು. ಅವನು ಅತ್ಯಂತ ಸುಂದರನಿದ್ದನು. ಅವನನ್ನೇ ತಾನು ಲಗ್ನಮಾಡಿಕೊಳ್ಳಬೇಕೆಂದು ಉಷೆಯು ತನ್ನ ಮನಸ್ಸಿನಲ್ಲಿ ನಿಶ್ಚಯಮಾಡಿದಳು. ಆದರೆ ಅವಳು ಈ ತನ್ನ ಅಪೇಕ್ಷೆಯನ್ನು ತನ್ನ ತಂದೆಗೆ ತಿಳಿಸದೆ ತನ್ನ ಗೆಳತಿಯೂ ಪ್ರಧಾನನ ಮಗಳೂ ಆದ ಚಿತ್ರರೇಖೆಗೆ ತಿಳಿಸಿದಳು. ಚಿತ್ರರೇಖೆಯು ಅತ್ಯಂತ ಚತುರಳಿದ್ದಳು. ಒಂದಾನೊಂದು ರಾತ್ರಿ ದ್ವಾರಕೆಯೊಳಗೆ ಅನಿರುದ್ಧನು ತನ್ನ ಅರಮನೆಯಲ್ಲಿ ಪರಿಯಂಕ (ಪಲಂಗ)ದ ಮೇಲೆ ಮಲಗಿಕೊಂಡು ಗಾಢ ನಿದ್ರೆಯನ್ನು ಮಾಡುತ್ತಿದ್ದಾಗ ಚಿತ್ರರೇಖೆಯು ಏನೋ

ಒಂದು ಯುಕ್ತಿಯನ್ನು ಮಾಡಿ ಅನಿರುದ್ಧನನ್ನು ಅವನು ಮಲಗಿಕೊಂಡಿದ್ದ ಪರಿಯಂಕ ಸಹಿತವಾಗಿ ಉಷೆಯ ಮಂದಿರದಲ್ಲಿ ತಂದು ಇಟ್ಟಳು. ಮುಂದೆ ಅನಿರುದ್ಧನು ನಿದ್ರೆಯಿಂದ ಎಚ್ಚತ್ತ ಮೇಲೆ ಅವನಿಗೆ ಕೆಲವು ಹೊತ್ತು ಬಹಳ ಆಶ್ಚರ್ಯವೆನಿಸಿತು. ಆದರೆ ಹಿಂದುಗಡೆ ಅವನಿಗೆ ನಿಜಸ್ಥಿತಿಯು ತಿಳಿದ ನಂತರ ಅವನು ಉಷೆಯ ಮಂದಿರದಲ್ಲಿ ಸುಖದಿಂದ ಇರಹತ್ತಿದನು.

ಈ ಪ್ರಕಾರ ಅವನು ಕೆಲವು ದಿವಸ ಉಷೆಯ ಸಂಗಡ ಸುಖದಿಂದ ಇರಲಿಕ್ಕೆ ಹತ್ತಿದ ಬಳಿಕ, ಈ ವರ್ತಮಾನವು ಬಾಣಾಸುರನಿಗೆ ತಿಳಿಯಬಂತು. ಆಗ ಅವನು ತನ್ನ ಅಪ್ಪಣೆಯಿಲ್ಲದೆ ತನ್ನ ಮಗಳ ಅಂತಃಪುರದಲ್ಲಿ ಪ್ರವೇಶ ಮಾಡಿದಂಥ ಪರಕೀಯ ಗೃಹಸ್ಥನಿಗೆ ಯೋಗ್ಯ ಶಿಕ್ಷೆಯನ್ನು ಮಾಡಬೇಕೆಂದು ಸಿಟ್ಟಿನಿಂದ ಹಲ್ಲುದವಡೆಗಳನ್ನು ಕಚ್ಚುತ್ತ ಉಷೆಯ ಅಂತಃಪುರದೊಳಗೆ ಹೋದನು. ಅಲ್ಲಿ ಅನಿರುದ್ಧನ ಹತ್ತರ ಶಸ್ತ್ರಗಳು ಏನೂ ಇದ್ದಿಲ್ಲ. ಆದರೆ ಆ ಅಂತಃಪುರದ ಬಾಗಿಲದ ಹತ್ತರ ಒಂದು ಕಬ್ಬಿಣದ ಅಗಳಿಯು ಇತ್ತು. ಅದನ್ನು ತೆಗೆದುಕೊಂಡು ಅವನು ಬಾಣಾಸುರನ ಸಂಗಡ ಯುದ್ಧಮಾಡಿದನು ಆದರೊಳಗೆ ಅವನಿಗೆ ಯಶಸ್ಸು ಬರಲಿಲ್ಲ. ಬಾಣಾಸುರನು ಅವನನ್ನು ಹಿಡಿದು ಕಟ್ಟಿಹಾಕಿದನು.

ಅನಿರುದ್ಧನು ಮಲಗಿಕೊಂಡಾಗ ಒಮ್ಮಿಂದೊಮ್ಮೆ ಅದೃಶ್ಯನಾದ ವರ್ತಮಾನವನ್ನು ಕೇಳಿ ದ್ವಾರಿಕೆಯಲ್ಲಿದ್ದ ಎಲ್ಲ ಯಾದವರಿಗೆ ಬಹಳ ಆಶ್ಚರ್ಯವೆನಿಸಿತು. ಆದರೆ ಅವರು ಮುಂದೆ ಶೋಧಮಾಡಲಾಗಿ ಅವರಿಗೆ ಅನಿರುದ್ಧನನ್ನು ಬಾಣಾಸುರನು ಕಟ್ಟಿಹಾಕಿರುವನೆಂದು ಗೊತ್ತಾಯಿತು. ಆಗ ಬಲರಾಮ ಮತ್ತು ಕೃಷ್ಣ ಈ ಇಬ್ಬರೂ ತಮ್ಮ ಯಾದವಸೈನ್ಯವನ್ನು ತೆಗೆದುಕೊಂಡು ಶೋಣಿತಪುರಕ್ಕೆ ಹೋಗಿ, ಬಾಣಾಸುರನ ಸಂಗಡ ಯುದ್ಧಮಾಡಿ, ಅವನನ್ನು ಯುದ್ಧದಲ್ಲಿ ಸೋಲಿಸಿದರು. ಆ ಬಳಿಕ ಬಾಣಾಸುರನು ತನ್ನ ಮಗಳಾದ ಉಷೆಯನ್ನು ಅನಿರುದ್ಧನಿಗೆ ಲಗ್ನಮಾಡಿಕೊಟ್ಟು ಅವರಿಬ್ಬರನ್ನೂ ದೊಡ್ಡ ಸಮಾರಂಭದಿಂದ ದ್ವಾರಕೆಗೆ ಕಳುಹಿಸಿದನು.

## ೩೯. ಜರಾಸಂಧವಧ.

ಈ ಪ್ರಕಾರ ಕೃಷ್ಣನು ತನ್ನ ಅಣ್ಣತಮ್ಮಂದಿರು, ಅಕ್ಕತಂಗಿಯರು, ಮಕ್ಕಳು, ಮೊಮ್ಮಕ್ಕಳು, ಮತ್ತು ಮರಿಮಕ್ಕಳು ಮೊದಲಾದವರನ್ನು ಕೂಡಿಕೊಂಡು ಸುಖದಿಂದ ಇರುತ್ತಿದ್ದಾಗ್ಗೆ ಮಗಧ ದೇಶದ ರಾಜನಾದ ಜರಾಸಂಧನಿಂದ ಕಾರಾಗೃಹದಲ್ಲಿ ಇಡಲ್ಪಟ್ಟಿದ್ದ ೨೦ ಸಾವಿರ ಮಂದಿ ರಾಜರು "ನೀನು ನಮ್ಮನ್ನು ಈ ದುಷ್ಟ ರಾಜನ ಕಾರಾಗೃಹದಿಂದ ಮುಕ್ತಮಾಡಿದರೆ ನಮ್ಮ ಜೀವವು ಉಳಿಯುವದು" ಎಂಬ ನಿರೂಪವನ್ನು ಗುಪ್ತ ರೀತಿಯಿಂದ ಕೃಷ್ಣನ ಕಡೆಗೆ ಕಳುಹಿಸಿದರು. ಅದೇ ಸಮಯಕ್ಕೆ ಪಾಂಡವರ ಅಗ್ರಜನಾದ ಧರ್ಮರಾಜನು ರಾಜಸೂಯಯಜ್ಞವನ್ನು ಮಾಡಬೇಕೆಂದು ಇಚ್ಛೈಸಿ ಆ ಬಗ್ಗೆ ಕೃಷ್ಣನ ಆಲೋಚನೆಯನ್ನು ತೆಗೆದುಕೊಳ್ಳುವದಕ್ಕಾಗಿ ಅವನನ್ನು ಕರೆಕಳುಹಿಸಿದನು. ಆದುದರಿಂದ ಕೃಷ್ಣನು ಮೊದಲಿಗೆ ಇಂದ್ರಪ್ರಸ್ಥ ನಗರಕ್ಕೆ ಹೋಗಿ ಧರ್ಮರಾಜನಿಗೆ ಬೆಟ್ಟಿಯಾಗಿ, ಅಲ್ಲಿಂದ ಆ ಕಾರಾಗೃಹದಲ್ಲಿದ್ದ ರಾಜರಿಗೆ "ನಾನು ನಿಮ್ಮ ಸಹಾಯಕ್ಕಾಗಿ ಬರುತ್ತೇನೆ. ನೀವು ಚಿಂತೆಮಾಡಬೇಡಿರಿ" ಎಂದು ಹೇಳಿ ಕಳುಹಿಸಿದನು. ಆಮೇಲೆ ಕೃಷ್ಣನು ಭೀಮನನ್ನು ತನ್ನ ಸಂಗಡ ಮಗಧ ದೇಶಕ್ಕೆ ಕರೆದುಕೊಂಡು ಹೋಗಿ ಅವನ ಕೈಯಿಂದ ಜರಾಸಂಧನನ್ನು ಕೊಲ್ಲಿಸಿ ಆ ೨೦ ಸಾವಿರ ರಾಜರನ್ನು ಕಾರಾಗೃಹದಿಂದ ಮುಕ್ತಮಾಡಿದನು. ಅಲ್ಲಿಂದ ಕೃಷ್ಣನು ತಿರುಗಿ ಹೋದಬಳಿಕ ರಾಜಸೂಯಯಜ್ಞವು ಪ್ರಾರಂಭವಾಯಿತು. ಆ ರಾಜಸೂಯಯಜ್ಞದ ಪ್ರಸಂಗದಲ್ಲಿ ಶಿಶುಪಾಲನು ಕೃಷ್ಣನ ನಿಂದೆಯನ್ನು ಮಾಡಿದ್ದರಿಂದ ಕೃಷ್ಣನು ಅವನನ್ನು ಕೊಂದ ಸಂಗತಿಯೂ, ಪಾಂಡವರಿಗೆ ಅವರ ರಾಜ್ಯದಲ್ಲಿ ಯೋಗ್ಯ ಪಾಲು ಕೊಡಿಸುವ ಕುರಿತು ಕೃಷ್ಣನು ಸಾಮೋಪಾಯದ ಪ್ರಯತ್ನ ನಡೆಸಲು ಅವನ ಪ್ರಯತ್ನವು ದುರ್ಯೋಧನನ ಉನ್ಮತ್ತತನದಿಂದ ನಿಷ್ಫಲವಾದ ಸಂಗತಿಯೂ, ಆ ಯುದ್ಧದಲ್ಲಿ ಕೃಷ್ಣನು ಅರ್ಜುನನ ಸಾರಥಿಯಾಗಿ ಅವನಿಗೆ ಬೇರೆ ಬೇರೆ ಪ್ರಸಂಗಗಳಲ್ಲಿ ತನ್ನ ಯುಕ್ತಿಗಳಿಂದ ಸಹಾಯ ಮಾಡಿ ಪಾಂಡವರನ್ನು ರಕ್ಷಣ ಮಾಡಿದ

ಸಂಗತಿಯೂ ಬಾಲಭಾರತದಲ್ಲಿ ವರ್ಣಿಸಲ್ಪಟ್ಟಿರುತ್ತವೆ. ಅವುಗಳನ್ನು ಇಲ್ಲಿ ಪುನಃ ಬರೆಯುವ ಆಗತ್ಯವಿಲ್ಲ. ಆವಶ್ಯಕರು ಬಾಲಭಾರತವನ್ನು ಓದಬೇಕು.

---

# ೪೦. ಮಿತ್ರಪ್ರೇಮ.

## ( ಸುದಾಮನ ಕಥೆಯು. )

**ತನ್ನ ಮಿತ್ರರೆಂದು ತಿಳಿದುಕೊಂಡವರ ಅಥವಾ ತನ್ನ ಮೇಲೆ ವಿಶ್ವಾಸವಿಟ್ಟು ನಡೆದುಕೊಂಡವರ ಕಲ್ಯಾಣಕ್ಕಾಗಿ ಕೃಷ್ಣನು ಬೇಕಾದಂಥ ಸಾಮಾನ್ಯ ಕೆಲಸವನ್ನು ಮಾಡಲಿಕ್ಕೆ ಸಹ ಹಿಂದುಮುಂದೆ ನೋಡುತ್ತಿದ್ದಿಲ್ಲ. ಇದೇ ನಿಜವಾದ ಪ್ರೇಮದ ಕುರುಹು ಎಂಬುವದು ನಿರ್ವಿವಾದವಾಗಿದೆ.** ಪಾಂಡವರ ಸಲುವಾಗಿ ಕೃಷ್ಣನು ತನ್ನ ಜೀವವನ್ನು ಎಷ್ಟು ಪರಿಯಿಂದ ಕಷ್ಟಗೊಳಿಸಿದನೆಂಬುವದು ಭಾರತದಲ್ಲಿ ಸಂಪೂರ್ಣವಾಗಿ ವರ್ಣಿಸಲ್ಪಟ್ಟಿರುತ್ತದೆ. ಶ್ರೀಕೃಷ್ಣನ ಮಿತ್ರ ಪ್ರೇಮದ ಇನ್ನೊಂದು ಚಮತ್ಕಾರಿಕ ಉದಾಹರಣವನ್ನು ಇಲ್ಲಿ ಹೇಳುತ್ತೇವೆ. ಅದೇನಂದರೆ:—

ಕೃಷ್ಣನು ಚಿಕ್ಕವನಿದ್ದಾಗ್ಗೆ ಸಂದೀಪನಿ ಎಂಬ ಗುರುವಿನ ಬಳಿಯಲ್ಲಿ ವಿದ್ಯಾಭ್ಯಾಸ ಮಾಡಲಿಕ್ಕೆ ಇರುತ್ತಿದ್ದನು. ಆಗ ಅವನ ಸಂಗಡ ಒಬ್ಬ ಬ್ರಾಹ್ಮಣನ ಮಗನಾದ ಸುದಾಮನೆಂಬವನು ಆ ಗುರುವಿನ ಹತ್ತರ ವಿದ್ಯಾಭ್ಯಾಸ ಮಾಡುತ್ತಿದ್ದನು. ಆ ಸುದಾಮನು ಕೃಷ್ಣನ ಜೀವದ ಗೆಳೆಯನಿದ್ದನು. ಮುಂದೆ ಕೃಷ್ಣನು ಮಥುರೆಗೆ ಹೋದ ಬಳಿಕ ಸುದಾಮನು ತನ್ನ ಮನೆಗೆ ಹೋದನು. ಆ ಮೇಲೆ ಎಷ್ಟೋ ವರ್ಷಗಳ ಪರಿಯಂತರ ಒಬ್ಬರಿಗೊಬ್ಬರು ಭೆಟ್ಟಿಯಾಗಿದ್ದಿಲ್ಲ. ಇತ್ತಲಾ ಕೃಷ್ಣನ ವೈಭವವು ಹೆಚ್ಚಾಗುತ್ತ ನಡೆದು ಅವನ ಕೀರ್ತಿಯು ನಾಲ್ಕೂ ಕಡೆಗೆ ಹಬ್ಬಿತು. ಈ ವರ್ತಮಾನವನ್ನು ಕೇಳಿ ಸುದಾಮನಿಗೆ ತನ್ನ ಮಿತ್ರನ ಉತ್ಕರ್ಷದ ಬಗ್ಗೆ ಪರಮಾವಧಿ ಸಂತೋಷವಾಯಿತು. ಸುದಾಮನು

ಬಹಳ ವಿದ್ವಾಂಸನೂ, ಸುಶೀಲನೂ, ಸದ್ಗುಣಿಯೂ ಇದ್ದು ಬಹಳ ಬಡವನಿದ್ದನು. ಆದರೂ ಅವನು ತನಗೆ ದೊರಕಿದ್ದರಲ್ಲಿಯೇ ತೃಪ್ತಿಯನ್ನು ಹೊಂದಿ ಸುಖದಿಂದ ಕಾಲಕಳೆಯುತ್ತಿದ್ದನು. ಅವನ ಹೆಂಡತಿಯಾದರೂ ಅವನಂತೆಯೇ ಸದಾಚರಣಿಯು ಇದ್ದಳು. ಆದರೂ ಅವಳು ತನಗೆ ಬಡತನದಮೂಲಕ ಹೊಟ್ಟೆತುಂಬ ಅನ್ನವೂ ಮೈತುಂಬ ವಸ್ತ್ರವೂ ಇಲ್ಲದ್ದರಿಂದ ಬಹಳಚಿಂತೆಮಾಡುತ್ತಿದ್ದಳು. ಅವಳಿಗೆ ತನ್ನ ಗಂಡನು ಮತ್ತು ಕೃಷ್ಣನು ಬಾಲ್ಯಸ್ನೇಹಿತರೆಂತಲೂ ಅವರು ಒಬ್ಬರಿಗೊಬ್ಬರು ಬಹಳ ಪ್ರೀತಿ ಮಾಡುತ್ತಾರೆಂತಲೂ ಗೊತ್ತಿತ್ತು. ಮೇಲಾಗಿ ಅವಳಿಗೆ ತನ್ನ ಗಂಡನು ಕೃಷ್ಣನ ದರ್ಶನಕ್ಕೆ ಹೋದಲ್ಲಿ ಅವನ ಕೃಪಾಕಟಾಕ್ಷದಿಂದ ತಮ್ಮ ಬಡತನವು ಒಂದು ಕ್ಷಣದೊಳಗೆ ಹಿಂಗುವದೆಂದು ಪೂರ್ಣ ವಿಶ್ವಾಸವಿತ್ತು. ಆದುದರಿಂದ ಅವಳು ಮೇಲಿಂದಮೇಲೆ ತನ್ನ ಗಂಡಗೆ ಕೃಷ್ಣನ ದರ್ಶನಕ್ಕೆ ಹೋಗಿಬನ್ನಿರೆಂದು ಮಿತಿಮೀರಿ ಉಪದ್ರವವನ್ನು ಕೊಡುತ್ತಿದ್ದಳು. ಆದರೆ ಸುದಾಮನು ಅನೇಕ ದಿವಸಗಳ ತನಕ ತನ್ನ ಹೆಂಡತಿಯ ಮಾತನ್ನು ತನ್ನ ಕಿವಿಯೊಳಗೆ ಹಾಕಿಕೊಳ್ಳಲಿಲ್ಲ. ಒಂದು ದಿವಸ ಅವನು ದ್ರವ್ಯದ ಆಶೆಯಿಂದಲ್ಲದಿದ್ದರೂ ಒಮ್ಮೆ ತನ್ನ ಬಾಲ್ಯಸಖನಾದ ಕೃಷ್ಣನನ್ನು ಕಣ್ಣುತುಂಬ ನೋಡಿ ಬರಬೇಕೆಂದು ತನ್ನ ಮನಸ್ಸಿನಲ್ಲಿ ನಿಶ್ಚಯಮಾಡಿ "ನಾನು ಬಹಳ ದಿವಸಗಳ ನಂತರ ಮಿತ್ರನ ದರ್ಶನಕ್ಕೆಹೋಗುವ ಯೋಗವು ಬಂದಿರುತ್ತದೆ. ಅಂದಮೇಲೆ ಮಿತ್ರನಿಗೆ ಕೊಡಲಿಕ್ಕೆ ನನ್ನ ಸಂಗಡ ಏನು ಒಯ್ಯಲಿ?" ಎಂದು ತನ್ನ ಮನಸ್ಸಿನೊಳಗೆ ಬಹಳ ಹೊತ್ತು ವಿಚಾರಮಾಡಿದನು. ಆದರೆ ಅವನ ಹತ್ತರ ಕೃಷ್ಣನಿಗೆ ಒಯ್ದು ಕೊಡಲಿಕ್ಕೆ ಯಾವದೂ ಪದಾರ್ಥವು ಇದ್ದಿಲ್ಲ. ಆಗ ಅವನ ಹೆಂಡತಿಯು ನೆರೆಹೊರೆಯವರ ಹತ್ತರ ಒಂದು ಮುಷ್ಟಿತುಂಬ ಅವಲಕ್ಕಿಯನ್ನು ಬೇಡಿ ತಂದು ಅವನ ದೋತರದ ಸೆರಗಿನಲ್ಲಿ ಕಟ್ಟಿ ಕೊಟ್ಟಳು. ಅದನ್ನು ಸುದಾಮನು ತೆಗೆದುಕೊಂಡು ದ್ವಾರಕೆಗೆ ಹೋಗಿ ಮುಟ್ಟಿ, ಕೆಲವು ಬ್ರಾಹ್ಮಣರ ಸಂಗಡ ಆ ನಗರವನ್ನು ಪ್ರವೇಶಿಸಿ, ಕೃಷ್ಣನನ್ನು ಶೋಧ ಮಾಡುತ್ತ, ರುಕ್ಮಿಣಿಯ ಮಂದಿರದಲ್ಲಿ ಕೃಷ್ಣನು ಕುಳಿತಿರುವಾಗ ಅವನ ದರ್ಶನಕ್ಕೆ ಹೋದನು. ಆಗ ಕೃಷ್ಣನು ಸುದಾಮನನ್ನು ನೋಡಿ ಲಗಬಗೆಯಿಂದ ಮುಂದಕ್ಕೆ ಎದ್ದು ಬಂದು ತನ್ನ ಮಿತ್ರನಿಗೆ ಆಲಿಂಗನ ಕೊಟ್ಟು, ಅವನ ಕಾಲುಗಳನ್ನು

ತೊಳೆದು, ಅವನಿಗೆ ಸುಗಂಧದ್ರವ್ಯಗಳನ್ನು ಲೇಪಿಸಿದನು. ಕೃಷ್ಣನು ಇಂಥ ದರಿದ್ರ ಬ್ರಾಹ್ಮಣನಿಗೆ ಇಷ್ಟೇಕೆ ಆದರವನ್ನು ಮಾಡುತ್ತಾನೆಂಬುವದು ಅಲ್ಲಿ ಯಾರಿಗೂ ತಿಳಿಯಲಿಲ್ಲ. ಕೃಷ್ಣನ ಮತ್ತು ಸುದಾಮನ ನಡುವೆ ಬಹಳೊತ್ತಿನ ತನಕ ಸುಖ ದುಃಖದ ಮಾತುಗಳು ನಡೆದವು. ತಾವು ಗುರುವಿನ ಮನೆಯಲ್ಲಿ ಇದ್ದಾಗ್ಗೆ ಹೇಗೆ ನಾನಾಪ್ರಕಾರದ ಪ್ರಸಂಗಗಳನ್ನು ಕಳೆದೆವು, ತಮ್ಮ ಮೇಲೆ ಗುರುಗಳ ಪ್ರೇಮವು ಯಾವ ಪ್ರಕಾರ ಇತ್ತು, ತಾವು ಒಂದೇ ಸ್ಥಳದಲ್ಲಿ ಹೇಗೆ ನಕ್ಕೆವು, ಕೆಲೆತೆವು, ಆಡಿದೆವು, ವಿದ್ಯಾಭ್ಯಾಸ ಮಾಡಿದೆವು ಮುಂತಾದ ಅನೇಕ ಸಂಗತಿಗಳನ್ನು ಕುರಿತು ಮಾತಾಡಿದರು. ಈ ಮಾತುಗಳು ಹೊರ ಟಾಗ್ಗೆ ಇಬ್ಬರ ಕಣ್ಣುಗಳಲ್ಲಿಯೂ ಪ್ರೇಮಾಶ್ರುಗಳು ಉದುರಿದವು. ಈ ಎಲ್ಲ ಮಾತು ಕಥೆಗಳು ಮುಗಿದ ನಂತರ ಕೃಷ್ಣನು ಸುದಾಮನಿಗೆ-“ ನೀನು ನನಗೆ ಕೊಡಲಿಕ್ಕೆ ನಿನ್ನ ಪೆಟ್ಟಿಯ ಗುರುತು ತಂದಿರುವದನ್ನು ನನಗೆ ಕೊಡು ಎಂದು ಕೇಳಿದನು. ಆದರೆ ಇಷ್ಟು ಐಶ್ವರ್ಯಸಂಪನ್ನನಾದ ಕೃಷ್ಣನಿಗೆ ತಾನು ತಂದಿದ್ದ ಮುಷ್ಟಿ ಅವಲಕ್ಕಿಯನ್ನು ಹೇಗೆ ಕೊಡಬೇಕೆಂದು ಸುದಾ ಮನು ನಾಚಿಕೊಂಡು ಸುಮ್ಮನೇ ಇದ್ದನು. ಆಗ ಕೃಷ್ಣನು ಸುದಾಮನ ದೋತರದ ಗಂಟನ್ನು ತಾನೇ ತನ್ನ ಕೈಯಿಂದ ಬಿಚ್ಚಿ ಅದರೊಳಗಿದ್ದ ತುಸು ಅವಲಕ್ಕಿಯನ್ನು ಬಹಳೇ ಪ್ರೇಮದಿಂದ ಮುಕ್ಕಿದನು. ಆ ಅವಲಕ್ಕಿಯು ಅವ ನಿಗೆ ಪಂಚಪಕ್ವಾನ್ನದಕಿಂತ ಹೆಚ್ಚು ರುಚಿದೋರಿದವು. ಇದು ಪ್ರೇಮದ ಪ್ರಭಾವವಲ್ಲದೆ ಇನ್ನೇನು?

ಸುದಾಮನು ಒಂದು ದಿವಸ ಕೃಷ್ಣನ ಹತ್ತರ ಇದ್ದು ಮೂರನೇ ದಿವಸ ಅವನ ನಿರೂಪವನ್ನು ತೆಗೆದುಕೊಂಡು ತನ್ನ ಊರಿಗೆ ಹೋದನು. ಕೃಷ್ಣ ನು ಸುದಾಮನನ್ನು ಕಳುಹಿಸಲಿಕ್ಕೆ ದೂರತನಕ ಹೋಗಿ “ ಇದೇಪ್ರಕಾರ ಮೇಲಿಂದಮೇಲೆ ಬಂದು ಪೆಟ್ಟಿಯನ್ನು ಕೊಡುತ್ತಿರು ” ಎಂದು ಅವನಿಗೆ ಆಗ್ರ ಹದಿಂದ ಹೇಳಿದನು. ಸುದಾಮನು ತಾನು ಮೊದಲು ಬಂದ ಪ್ರಕಾರವೇ ಬರಿಗೈಯಿಂದ ತಿರುಗಿ ಹೋದನು. ಅವನು ಕೃಷ್ಣನ ಹತ್ತರ ತನಗೆ ಸ್ವಲ್ಪಾ ದರೂ ದ್ರವ್ಯವನ್ನು ಕೊಡೆಂದು ಬೇಡಿಕೊಳ್ಳಲಿಲ್ಲ. ಅಥವಾ ಕೃಷ್ಣನಾದರೂ ಅವನಿಗೆ ಈ ದ್ರವ್ಯವನ್ನು ತೆಗೆದುಕೋ ಎಂದು ಕೊಡಲಿಲ್ಲ. ಕೃಷ್ಣನಿಗೆ ಅತ್ಯಂ

ತ ಐಶ್ವರ್ಯವು ಬಂದಾಗ್ಯೂ ಅವನು ತನ್ನ ಮುಂಚಿನ ಪರಿಚಯವನ್ನು ಸ್ಥಿರವಾಗಿಟ್ಟಿರುತ್ತಾನೆಂತಲೂ ಅವನು ತನ್ನಗೂಡ ಒಡಹುಟ್ಟಿದ ಅಣ್ಣಾತಮ್ಮನಕಿಂತಲು ಹೆಚ್ಚು ಪ್ರೇಮದಿಂದ ವರ್ತಿಸಿದನೆಂತಲೂ ಸುದಾಮನಿಗೆ ಬಹಳ ಆನಂದವಾಗಿ ಹೋಯಿತು. ಇಷ್ಟೇ ಅಲ್ಲ, ಕೃಷ್ಣನು ತನಗೆ ದ್ರವ್ಯವನ್ನು ಕೊಡದೆ ಇದ್ದದ್ದು ತನ್ನ ಮೇಲೆ ದೊಡ್ಡ ಉಪಕಾರವಾಯಿತೆಂತಲೂ, ತನಗೆ ದ್ರವ್ಯವು ಸಿಕ್ಕಿದ್ದರೆ ತನಗೆ ದ್ರವ್ಯಮದವು ಬಂದು ತಾನು ತನ್ನ ಕಣ್ಣುಗಳನ್ನೇ ತೆರೆಯುತ್ತಿದ್ದಿಲ್ಲವೆಂತಲೂ ತಿಳಿದುಕೊಂಡು ಸುದಾಮನು ಬಹಳ ಆನಂದಬಟ್ಟನು.

ಈ ಪ್ರಕಾರ ಸುದಾಮನು ತನ್ನ ಮಿತ್ರನ ದರ್ಶನದ ಆನಂದದಲ್ಲಿ ನಿಮಗ್ನನಾಗಿ ತನ್ನ ಊರಿನ ಸಮೀಪಕ್ಕೆ ಹೋದ ತರುವಾಯ ಅವನಿಗೆ ತನ್ನ ಊರಿನ ಸ್ವರೂಪವು ಬದಲಾದಂತೆ ಕಾಣಿಸಿತು. ಅವನ ಊರಲ್ಲಿ ಎಲ್ಲಿ ನೋಡಿದಲ್ಲಿ ಶ್ರೀಮಂತರ ವೈಭವಶಾಲಿ ಮನೆಗಳು ಮತ್ತು ಸುಂದರ ಉದ್ಯಾನಗಳು ದೃಷ್ಟಿಗೆ ಬಿದ್ದವು. ಇದಲ್ಲದೆ ಅವನಿಗೆ ತನ್ನನ್ನು ಸ್ವಾಗತ ಮಾಡಿ ಕರೆದುಕೊಂಡು ಹೋಗುವದಕ್ಕಾಗಿ ಅನೇಕ ಜನ ಸ್ತ್ರೀಪುರುಷರು ಉತ್ತಮೋತ್ತಮ ವಸ್ತ್ರಾಲಂಕಾರಗಳಿಂದ ವಿಭೂಷಿತರಾಗಿ ಬಂದು ನಿಂತುಕೊಂಡಿದ್ದನ್ನು ನೋಡಿ ಸುದಾಮನು ಅತಿಶಯ ಬೆರಗಾಗಿ ಹೋದನು. ಉಡಲಿಕ್ಕೆ ಮೊದಲು ಒಂದು ಗಟ್ಟಿಯಾದ ಸೀರಿಯು ಇಲ್ಲದ ತನ್ನ ಮಡದಿಯು ಈಗ ಜರದ ಸೀರೆಯನ್ನುಟ್ಟುಕೊಂಡು ಜರದ ಶ್ಯಾಲು ಹೊತ್ತುಕೊಂಡಿರುವದನ್ನೂ, ಚಂದ್ರಸೂರ್ಯರು ಕಾಣುವ ತನ್ನ ಮುರುಕು ಮನೆಯು ಇಂದ್ರಭುವನದಂತೆ ಶೋಭಾಯಮಾನವಾಗಿರುವದನ್ನೂ ನೋಡಿ ಇದೇನು ಚಮತ್ಕಾರವೆಂಬುವದು ಅವನಿಗೆ ಎಷ್ಟೋಹೊತ್ತು ಗೊತ್ತಾಗಲಿಲ್ಲ. ಮುಂದೆ ಕೆಲವು ಹೊತ್ತಿನ ಮೇಲೆ ಅವನಿಗೆ ಇದೆಲ್ಲ ಕೃಷ್ಣನ ಪ್ರೇಮಪ್ರಭಾವವೇ ಎಂದು ತಿಳಿದುಬಂತು! ಇಂಥ ಮಿತ್ರಪ್ರೇಮವನ್ನು ನೋಡಿ ಸುದಾಮನಿಗೆ ಎಷ್ಟು ಧನ್ಯತೆಯು ಆಗಿದ್ದೀತೆಂಬುವದನ್ನು ಏನು ಬಣ್ಣಿಸಬೇಕು?

---

## ೪೧. ಅವತಾರ ಸಮಾಪ್ತಿಯು.

ದುಷ್ಟರನ್ನು ಶಿಕ್ಷಿಸುವದಕ್ಕೂ ಶಿಷ್ಟರನ್ನು ಪರಿಪಾಲನ

**ಮಾಡುವದಕ್ಕೂ ಕೃಷ್ಣನು ಯಾವಾಗಲು ಪ್ರಯತ್ನಮಾಡುತ್ತಿದ್ದನು. ಇದಕ್ಕೋಸ್ಕರ ಹಾಗೂ ಅವನ ಪ್ರೇಮಲ ಸ್ವಭಾವದಗೋಸ್ಕರ ಅವನು ಯಾವತ್ತು ಜನರಿಗೆ ಪ್ರಿಯಕರನಾಗಿದ್ದನು.** ಕಂಸ, ಜರಾಸಂಧ ಮೊದಲಾದ ದುಷ್ಟರನ್ನು ಸಂಹಾರಮಾಡುವದು ತನ್ನ ಅವತಾರದ ಉದ್ದಿಶ್ಯವಿದ್ದ ಕಾರಣ ಅದು ಸಿದ್ಧಿಗೆ ಹೋದುದರಿಂದ ಕೃಷ್ಣನ ಮನಸ್ಸಿನಲ್ಲಿ ತನ್ನ ಅವತಾರವನ್ನು ಇನ್ನು ಸಮಾಪ್ತಪಡಿಸಬೇಕೆಂದು ಬಂತು. ಹಾಗೂ ಆ ಪ್ರಕಾರ ಮಾಡಲಿಕ್ಕೆ ಅವನಿಗೆ ದೇವಾಧಿದೇವತೆಗಳಾದರೂ ಸೂಚಿಸಿದರು. ಈ ಕೃಷ್ಣಾವತಾರದ ಸಮಾಪ್ತಿಯ ಬಗ್ಗೆ ಬಹಳ ಚಮತ್ಕಾರದ ಕಥೆಯುಂಟು. ಅದೇನಂದರೆ: —

ಯಾದವರ ಕೆಲವು ಹುಡುಗರು ಪಿಂಡಾರಕ ಕ್ಷೇತ್ರಕ್ಕೆ ಹೋಗಿ ಅಲ್ಲಿ ಆಟವನ್ನು ಆಡುತ್ತಿದ್ದಾಗ್ಗೆ ತಮ್ಮಲ್ಲಿ ಒಬ್ಬನಾದ ಸಾಂಬನೆಂಬ ಹುಡುಗನಿಗೆ ಒಬ್ಬ ಗರ್ಭಿಣಿ ಸ್ತ್ರೀಯ ವೇಷವನ್ನು ಹಾಕಿ ಅವನನ್ನು ಆ ಕ್ಷೇತ್ರದಲ್ಲಿದ್ದ ಒಬ್ಬ ಋಷಿಯ ಹತ್ತರ ಕರೆದುಕೊಂಡು ಹೋಗಿ— " ಈ ಸ್ತ್ರೀಗೆ ಮಗನು ಹುಟ್ಟುವನೋ? ಮಗಳು ಹುಟ್ಟುವಳೋ? " ಎಂದು ಚೇಷ್ಟೆಯಿಂದ ಕೇಳಿದರು. ಆಗ ಆ ಋಷಿಯು ಸಿಟ್ಟಿನಿಂದ— " ಈಕೆಗೆ ಒಂದು ಒನಿಕೆಯು ಹುಟ್ಟುವದು. ಅದು ನಿಮ್ಮೆಲ್ಲರನ್ನು ನಾಶಮಾಡುವದು " ಎಂದು ಹೇಳಿದನು. ಆಮೇಲೆ ಅವರು ಆ ಹುಡುಗನ ಸ್ತ್ರೀ ವೇಷವನ್ನು ತೆಗೆದುಬಿಡುತ್ತಿರಲು ಅವನಿಗೆ ಉಡಿಸಿದ ಸೀರೆಯೊಳಗಿಂದ ಒಂದು ಕಬ್ಬಿಣದ ಒನಿಕೆಯು ಕೆಳಗೆ ಬಿತ್ತು. ಆಗ ಆ ಹುಡುಗರು ಹೆದರಿಕೊಂಡು ಆ ಒನಿಕೆಯನ್ನು ಉಗ್ರಸೇನನ ಮತ್ತು ವಸುದೇವನ ಕಡೆಗೆ ಒಯ್ದು ಕೊಟ್ಟರು. ಅವರು ಆ ಒನಿಕೆಯನ್ನು ಕಲ್ಲಿನ ಮೇಲೆ ತಿಕ್ಕಿ ಸಣ್ಣಗೆ ಮಾಡಿ ಅದರ ಚೂರ್ಣವನ್ನೂ, ಅದರ ತುಣಕನ್ನೂ ಸಮುದ್ರದಲ್ಲಿ ಒಯ್ದು ಚೆಲ್ಲಿರೆಂದು ಆ ಹುಡುಗರಿಗೆ ಹೇಳಿದರು. ಆ ಪ್ರಕಾರ ಆ ಹುಡುಗರು ಮಾಡಿದರು. ಆಗ ಅಲ್ಲಿದ್ದ ಒಂದು ಮೀನವು ಆ ಒನಿಕೆಯ ಒಂದು ಚೂರನ್ನು ನುಂಗಿತು. ಆ ಬಳಿಕ ಆ ಮೀನವು ಒಬ್ಬ ಮೀನಗಾರನ ಬಲಿಯಲ್ಲಿ ಸಿಕ್ಕಿತು. ಆಗ ಅವನು ಆ ಮೀನದ ಹೊಟ್ಟೆಯನ್ನು ಕೊಯ್ದು ಅದರಲ್ಲಿ ತನಗೆ ದೊರಕಿದ ಕಬ್ಬಿಣದ ಚೂರನ್ನು ಒಬ್ಬ ಬೇಡನಿಗೆ ಕೊಟ್ಟನು. ಆ ಬೇ

ಡನು. ಅದನು ತನ್ನ ಬಿಲ್ಲಿನ ಹೆದೆಯಾಗಿ ಉಪಯೋಗ ಮಾಡಹತ್ತಿದ್ದನು.

ಇತ್ತಲಾ ದ್ವಾರಕೆಯಲ್ಲಿ ದುಶ್ಚಿನ್ಹಗಳು ತಲೆದೋರಿದವು. ಆಗ ಕೃಷ್ಣನು ದ್ವಾರಕೆಯಲ್ಲಿಯ ಹೆಂಗಸರ ಮತ್ತು ಮುದುಕರ ಹೊರತಾಗಿ ಉಳಿದ ಯಾವತ್ತು ಯಾದವರನ್ನು ಶಂಖೋದ್ಧಾರ ತೀರ್ಥಕ್ಕೆ ಕಳುಹಿಸಿಕೊಟ್ಟು ತಾನು ಬಲರಾಮನೊಡನೆ ಪ್ರಭಾಸತೀರ್ಥಕ್ಕೆ ಹೊರಟುಹೋದನು. ಶಂಖೋದ್ಧಾರದಲ್ಲಿ ಇರುತ್ತಿದ್ದ ಯಾದವರಿಗೆ ಒಂದು ದಿವಸ ಮದ್ಯಪಾನ ಮಾಡುವ ಬುದ್ಧಿಯು ಉತ್ಪನ್ನವಾಗಿ ಅವರು ಯಥೇಚ್ಛವಾಗಿ ಮದ್ಯಪಾನ ಮಾಡಿದರು. ಆ ಮದ್ಯದ ಗುಂಗಿನಲ್ಲಿ ಅವರೆಲ್ಲರು ತಮ್ಮ ತಮ್ಮೊಳಗೆ ಕಲಹ ಮಾಡಿ ಒಬ್ಬರನ್ನು ಮತ್ತೊಬ್ಬರು ಕೊಂದರು. ಹಾಗೂ ಅವರ ಇಷ್ಟಮಿತ್ರರು ಇದೇ ಪ್ರಕಾರ ಆವೇಶದಿಂದ ತಮ್ಮೊಳಗೆ ಜಗಳಾಡಿದರು. ಅವರ ಶಸ್ತ್ರಗಳೂ ಬಾಣಗಳೂ ಧನುಷ್ಯಗಳೂ ತೀರಿಹೋದ ಬಳಿಕ ಆ ಯಾದವವೀರರು ಹುಲ್ಲು ಕಡ್ಡಿಗಳನ್ನು ಕಿತ್ತು ಒಬ್ಬರಿಗೊಬ್ಬರು ಅವುಗಳನ್ನು ತಮ್ಮ ತಮ್ಮ ಮೇಲೆ ಒಗೆದಾಡಿದರು. ಬಲರಾಮ ಮತ್ತು ಕೃಷ್ಣ ಈ ಇಬ್ಬರೂ ಅವರಿಗೆ ಬುದ್ಧೀ ಹೇಳಲಿಕ್ಕೆ ಹೋಗಲು ಯಾರೂ ಅವರ ಮಾತನ್ನು ಲಾಲಿಸಲಿಲ್ಲ. ಈ ಪ್ರಕಾರ ಒಂದೆರಡು ಪ್ರಹರಗಳಲ್ಲಿ ಯಾದವರು ನಾಶವನ್ನು ಹೊಂದಿದರು. ಆಗ ಬಲರಾಮನು ಇನ್ನು ಮೇಲೆ ತಾನು ಜೀವಂತವಿರುವದರಿಂದ ಉಪಯೋಗವಿಲ್ಲೆಂದು ತಿಳಿದು ಸಮುದ್ರದಲ್ಲಿ ಹಾರಿಕೊಂಡು ಸತ್ತನು. ಕೃಷ್ಣನು ಒಂದು ಅರಳಿಯ ಗಿಡದ ಕೆಳಗೆ ತನ್ನ ಬಲಗಡೆಯ ತೊಡೆಯ ಮೇಲೆ ಎಡಗಡೆಯ ಕಾಲು ಇಟ್ಟುಕೊಂಡು ವಿಚಾರಮಾಡುತ್ತ ನಿಂತಿರಲು, ಮೇಲೆ ಹೇಳಿದ ಬೇಡನು ಕೃಷ್ಣನನ್ನು ಚಿಗರಿಯೆಂದು ತಿಳಿದುಕೊಂಡು ಅವನ ಮೇಲೆ ಗುರಿಯನ್ನು ಇಟ್ಟು ಬಾಣವನ್ನು ಬಿಡಲಾಗಿ ಅದು ಕೃಷ್ಣನ ಎಡಗಾಲಿನ ಹಿಂಬಡಕ್ಕೆ ಹತ್ತಿತು. ಇಷ್ಟರಲ್ಲಿ ಕೃಷ್ಣನ ಸಾರಥಿಯಾದ ದಾರುಕನು ಕೃಷ್ಣನ ಶೋಧ ಮಾಡುತ್ತ ಅಲ್ಲಿಗೆ ಬರಲು, ಕೃಷ್ಣನು ಅವನಿಗೆ— “ನಮ್ಮ ಯಾವತ್ತು ಯಾದವರು ಸತ್ತರು. ಅಣ್ಣನಾದ ಬಲರಾಮನೂ ಸತ್ತನು. ನಾನಾದರೂ ಸಾಯುವ ಮಾರ್ಗದಲ್ಲಿರುತ್ತೇನೆ. ಈ ವರ್ತಮಾನವನ್ನು ಉಗ್ರಸೇನನಿಗೂ ವಸುದೇವನಿಗೂ ತಿಳಿಸು. ದ್ವಾರಕೆಯು ತೀವ್ರವಾಗಿ ಸಮುದ್ರದಲ್ಲಿ ಮುಳುಗಿಹೋಗ

ತಕ್ಕದ್ದಿರುವದರಿಂದ ಬೇಗನೆ ಅದನ್ನು ಬಿಟ್ಟುಹೋಗಲು ಅವರಿಗೆ ತಿಳಿಸು. ಹಾಗೂ ನನ್ನ ತಾಯಿತಂದೆಗಳನ್ನೂ ಹೆಂಡರು ಮಕ್ಕಳನ್ನೂ ಇಂದ್ರಪ್ರಸ್ಥ ನಗರಕ್ಕೆ ಕರೆದುಕೊಂಡು ಹೋಗಲು ಅರ್ಜುನನಿಗೆ ಹೇಳು" ಎಂದು ಆ ದಾರುಕನ ಸಂಗಡ ನಿರೂಪವನ್ನು ಕೊಟ್ಟು ಕಳುಹಿಸಿದನು. ಈ ಪ್ರಕಾರ ಕೃಷ್ಣನು ಆ ಸಾರಥಿಯನ್ನು ಅಲ್ಲಿಂದ ಕಳುಹಿಸಿದ ಬಳಿಕ ಸಮಾಧಿಸ್ಥನಾದನು. ಈ ವರ್ತಮಾನವು ದಾರುಕನ ಬಾಯಿಂದ ಉಗ್ರಸೇನ, ವಸುದೇವ ಮೊದಲಾದವರಿಗೆ ತಿಳಿದ ಕೂಡಲೆ ಅವರೆಲ್ಲರು ಗೋಳಿಟ್ಟರು. ಬಹಳವೇನು? ಇಡೀ ದ್ವಾರಕೆಯು ಗೋಳಿಟ್ಟಿತು! ಮುಂದೆ ದ್ವಾರಕೆಯಲ್ಲಿ ಜೀವದಿಂದ ಉಳಿದಿದ್ದ ಯಾದವರು ತೀವ್ರವಾಗಿಯೇ ದ್ವಾರಕೆಯಿಂದ ಹೊರಟು ಪ್ರಭಾಸಕ್ಕೆ ಹೋದರು. ವಸುದೇವ, ದೇವಕಿ ಮತ್ತು ರೋಹಿಣಿ ಈ ಮೂವ್ವರು ಶೋಕಮಾಡುತ್ತ ಸತ್ತುಹೋದರು. ಕೃಷ್ಣನ ಮತ್ತು ಪ್ರದ್ಯುಮ್ನನ ಮುಖ್ಯ ಮುಖ್ಯ ಹೆಂಡಂದಿರು ಸಹಗಮನವನ್ನು ಮಾಡಿದರು. ಈ ವರ್ತಮಾನವು ಅರ್ಜುನನಿಗೆ ಗೊತ್ತಾದಕೂಡಲೆ ಅವನು ಅವಸರದಿಂದ ಪ್ರಭಾಸಕ್ಕೆ ಬಂದು, ಕೃಷ್ಣ ಮೊದಲಾದವರ ಮರಣದ ಸಲುವಾಗಿ ಬಹಳ ಶೋಕ ಮಾಡಿ, ಕೃಷ್ಣನ ಉಳಿದ ಹೆಂಡಂದಿರನ್ನೂ ಹುಡುಗರನ್ನೂ ತನ್ನ ಸಂಗಡ ಇಂದ್ರಪ್ರಸ್ಥ ನಗರಕ್ಕೆ ಕರೆದುಕೊಂಡು ಹೋದನು. ಇತ್ತಲಾ ದ್ವಾರಕೆಯು ಸಮುದ್ರದಲ್ಲಿ ಮುಳುಗಿಹೋಯಿತು. ಈ ಪ್ರಕಾರ ಯಾವತ್ತು ಯಾದವ ಕುಲದ ನಾಶವಾಯಿತು.

**ಸಂಪೂರ್ಣ.**

